ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 5 ಸಂಚಿಕೆ 41

ಅಕ್ಟೋಬರ್ 09, 2011


5/-

ಪುಟ 16

Blog : janashakthi.wordpress.com e-mail : js_weekly@yahoo.com







ಬಿಜೆಪಿ ಸರಕಾರ : ದುಡಿವ ವರ್ಗಕ್ಕೆ ದ್ರೋಹವೆಸಗಿದ ಈ ಮೂರು ವರ್ಷಗಳು



ತೆಲಂಗಾಣ ಉದ್ವಿಗ್ನತೆ : ಅವಕಾಶವಾದಿ ರಾಜಕಾರಣದ ಫಲ



ಲಿಬಿಯಾ : ತೈಲ ಹಂಚಿಕೆಯ ನ್ಯಾಟೋ ಸಂಚು

ದುಡಿವವರ ದಮನಿಸುವ 'ವೋಲ್ವೋ : ತಿರುಗಿಬಿದ್ದ ಕಾರ್ಮಿಕರು






ಕೊಪ್ಪಳ : ಗೆದ್ದವರಾರು ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಸವದತ್ತಿಯ ಕಾಮ್ರೆಡ್ ಶಂಭುಲಿಂಗ ಸೊನ್ನದ್ ಇನ್ನಿಲ್ಲ

ಬೆಳಗಾವಿ ಜಿಲ್ಲೆ ಸವದತ್ತಿಯ ಸಿಪಿಐ(ಎಂ) ಶಾಖೆಯ ಸದಸ್ಯರಾಗಿದ್ದ ಸಂಗಾತಿ ಶಂಭುಲಿಂಗ **ಸೊನ್ನದ್ ಅವರು ಇದೇ ಸೆಪ್ಟೆಂಬರ್ 20 ರಂದು ಬೆಳಗಾವಿಯ** ಕೆ.ಎಲ್.ಇ. ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು.



1933ರಲ್ಲಿ ಜನಿಸಿದ ಶಂಭುಲಿಂಗ ಈಶ್ವರಪ್ಪ ಸೊನ್ನದ್ ಅವರು ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಕಾರ್ಡ್ ಹೋಲ್ಡರ್ ಸದಸ್ಯರಾಗಿದ್ದರು. 1964ರಲ್ಲಿ ಪಕ್ಷ ವಿಭಜನೆಯಾದ ನಂತರ ಕೆಲ ಕಾಲ ಅವರು ತಟಸ್ಥರಾಗಿದ್ದು, ಅನಂತರ ಸಿಪಿಐ(ಎಂ) ಸದಸ್ಯರಾದರು. ರೈತ ಸಂಘಟನೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದ ಅವರು 1980ರಲ್ಲಿ ಬುಗಿಲೆದ್ದ ಮಲಪ್ರಭಾ ರೈತ ಬಂಡಾಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 1987ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಕರೆ ನೀಡಿದ್ದ ಭೂ ಅತಿಕ್ರಮಣ ಚಳುವಳಿಯಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದ್ದರು. ನವದೆಹಲಿಯ ಎಕೆಜಿ ಭವನ ಮತ್ತು ಬೆಂಗಳೂರಿನ ಇಎಂಎಸ್ ಭವನ ನಿರ್ಮಾಣಕ್ಕೆ ಉದಾರ ಧನ ಸಹಾಯ ನೀಡಿದ್ದರು. "ಐಕ್ಯರಂಗ" ವಾರಪತ್ರಿಕೆಯ ಆಜೀವ ಸದಸ್ಯತ್ವವನ್ನು ಪಡೆದಿದ್ದರು. 'ಜನಶಕ್ತಿ'ಯ ನಿರಂತರ ಓದುಗರಾಗಿದ್ದರು. ಪಕ್ಷದ ಹಿರಿಯ ಮುಖಂಡರಾದ ಕಾಮ್ರೆಡ್ ಎಸ್. ಹೆಚ್. ಕಪ್ಪಣ್ಣನವರ್ ಅವರ ನಿರಂತರ ಒಡನಾಟದಲ್ಲಿದ್ದ ಕಾಮ್ರೆಡ್ ಸೊನ್ನದ್ ಅವರು ಕಮ್ಯೂನಿಸ್ಟ್ ವಿಚಾರಧಾರೆಯ ಪ್ರತಿಪಾದಕರಾಗಿದ್ದರು.

ಅಂದು, ಕಾಮ್ರೆಡ್ ಸೊನ್ನದ್ ಅವರ ಅಂತಿಮ ಯಾತ್ರೆಯಲ್ಲಿ ಪಕ್ಷದ ಪ್ರಮುಖರಾದ ಕಾಮ್ರೆಡ್ ಎಸ್.ಎಚ್. ಕಪ್ಪಣ್ಣನವರ, ವಿ.ಪಿ.ಕುಲಕರ್ಣಿ, ಗೈಬು ಜೈನೆಖಾನ್, ನಾಗಪ್ಪ ಸಂಗೊಳ್ಳಿ, ದಾದಾ ಬೆಣ್ಣೆ, ಎಲ್.ಎಸ್. ನಾಯಕ್, ಶ್ರೀಕಾಂತ ಹಟ್ಟಿಹೊಳಿ, ಎಫ್.ಎಂ.ನದಾಫ್, ಈರಣ್ಣ ಟೋಪಕರ್, ಬಾಳು ಈಜಂತಕರ್ ಅವರು ಭಾಗವಹಿಸಿದ್ದರು. ಪಕ್ಷದ ಧ್ವಜವನ್ನು ಹೊದಿಸಲಾದ ಕಾಮ್ರೆಡ್ ಸೊನ್ನದ್ ಅವರ ಶವಯಾತ್ರೆ ನಗರದ ಪ್ರಮುಖ ಬೀದಿಗಳಲ್ಲಿ ಹಾದು ಹೋಗುತ್ತಿರುವಾಗ "ಕಾಮ್ರೆಡ್ ಸೊನ್ನದ್ ಲಾಲ್‌ಸಲಾಂ" ಘೋಷಣೆ ಪ್ರತಿಧ್ವನಿಸುತ್ತಿತ್ತು.

ವರದಿ: ಎಲ್.ಎಸ್. ನಾಯಕ್

ವಿಶೇಷ ಸಂಚಿಕೆಗೆ ಜಾಹಿರಾತು ಕಳುಹಿಸಿ

ಜನಶಕ್ತಿ ವಾರಪತ್ರಿಕೆಯ ವಿಶೇಷ ಸಂಚಿಕೆ ಸಿದ್ದಗೊಳ್ಳುತ್ತಿದ್ದು, ಜಾಹಿರಾತುಗಳನ್ನು ನೀಡುವವರು ತುರ್ತಾಗಿ ಕಳುಹಿಸಿಕೊಡಬೇಕು. ಜಾಹಿರಾತು ಅಕ್ಟೋಬರ್ 10 ಒಳಗೆ ನಮಗೆ ತಲುಪಬೇಕು.

- ಸಂ

ತಿದ್ದುಪಡಿ

'ಜನಶಕ್ತಿ'ಯ ಕಳೆದ ಸಂಚಿಕೆಯ ಮುಖಪುಟದಲ್ಲಿ ಸಂಚಿಕೆಯ ಸಂಖ್ಯೆ 40 ಎಂದಿರಬೇಕಾದ ಕಡೆ 39 ಎಂದು ತಪ್ಪಾಗಿ ಮುದ್ರಣಗೊಂಡಿದೆ.


ಇದೇ ಸಂಚಿಕೆಯ ಪುಟ 9ರಲ್ಲಿ 'ಕಂಬಾರರಿಗೆ ಜ್ಞಾನಪೀಠ' ಲೇಖನದಲ್ಲಿ ಕಂಬಾರರ ಕೃತಿ 'ಶಿಖರ ಸೂರ್ಯ' ಎಂದಿರಬೇಕಾದ ಕಡೆ 'ಸೂರ್ಯ ಶಿಕಾರಿ' ಎಂದು ಮುದ್ರಣಗೊಂಡಿದೆ.

ಅದೇ ರೀತಿ ಸಂಚಿಕೆ-38ರಲ್ಲಿ 'ಹೊಸ ಕುಲುಮೆಯಲ್ಲಿ ಮಾರ್ಕ್ಸ್ ಚಿಂತನೆ' ಲೇಖನದ ಲೇಖಕರ ಹೆಸರು ಎಸ್.ಆರ್. ವಿಜಯಶಂಕರ್ ಎಂದಿರಬೇಕಾದ ಕಡೆ ಎಸ್.ಆರ್.ವಿಜಯ ಕುಮಾರ್ ಎಂದು ತಪ್ಪಾಗಿ ಮುದ್ರಿತಗೊಂಡಿದೆ. ಆಗಿರುವ ತಪ್ಪುಗಳಿಗಾಗಿ ವಿಷಾದಿಸುತ್ತೇವೆ.

- ಸಂ.

ಸಜ್ಜುಗೊಳ್ಳುತ್ತಿರುವ ಜನಶಕ್ತಿ ಕಾರ್ಯಾಲಯ

ಮಹಾಲಕ್ಷ್ಮೀ ಬಡಾವಣೆಯ ಇಎಂಎಸ್ ಭವನದಲ್ಲಿನ ಜನಶಕ್ತಿ ಕಾರ್ಯಾಲಯ ಪೀಠೋಪಕರಣಗಳೊಂದಿಗೆ ಸಜ್ಜುಗೊಳ್ಳುತ್ತಿದೆ. ಸಂದರ್ಭದ ಸವಾಲುಗಳಿಗೆ ಸೂಕ್ತವಾದ ರೀತಿಯಲ್ಲಿ ಪತ್ರಿಕೆಯ ಕಾರ್ಯಾಲಯವನ್ನು ಸಿದ್ಧಗೊಳಿಸಬೇಕಾದ ಅಗತ್ಯ ಈಗಾಗಲೇ ಜನಶಕ್ತಿಯಲ್ಲಿ ಓದಿದ್ದೀರಿ.



ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು 'ಜನಶಕ್ತಿ' ಹಿತೈಷಿಗಳು, ಓದುಗರಿಂದ ಮತ್ತಷ್ಟು ಸಹಾಯ ಅಗತ್ಯವಾಗಿದೆ. ಸಹಾಯ ಹಸ್ತ ಚಾಚುತ್ತೀರೆಂಬ ನಿರೀಕ್ಷೆಯೊಂದಿಗೆ;

ಸೂಚನೆ :

ತಾವು ತಮ್ಮ ತಮ್ಮ ಊರುಗಳಿಂದಲೇ ನೇರವಾಗಿ ಜನಶಕ್ತಿಯ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಬಹುದು. ಖಾತೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಗಮನಿಸುವುದು. ಜನಶಕ್ತಿ ಕನ್ನಡ ವಾರ ಪತ್ರಿಕೆ - ಅಕೌಂಟ್ ನಂ: 64020446625 ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಂಪಂಗಿ ರಾಮನಗರ ಶಾಖೆ, ಬೆಂಗಳೂರು-560 027.

ಬ್ಯಾಂಕ್ ಖಾತೆಗೆ ಹಣ ತುಂಬಿದಲ್ಲಿ, ಅಥವಾ ಕಛೇರಿಗೆ ಡಿ.ಡಿ. ಅಥವಾ ಎಂ.ಓ. ಕಳಿಸಿದಲ್ಲಿ ತಪ್ಪದೇ ಈ ಕೆಳಕಂಡ ದೂರವಾಣಿ ನಂಬರುಗಳಿಗೆ ಫೋನ್ ಮಾಡಿ ತಿಳಿಸುವುದು.

ಆರ್.ರಾಮಕೃಷ್ಣ - 9448505789
ಎಚ್.ಎಂ.ನಾಗರಾಜ್ - 9482220931

ಜನಶಕ್ತಿ ನೂತನ ಕಾರ್ಯಾಲಯದ ಸಂಪರ್ಕ ವಿಳಾಸ:

'ಜನಶಕ್ತಿ ಕನ್ನಡ ವಾರಪತ್ರಿಕೆ' ಕಛೇರಿ, ಇ.ಎಂ.ಎಸ್. ಭವನ, ನಂ.37/ಎ, 8ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಸಮೀಪ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560 086

-ಸಂಪಾದಕರು

ಸಂಪಾದಕೀಯ

ವಿದ್ಯುತ್ ಕೊರತೆ: ಸರ್ಕಾರದ್ದೇ ಹೊಣೆಗಾರಿಕೆ

ಕರ್ನಾಟಕದಲ್ಲೀಗ ವಿದ್ಯುತ್ ಕ್ಷಾಮ ಮತ್ತೊಮ್ಮೆ ತಲೆದೋರಿದೆ. ದಿನದ ನಾಲ್ಕಾರು ಗಂಟೆಗಳ ಲೋಡ್‌ಶೆಡ್ಡಿಂಗ್‌ಗೆ ನಗರ-ಗ್ರಾಮಾಂತರ ಪ್ರದೇಶಗಳೂ ಈಡಾಗಿವೆ. ಈಗ ತಲೆದೋರಿರುವ ವಿದ್ಯುತ್ ಕೊರತೆಯನ್ನು ಆದಷ್ಟು ಶೀಘ್ರ ನೀಗಿಸುವುದಾಗಿ ಸರ್ಕಾರ ಹೇಳುತ್ತಿದೆಯಾದರೂ ಈ ಬರದಿಂದ ರಾಜ್ಯವಿನ್ನೂ ಮುಕ್ತವಾಗಿಲ್ಲ ಎಂಬುದನ್ನೇ ಸಾರುತ್ತಿದೆ.

ರಾಜ್ಯದಲ್ಲಿ ಪ್ರಸಕ್ತವಾಗಿ 160 ದಶಲಕ್ಷ ಯೂನಿಟ್ ವಿದ್ಯುತ್‌ನ ಬಳಕೆಯಿದೆ. ಅದರೆ ಉತ್ಪಾದನೆ ಮಾತ್ರ 140 ದ.ಲ. ಯೂನಿಟ್ ಮಾತ್ರ, ಅಂದರೆ ಸರ್ಕಾರದ ಹೇಳಿಕೆಯಂತೆಯೇ ಕನಿಷ್ಠ 2000 ಮೆ.ವಾ. ವಿದ್ಯುತ್ತಿನ ಕೊರತೆಯಿದೆ. ಇಂತಹ ಸನ್ನಿವೇಶ ಕರ್ನಾಟಕಕ್ಕೆ ಹೊಸದೇನಲ್ಲ. ಪ್ರತಿವರ್ಷವೂ ಈ ಬಿಕ್ಕಟ್ಟು ಸೃಷ್ಟಿಯಾಗುತ್ತಿದ್ದರೂ ಅದರ ಶಾಶ್ವತ ಪರಿಹಾರಕ್ಕೆ ಹಿಂದಿನಿಂದಲೂ ಸರ್ಕಾರಗಳು ಗಂಭೀರ ಯತ್ನವನ್ನೇ ಮಾಡಿಲ್ಲ. ಈಗಲೂ 2008 ರಿಂದಲೂ ಕೊರತೆ, ಅದನ್ನು ನೀಗಲು ಹೊಸ ಉತ್ಪಾದನಾ ಕೇಂದ್ರಗಳ ಯೋಜನೆ ಪ್ರಕಟಿಸಲಾಗಿದ್ದರೂ ಆ ದೆಶೆಯಲ್ಲಿ ಕಿಂಚಿತ್ತೂ ಪ್ರಗತಿಯಿಲ್ಲವಾಗಿರುವುದು ಸರ್ಕಾರದ ದಿವ್ಯ ನಿರ್ಲಕ್ಷ್ಯವನ್ನೇ ತೋರಿಸುತ್ತದೆ.

ಪ್ರಸಕ್ತವಾಗಿ ಪ್ರತ್ಯೇಕ ತೆಲಂಗಾಣ ರಾಜ್ಯದ ಬೇಡಿಕೆಗಾಗಿ ಆಂಧ್ರದಲ್ಲಿ ನಡೆದಿರುವ ಚಳುವಳಿಯ ಕಾರಣ ಕಲ್ಲಿದ್ದಲು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವುದು ಒಂದು ಕಾರಣವೆನ್ನಲಾಗುತ್ತಿದೆ. ಆದರೆ ಇಂತಹ ಸ್ಥಿತಿಯು ಎದುರಾಗಬಹುದಾದ ಸೂಚನೆಗಳು ಇದ್ದಾಗ್ಯೂ ಅದಕ್ಕೆ ತಕ್ಕಂತೆ ಇನ್ನಷ್ಟು ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳ ಬಹುದಿತ್ತು. ಇದು ಒಂದು ಕಡೆಗಾದರೆ ಈಗಲೂ ರಾಜ್ಯದಲ್ಲಿ ಸಾಧ್ಯತೆ ಇರುವ ಇನ್ನಷ್ಟು ಜಲ ವಿದ್ಯುತ್ ಉತ್ಪಾದನೆಗೆ ಮತ್ತು ಥರ್ಮಲ್ ಮುಂತಾದ ವಿಧಾನಗಳ ಮೂಲಕ ಉತ್ಪಾದಿಸಲು ಸರ್ಕಾರದ ಗಮನವೇ ಇಲ್ಲದಿರುವುದು ವಿದ್ಯುತ್ ಬರಕ್ಕೆ ಶಾಶ್ವತ ಪರಿಹಾರ ರೂಪಿಸಲು ಸಾಧ್ಯವಾಗದೇ ಸದಾ ಅತಂತ್ರ ಸ್ಥಿತಿಯಲ್ಲಿರುವಂತಾಗಿದೆ.

ಹಾಗೆ ನೋಡಿದರೆ ಇಲ್ಲಿಯೇ ಲಭ್ಯವಿರುವ ಸಂಪನ್ಮೂಲ ಬಳಸಿ ವಿದ್ಯುತ್ ಉತ್ಪಾದಿಸಲು ಸರ್ಕಾರ ಏನೆಂದೂ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಉದಾರೀಕರಣ, ಖಾಸಗೀಕರಣದ ಪ್ರಕ್ರಿಯೆಯ ಭಾಗವಾಗಿ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಸರ್ಕಾರ ಸಿದ್ಧರಿಲ್ಲ. ಬದಲಾಗಿ ಖಾಸಗಿ ಕಂಪನಿಗಳಿಂದ ದುಬಾರಿ ದರದಲ್ಲಿ ವಿದ್ಯುತ್ ಖರೀದಿಗೆ ಪ್ರತಿಬಾರಿಯೂ ಮುಂದಾಗುತ್ತಿದೆ. ಈಗಲೂ ಹೊರ ರಾಜ್ಯಗಳಿಂದ, ಖಾಸಗಿ ಕಂಪನಿಗಳಿಂದ ಖರೀದಿಯ ಮಾತನ್ನಾಡುತ್ತಿರುವುದು ಅದರಲ್ಲಿ ಕಂಪನಿಗಳಿಗೆ, ಆಳುವವರಿಗೆ ಯಥೇಚ್ಛ ಹಣ ವ್ಯವಹಾರ ಇರುವುದನ್ನು ಅಲ್ಲಗೆಳೆಯುವಂತಿಲ್ಲ.

ಈ ಕೊರತೆಗೆ ಇನ್ನೊಂದು ಕಾರಣವೆನ್ನಲಾಗುತ್ತಿರುವ ರಾಯಚೂರು ಥರ್ಮಲ್ ವಿದ್ಯುತ್ ಘಟಕದಲ್ಲಿ ಪದೇ ಪದೇ ತಲೆದೋರುವ ದುರಸ್ತಿ. ಅಲ್ಲಿನ ಎರಡು ಘಟಕಗಳನ್ನು ಬದಲಾಯಿಸಬೇಕೆಂಬ ಪ್ರಸ್ತಾಪವಿದ್ದರೂ ಅದರತ್ತ ಕ್ರಮಗಳೇ ಇಲ್ಲವಾಗಿದೆ. ಇಂತಹ ಘಟಕಗಳ ನಿರ್ವಹಣೆಯಲ್ಲಿ ಅಸಮರ್ಥತೆ, ನಿರಾಸಕ್ತಿ ಎದ್ದು ಕಾಣುತ್ತಿದೆ. ಮೇಲಾಗಿ ವಿದ್ಯುತ್ ಕಳವು ಶೇ.22 ರಷ್ಟಿದ್ದರೂ ಅದನ್ನು ತಡೆಯಲು ಕಠಿಣ ಕ್ರಮಗಳೇ ಇಲ್ಲ. ಇದು ಕೈಗಾರಿಕೆಗಳಿಗೆ ಪೂರೈಕೆಯಾಗಿರುವ ಹೈ ಟೆನ್‌ಷನ್ ಲೈನಿಗಳಲ್ಲೇ ಅಧಿಕವೆಂಬುದು ಭ್ರಷ್ಟಾಚಾರದ ಹಾದಿಗಳನ್ನು ತೋರಿಸುತ್ತದೆ.


ಈ ಎಲ್ಲಾ ಹಿನ್ನಲೆಯಲ್ಲಿ ಸರ್ಕಾರ ಅತೀ ದುಬಾರಿ ಬೆಲೆಗೆ ವಿದ್ಯುತ್ ಖರೀದಿಸಲು ಮುಂದಾಗಿದೆ. ಈ ಸ್ಥಿತಿಯಿಂದಾಗಿ ಈಗಾಗಲೇ ಬೆಲೆ ಏರಿಕೆಯಂತಹ ಸಮಸ್ಯೆಯಿಂದ ತತ್ತರಿಸುತ್ತಿರುವ ಜನತೆಯ ಬೆನ್ನಮೇಲೆ ಬರೆ ಎಳೆಯಲು ಸರ್ಕಾರ ಸಿದ್ಧವಾಗಿದೆ. ಇದು ಕೂಡದು.

ಜನರನ್ನು ಕಷ್ಟಕ್ಕೆ ತಳ್ಳಿ, ಪರಿಸ್ಥಿತಿಯ ಆರ್ಥಿಕ ದುರ್ಲಾಭ ಹೊಡೆಯುವುದನ್ನು ಈಗಲಾದರೂ ಬಿಟ್ಟು ರಾಜ್ಯವನ್ನು ವಿದ್ಯುತ್ ಕೊರತೆಯಿಂದ ಪಾರು ಮಾಡಲು ಕ್ರಮವಹಿಸಬೇಕು. ಪ್ರಕಟಿತ ಯೋಜನೆಗಳು ತ್ವರಿತವಾಗಿ ಮುಗಿಯಬೇಕು. ಬದಲಾಗಿ ಹಿಂದೆ ಯಡಿಯೂರಪ್ಪ, ಈಗ ಸದಾನಂದಗೌಡ, ಕರಂದ್ಲಾಜೆಯವರು ದೊಡ್ಡ ಗಂಟಲಲ್ಲಿ ಬೇರೊಬ್ಬರನ್ನು ದೂಷಾಪರೋಪಣೆ ಮಾಡುವುದು ವಿದ್ಯುತ್‌ನ್ನು ತರುವುದಿಲ್ಲ ಎಂಬುದನ್ನು ನೆನಪಿಡಬೇಕು. ಈಗಲಾದರೂ ಮೂಲಭೂತವಾದ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಲಿ.

ಕೊಪ್ಪಳ: ಗೆದ್ದಿದ್ದಾರು? ಹಣವೇ? ಜಾತಿಯೇ? ಅಭಿವೃದ್ಧಿ ಹಗರಣಗಳೇ?

ಕೊಪ್ಪಳದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದೆ. ಕಾಂಗ್ರೆಸ್ ಎರಡನೆಯ, ಜೆಡಿ(ಎಸ್) ಮೂರನೇ ಸ್ಥಾನದಲ್ಲಿವೆ. 'ಆಪರೇಷನ್ ಕಮಲ'ವೆಂಬ ಪಕ್ಷಾಂತರ ದಿಂದಾಗಿ ನಡೆದ ಚುನಾವಣೆಯಲ್ಲಿ ಜೆಡಿ(ಎಸ್)ನಲ್ಲಿದ್ದ ಹಿಂದಿನ ಶಾಸಕ ಕರಡಿ ಸಂಗಣ್ಣ ಮತ್ತೆ ಗೆದ್ದಿದ್ದಾರೆ. ಇಲ್ಲಿ ಬಿಜೆಪಿಯ ಗೆಲುವೇ ಪ್ರಧಾನ ಶಕ್ತಿ ಎನ್ನುವುದಕ್ಕಿಂತಲೂ ಕರಡಿ ಸಂಗಣ್ಣನವರ ವೈಯಕ್ತಿಕ ಪ್ರಭಾವ ಪ್ರಮುಖ ಎಂಬ ಅಂಶ ಎನ್ನುವುದನ್ನು ಮರೆಮಾಡು ವಂತಿಲ್ಲ.

ಗೆಲುವಿನ ಹಿಂದೆ




ಜೊತೆಗೆ ವಿಶೇಷವಾಗಿ ಯಡಿಯೂರಪ್ಪ, ಸದಾನಂದ ಗೌಡರು ಈ ಚುನಾವಣೆಯನ್ನು ಬಹಳ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ತೆಗೆದುಕೊಂಡಿದ್ದರು. ಈಗಾಗಲೇ ಹಲವಾರು ಹಗರಣ ಗಳಿಂದಾಗಿ ನ್ಯಾಯಾಲಯದ ಮೆಟ್ಟಿಲೇರಿಳಿಯುತ್ತಿರುವ, ಯಾವಾಗಲೂ ಬಂಧನದ ಭೀತಿಯಲ್ಲಿರುವ ಯಡಿಯೂರಪ್ಪನವರಿಗೆ 'ಕರಡಿ'ಯವರ ಗೆಲುವು ಒಂದಿಷ್ಟು ಹೆಗ್ಗಳಿಕೆ ಹೇಳಿಕೊಳ್ಳಲು ಜೀವದಾನ ನೀಡುವುದೆಂಬ ನಿರೀಕ್ಷೆ ಯಲ್ಲಿದ್ದರು. ಹೀಗಾಗಿಯೇ ಜೆಡಿ(ಎಸ್) ನಿಂದ ಅಪಹರಿಸಿದ ಬಳಿಕ ಕರಡಿಯನ್ನು ಸಕ್ರಿಯವಾಗಿ ಬೆಂಬಲಿಸುವ ಮೂಲಕ 'ಲಿಂಗಾಯತ' ನಾಯಕನೆಂಬ ಪಟ್ಟವನ್ನು ಉಳಿಸಿಕೊಳ್ಳಲು ಹೆಣಗಲಾಗಿತ್ತು. ಹೀಗಾಗಿಯೇ ಇಡೀ ಚುನಾವಣೆಯ ಜವಾಬ್ದಾರಿಯನ್ನು ಯಡಿಯೂರಪ್ಪ ಮತ್ತವರ ಗುಂಪು ಹೆಗಲಿಗೆ ಹಾಕಿಕೊಂಡಿತ್ತು. ಯಡಿಯೂರಪ್ಪನವರ ವಿರೋಧಿ ಗುಂಪು (ಅನಂತ್, ಶೆಟ್ಟರ್..) ಹೇಗಾದರೂ ಬಿಜೆಪಿಯ(ಯಡ್ಡಿಯ) ಅಭ್ಯರ್ಥಿ ಸೋತರೆ ಸಾಕೆಂದು ಹಾರೈಸುತ್ತಾ ಅದಕ್ಕಾಗಿ ಕೆಲಸ ಮಾಡಿತ್ತು. ಕರಡಿ ಗೆಲುವಿಗಾಗಿ ಚುನಾವಣೆಯಲ್ಲಿ ಅವರು ಹರಿಸಿದ ಹಣ, ಜಾತಿಯ ದುರ್ಬಳಕೆ ಆಡಳಿತ ಯಂತ್ರದ ದುರುಪಯೋಗ ಚುನಾವಣಾ ಆಯೋಗದ ಎದುರೇ ಎಗ್ಗಿಲ್ಲದೇ ನಡೆಯಿತು. ಇದು ಅಕ್ರಮಗಳ ಗೆಲುವೂ ಕೂಡ.

ಇದೆಂಥ ಅಭಿವೃದ್ಧಿ ರಾಜಕಾರಣ

ಈ ಫಲಿತಾಂಶವನ್ನು ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಸದಾನಂದಗೌಡರು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿಕೊಳ್ಳುತ್ತಿದ್ದಾರೆ. ಇವರಿಬ್ಬರ 'ಅಭಿವೃದ್ಧಿ' ರಾಜಕಾರಣಕ್ಕೆ ಮಾನ್ಯತೆ ಸಿಕ್ಕಿದೆ ಎಂದೂ ಹೇಳುತ್ತಿದ್ದಾರೆ! ವಾಸ್ತವದಲ್ಲಿ ಕೊಪ್ಪಳ ನಗರ, ಇಡೀ ಜಿಲ್ಲೆಯೇ ಗಬ್ಬೆದ್ದು ಹೋಗಿದೆ. ಮೈನ್ಸ್ ಲಾರಿ, ಧೂಳುಗಳಿಂದ ಆಳೆತ್ತರದ ಗುಳಿಗಳೇ ರಸ್ತೆಗಳಲ್ಲಿ ಕಾಣ ಸಿಗುತ್ತವೆ. ಇಂತಹ ಅಭಿವೃದ್ಧಿಗೆ ಜನ ಬೆಂಬಲಿಸಿದ್ದಾರೆಂದರೆ ಅದೊಂದು ಹಾಸ್ಯಾಸ್ಪದವೇ ಸರಿ. ಆದರೆ ಅಭಿವೃದ್ಧಿ ಪ್ರಶ್ನೆಯನ್ನು ಇನ್ನೊಂದು ರೀತಿಯಲ್ಲಿ ಬಿಜೆಪಿ ಬಳಸುತ್ತಲೇ ಬಂದಿದೆ. ಅದೆಂದರೆ ಆಡಳಿತ ಪಕ್ಷದ ಶಾಸಕರಾದರೆ ಮಾತ್ರ ಅಭಿವೃದ್ಧಿ ಸಾಧ್ಯವೆಂಬ ಕುತರ್ಕವನ್ನು ಅದು ಮುಂದೆ ಮಾಡುತ್ತಲೇ ಬಂದಿದೆ. ಅದಕ್ಕಾಗಿ ಓಟು ಬೇಡುತ್ತಿದೆ. ಅಂದರೆ ವಿರೋಧಪಕ್ಷಗಳಿಗೆ ಓಟು ಹಾಕಿದರೆ, ಅದು ಗೆದ್ದರೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಅಗತ್ಯ ನೆರವೂ ನೀಡದೇ ಸತಾಯಿಸುವೆಂಬ ಬೆದರಿಕೆಯೂ ಇದರಲ್ಲಿದೆ. ಮಾತ್ರವಲ್ಲ ವಿರೋಧಪಕ್ಷಗಳು ಆಯ್ಕೆಯಾದ ಕ್ಷೇತ್ರಗಳ ಜನತೆಗೆ ಹಾಗೇ ಮಾಡುತ್ತಾ ಬಂದಿದೆ. ತಮಗಿಷ್ಟವಾದ ರಾಜಕೀಯ ಪಕ್ಷಗಳನ್ನು ಆಯ್ಕೆಮಾಡಿ ಕೊಳ್ಳುವ ಹಕ್ಕು ಜನರಿಗಿದೆ. ಆದರೆ ಹಾಗೆ ಮಾಡಿದ ಪ್ರಜೆಗಳ ಮೇಲೆ ಬಿಜೆಪಿಯು ರಾಜಕೀಯ ಸೇಡನ್ನು ತೀರಿಸಿಕೊಂಡಿದ್ದಾರೆ.

ಪುಟ 14 ಕ್ಕೆ

ಕಾರ್ಟೂನ್ ಕಾರ್ನರ್



ದಾವಣಗೆರೆ / ಜಗಳೂರು

ಬರಪೀಡಿತ ಪ್ರದೇಶ ಘೋಷಣೆಗೆ ಆಗ್ರಹ ತಹಶೀಲ್ದಾರ್ ಕಚೇರಿ ಬಳಿ ಧರಣಿ



ಜಗಳೂರು ತಾಲ್ಲೂಕು ಬರ ಪೀಡಿತ ಪ್ರದೇಶ ಎಂದು ಘೋಷಿಸುವಂತೆ ಭದ್ರಾ ಮೇಲ್ದಂಡೆ ಸಮಗ್ರ ನೀರಾವರಿ ಮತ್ತು ಬಗರ್‌ಹುಕುಂ ಸಾಗುವಳಿಧಾರರಿಗೆ ಯೋಜನೆ ಜಾರಿಗಾಗಿ ಹಕ್ಕು ಪತ್ರ ನೀಡುವಂತೆ ಆಗ್ರಹಿಸಿ ತಾಲ್ಲೂಕು ರೈತ ಸಂಘದ ಕಾರ್ಯಕರ್ತರು ಸೆಪ್ಟೆಂಬರ್ 26, 2011 ರಂದು ಜಗಳೂರು ತಾಲ್ಲೂಕು ಕಛೇರಿ ಬಳಿ ಪ್ರತಿಭಟನೆ ನಡೆಸಿದ್ದರು.

ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಬೆಳೆದ ಬೆಳೆಗಳು ಒಣಗಿ ಹೋಗಿವೆ. ಕೆಲವು ಕಡೆಗಳಲ್ಲಿ ಇನ್ನೂ ಬಿತ್ತನೆ ನಡೆದಿಲ್ಲ. ಇಷ್ಟಾದರೂ ಸರ್ಕಾರ ಜಗಳೂರು ತಾಲ್ಲೂಕು ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡುವುದಕ್ಕೆ ಮೀನಾಮೇಷ ಎಣಿಸುತ್ತಿದೆ. ಅಲ್ಲದೆ ಭದ್ರಾ ಮೇಲ್ದಂಡೆ ಯೋಜನೆಯನ್ನು ಸಮಗ್ರ ನೀರಾವರಿ ಒಳಪಡಿಸುವುದಕ್ಕೂ ವಿಳಂಬ ಮಾಡುತ್ತಿದೆ ಮತ್ತು ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ವಿತರಣೆ ಮಾಡಿಲ್ಲ ಎಂದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರವಾಸಿ ಮಂದಿರದಿಂದ ಹೊರಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಒಣಗಿದ ಮೆಕ್ಕೆಜೋಳ ಮತ್ತಿತರೆ ಬೆಳೆಗಳನ್ನು ತಲೆಯ ಮೇಲೆ ಹೊತ್ತು ಮೆರವಣಿಗೆ ಮೂಲಕ ಸಂಚರಿಸಿದ ಪ್ರತಿಭಟನಾಕಾರರು ಸರ್ಕಾರದ ವಿಳಂಬ ಧೋರಣೆಯನ್ನು ಖಂಡಿಸಿದರು. ನಂತರ ತಾಲ್ಲೂಕು ಕಛೇರಿಗೆ ತೆರಳಿ ತಹಶೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆಪಿಆರ್‌ಎಸ್ ರಾಜ್ಯ ಸಮಿತಿ ಸದಸ್ಯ ಎಚ್.ವೆಂಕಟೇಶ್, ಜಗಳೂರು ತಾಲ್ಲೂಕು ಅಸ್ತಿತ್ವಕ್ಕೆ ಬಂದು 125 ವರ್ಷ ಕಳೆದ ಸುಮಾರು 60 ರಿಂದ 70 ವರ್ಷಗಳ ಕಾಲ ಬರಗಾಲಕ್ಕೆ ತುತ್ತಾಗಿದೆ. ರಾಜ್ಯದಲ್ಲಿ ಎರಡನೇ ಹಿಂದುಳಿದ ಪ್ರದೇಶವಾಗಿದೆ. ಇಲ್ಲಿ ಯಾವುದೇ ನೀರಾವರಿಯ ಮೂಲವಿಲ್ಲ. ಬರಗಾಲ ತಪ್ಪಿಸುವ ಪ್ರಯತ್ನವನ್ನು ಇದುವರೆಗೂ ಆಳಿದ ಯಾವುದೇ ಸರ್ಕಾರಗಳು ಮಾಡಲಿಲ್ಲ. ಈ ವರ್ಷವೂ ಕೂಡ ತಾಲ್ಲೂಕಿನಾದ್ಯಂತ ಸಕಾಲಕ್ಕೆ ಮಳೆ ಬಾರದೆ ಬಿತ್ತನೆ ಮಾಡಿದ ಬೆಳೆಗಳು ಒಣಗಿ ಹೋಗಿ ರೈತರು, ಕೂಲಿ ಕಾರ್ಮಿಕರು ಗುಳೆ ಹೋಗುತ್ತಿದ್ದಾರೆ ಎಂದು ಸರ್ಕಾರ ವಿರುದ್ಧ ಕಿಡಿ ಕಾರಿದರು.

ಕೂಡಲೇ ಸರ್ಕಾರ ಜಗಳೂರು ತಾಲ್ಲೂಕು ಬರಪೀಡಿತ ತಾಲ್ಲೂಕು ಎಂದು ಘೋಷಿಸಿ ರೈತರಿಗೆ ಮೆಕ್ಕೆಜೋಳ, ಶೇಂಗಾ, ಹತ್ತಿ, ಈರುಳ್ಳಿ ಮತ್ತಿತರ ಬೆಳೆಗಳಿಗೆ ಎಕರೆಗೆ 10 ರಿಂದ 25 ಸಾವಿರದವರೆಗೆ ಪರಿಹಾರ, ಬೆಳೆವಿಮೆ, ಬ್ಯಾಂಕ್ ಸಾಲ ಬಡ್ಡಿ ಮನ್ನಾ ಮಾಡಿ ಮರು ಸಾಲ ನೀಡಬೇಕು. ಪಂಚಾಯ್ತಿ ಒಂದರಂತೆ ಗೋಶಾಲೆ ತೆರೆಯಬೇಕು. ಕೂಲಿ ಕಾರ್ಮಿಕರಿಗೆ 365 ದಿನವೂ ಉದ್ಯೋಗ ಖಾತ್ರಿ ಕೆಲಸ ನೀಡಬೇಕು ಎಂದು ಆಗ್ರಹಿಸಿದ ಅವರು, ಒಂದು ವೇಳೆ ಸರ್ಕಾರ ವಿಳಂಬ ಮಾಡಿದರೆ ಮುಂದಿನ ದಿನಗಳಲ್ಲಿ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಮುಖಂಡ ಆರ್.ಓಬಳೇಶ್ ಮಾತನಾಡಿ, ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಯಡಿ ತಾಲ್ಲೂಕಿನಾದ್ಯಂತ ಸಮಗ್ರ ನೀರಾವರಿ ವ್ಯಾಪ್ತಿಗೆ ಒಳಪಡಿಸಬೇಕು. ಕಳೆದ ಹಿಂದಿನ ದಿನಗಳಲ್ಲಿ ಸುಮಾರು 150 ದಿನಗಳ ಕಾಲ ಸತ್ಯಾಗ್ರಹ ಹಾಗೂ ತಾಲ್ಲೂಕು ಬಂದ್ ಮಾಡಿದ್ದರೂ ಕೂಡ ಸರ್ಕಾರ ಇದುವರೆಗೂ ಯಾವುದೇ ನಿರ್ಧಾರ ತೆಗೆದುಕೊಳ್ಳಲು ವಿಫಲವಾಗಿದೆ. ಕಳೆದ 50–60 ವರ್ಷಗಳಿಂದ ಬಗರ್‌ಹುಕುಂ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಭೂ ಬ್ಯಾಂಕ್ ಹೆಸರಿನಲ್ಲಿ ದೊಡ್ಡ ದೊಡ್ಡ ಉದ್ದಿಮೆದಾರರಿಗೆ, ವಿದೇಶಿ ಕಂಪನಿಗಳಿಗೆ ಷರತ್ತು ರಹಿತವಾಗಿ ಭೂಮಿ ನೀಡುವುದನ್ನು ನಿಲ್ಲಿಸಿ ಭೂಮಿ ಇಲ್ಲದೆ ಭೂ ಹೀನರಿಗೆ ಈಗಾಗಲೇ ಸಾಗುವಳಿ ಮಾಡಿಕೊಂಡು ಬಂದಿರುವ ಕೃಷಿ ಕೂಲಿ ಕಾರ್ಮಿಕರಿಗೆ, ಕೃಷಿಕರಿಗೆ ಭೂಮಿ ನೀಡಿ ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಚಿತ್ರದುರ್ಗ ಜಿಲ್ಲಾ ರೈತ ಮುಖಂಡ ಮರಿಯಪ್ಪ, ಶಂಭುಲಿಂಗಪ್ಪ, ನಾಗಲಿಂಗಪ್ಪ, ವಕೀಲರಾದ ಸತೀಶ್, ಶ್ರೀನಿವಾಸ್ ದಾವಣಗೆರೆ, ಭೋಸಪ್ಪ, ಎನ್.ಬಸಣ್ಣ, ಜಗದೀಶ್, ಚೌಡಪ್ಪ ರಘುಪತಿ, ಪರುಶುರಾಮಪ್ಪ, ಹನುಮಂತಪ್ಪ, ಮಾರುತಿ, ಎಸ್.ಆರ್. ಬೊಮ್ಮಯ್ಯ, ರಮೇಶ್, ಚಿತ್ತಪ್ಪ, ವಜ್ರಪ್ಪ, ಪಕೀರಪ್ಪ, ಹನುಮಂತಪ್ಪ, ದೇವೇಂದ್ರಪ್ಪ, ಪಾಸೆಪಣ್ಣ ಮತ್ತಿತರರು ಹಾಜರಿದ್ದರು. ●

'ಜಾಗತೀಕರಣ ಸಹಕಾರ ಚಳುವಳಿಗೆ ಮಾರಕ'

ಅನೀತಿಯುತ ಸ್ಪರ್ಧೆ, ಲಾಭಕೋರತನ, ಪೈಪೋಟಿಗಳಿಗೆ ಕುಮ್ಮಕ್ಕು ನೀಡುವ ಜಾಗತೀಕರಣ ನೀತಿಗಳು ಸಹಕಾರಿ ಚಳುವಳಿಗೆ ಮಾರಕ ಎಂಬ ಅಭಿಪ್ರಾಯವು ಬಿಜಾಪುರ ಜಿಲ್ಲೆಯಲ್ಲಿ ಸಹಕಾರಿ ಸಭಾಂಗಣದಲ್ಲಿ ಜಾಗತೀಕರಣ ಮತ್ತು ಸಹಕಾರ ಚಳುವಳಿ ಎಂಬ ವಿಷಯದ ಕುರಿತು ವಿಚಾರ ಸಂಕಿರಣದಲ್ಲಿ ವ್ಯಕ್ತವಾಯಿತು. ಸಂಕಿರಣದ ಅಧ್ಯಕ್ಷರಾಗಿ ಮಾಜಿ ಶಾಸಕರು ಹಾಗೂ ಜಿಲ್ಲಾ ಸಹಕಾರಿ ಸಂಘದ ಅಧ್ಯಕ್ಷರಾದ ಶಿವಾನಂದ ಪಾಟೀಲರು ಮಾತನಾಡಿದರು. ಇದನ್ನು ವಿಜಾಪುರ ಜಿಲ್ಲಾ ಸಮಾಜ ವೇದಿಕೆ ಹಾಗೂ ಸಹಕಾರಿ ಸಂಘ ಸಂಕಿರಣವನ್ನು ಏರ್ಪಡಿಸಿತ್ತು. ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬ ಸಹಕಾರಿ ತತ್ವವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಸಹಕಾರಿ ರಂಗದಲ್ಲಿ ನಂದಿ ಸಕ್ಕರೆ ಕಾರ್ಖಾನೆ ದೇಶದಲ್ಲಿ ಎರಡನೇ ಸ್ಥಾನ ಪಡೆದಿದೆ. ಅದನ್ನು ನೋಡಬೇಕು ಹಾಗೂ ಭೀಮಾಶಂಕರ ಸಕ್ಕರೆ ಕಾರ್ಖಾನೆ ಅಭಿವೃದ್ಧಿ ಆಗಿಲ್ಲ. ಸಹಕಾರ ಇಲಾಖೆಯನ್ನು ವಿವಿಧ ಭಾಗಗಳಾಗಿ ಒಡೆದು ಅದರ ಶಕ್ತಿಯನ್ನು ಕುಂದಿಸಿವೆ ಸರ್ಕಾರಗಳು. ಜಗತ್ತಿನಲ್ಲಿ ಖಾಸಗೀಕರಣದಿಂದ ಸಾಕಷ್ಟು ಸಮಸ್ಯೆಗಳು ಉದ್ಭವವಾಗುತ್ತಿವೆ. ಹಾಗೂ ದೇಶದಲ್ಲಿ ಎಷ್ಟು ಜನ ಶ್ರೀಮಂತರಾಗುತ್ತಾರೋ ಅಷ್ಟು ಜನರು ಬಡವರಾಗುತ್ತಾರೆ ಎಂದು ಹೇಳಿದರು. ಸಹಕಾರಿ ರಂಗದಲ್ಲಿ ಕ್ಷೀರಕ್ರಾಂತಿ ಯಾದದ್ದನ್ನು ಹೇಳುವುದನ್ನು ಮರೆಯಲಿಲ್ಲ.

ರಾಜ್ಯದ ಸಮುದಾಯದ ಅಧ್ಯಕ್ಷರಾದ ಪ್ರೊ॥ ಆರ್.ಕೆ.ಹುಡಗಿಯವರು ಅತಿಥಿಗಳಾಗಿ ಮಾತನಾಡಿದರು. ರಷ್ಯಾದೇಶ ಪತನದ ನಂತರ ಸಾಮ್ರಾಜ್ಯ ದೇಶಗಳು ತಮ್ಮ ಧೋರಣೆಗಳನ್ನು ಇತರೆ ದೇಶಗಳ ಸಮಾಜವಾದಿಗಳ ಮೇಲೆ ಒತ್ತಡ ಹೇರಲು ಪ್ರಾರಂಭಿಸಿದೆವು. ಅದಕ್ಕೆ ಸುಳ್ಳು ಆರೋಪದ ಮೇಲೆ ಆ ದೇಶಗಳ ಮೇಲೆ ಸೈನಿಕ–ದಾಳಿಗಳನ್ನು ಮಾಡಿದವು. ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವ ದೇಶಗಳಲ್ಲಿ ಅರಾಜಕತೆ ಇದ್ದರೂ ಅದು ಸಾಮ್ರಾಜ್ಯಶಾಹಿ ದೇಶಗಳಿಗೆ ಕಾಣುವುದಿಲ್ಲ. ಹೆಣ್ಣಿಗಾಗಿ, ಮಣ್ಣಿಗಾಗಿ, ಹೊನ್ನಿಗಾಗಿ ಜನರು ಜಗಳವಾಡುತ್ತಿದ್ದರು. ಆದರೆ ಈಗ 'ಎಣ್ಣೆ'ಗಾಗಿ (ತೈಲ) ಜಗತ್ತಿನಲ್ಲಿ ಯುದ್ಧ ಪ್ರಾರಂಭ'ವಾಗಿದೆ. ಖಾಸಗೀಕರಣ, ಉದಾರೀಕರಣ ಇವುಗಳಿಂದ ದೇಶಕ್ಕೆ ಗಂಡಾಂತರಗಳು ತಪ್ಪಿದ್ದಲ್ಲ. ಇದರಿಂದ ಸಾರ್ವಜನಿಕರ ತೆರಿಗೆ ಹಣ ಯಾರದೋ ಜೇಬು ಸೇರುತ್ತದೆ. ಅನೇಕ ಸಾರ್ವಜನಿಕ ವಲಯದಲ್ಲಿ ಸಹಕಾರಿ ಸಂಘಗಳಿಗೆ ಯಾಕೆ ಯೋಜನೆಯನ್ನು ಕೊಡಬಾರದು ಎಂದು ಪ್ರಶ್ನಿಸಿದ ಅವರು

ಜಾಗತೀಕರಣ ಎಂದರೆ ಅಮಾನವೀಯತೆ ಸಹಕಾರ ಎಂದರೆ ಮಾನವೀಯತೆ ಎಂದರು. ಮುಖ್ಯ ಅತಿಥಿಯಾಗಿ ಪನ್ನಾಲಾಲ್, ಸರೂನ್ ಪಿನ್ನಾಲಾಲ್ ಕುರಾನ್ ಅವರು ಮಾತನಾಡಿದರು. ವೇದಿಕೆಯ ಮೇಲೆ ಭೀಮಶಿ ಕಲಾದಗಿ, ರಿಯಾಜ್ ಪಾರೂಕಿ ಕರ್ನಾಟಕ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಜಿ.ಬಿ.ಸುರೇಶ್, ಪೀಟರ್ ಅಲೆಗ್ಸಾಂಡರ್, ಎಸ್.ಜಿ. ಭಾವಿ, ಸುರೇಶ್ ಬಿಜಾಪುರ ಮನ್ನಾಸಾಬ ಕಲಾದಗಿ, ಮಕಬುಲ್ಲ ಮುಲ್ಲಾ ಮೈಬೂಬ ನದಾಫ, ಎನ್.ಕೆ. ಮನಗೊಂಡೆ, ಮಲ್ಲಮ್ಮ ಯಳವಾರ, ಸೋಮಪ್ಪ ಆಯಟ್ಟಿ, ಶಿವನಗೌಡ ಬಿರಾದಾರ ಅಪ್ಪಾಸಾಬ, ಯರನಾಳ, ಮುಂತಾದವರಿದ್ದರು.

ವರದಿ: ಸೋಮಪ್ಪ ಆಯಟ್ಟಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಒಟ್ಟಾರೆ ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಪೂರ್ಣಗೊಳಿಸಿರುವ 3 ವರ್ಷಗಳು ದುಡಿಯುವ ವರ್ಗಕ್ಕೆ ಜನತೆಗೆ ದ್ರೋಹ ಎಸಗಿದ ವರ್ಷಗಳಾಗಿವೆ. ಬಿಜೆಪಿ ಪಕ್ಷದ ಬಂಡವಾಳಶಾಹಿ ಪರ ಧೋರಣೆಯ ಫಲವಾಗಿ ಹೊರಹೊಮ್ಮುತ್ತಿರುವ ಕಾರ್ಮಿಕ ವಿರೋಧಿ ಕ್ರಮಗಳನ್ನು ಸ್ವತ: ಕಾರ್ಮಿಕ ಸಂಘಗಳ ಮುಖಂಡರಾಗಿದ್ದ ಹಾಲಿ ಮುಖ್ಯಮಂತ್ರಿ ಸದಾನಂದಗೌಡರು ಬದಲಾಯಿಸುತ್ತಾರೆ ಎಂಬ ನಿರೀಕ್ಷೆಯೂ ಮರೀಚಿಕೆಯೇ ಆಗಲಿದೆ.

ಬಿಜೆಪಿ ಸರ್ಕಾರ: ದುಡಿವ ವರ್ಗಕ್ಕೆ ದ್ರೋಹವೆಸಗಿದ ಈ ಮೂರು ವರ್ಷಗಳು



ಕೆ.ಎನ್.ಉಮೇಶ್

2008'ರ ಮೇನಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರವು 3 ವರ್ಷ ಪೂರೈಸಿದೆ. ಅದರ ಮುಖ್ಯಮಂತ್ರಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮುಂತಾದ ಹತ್ತಾರು ಆರೋಪ ಹೊತ್ತು, ರಾಜೀನಾಮೆ ನೀಡಿದ್ದಾರೆ. ನೂತನವಾಗಿ ಅವರ ಬೆಂಬಲಿತ ಅಭ್ಯರ್ಥಿ ಮುಖ್ಯಮಂತ್ರಿಯಾಗಿದ್ದಾರೆ. ಭ್ರಷ್ಟಾಚಾರದ ಆರೋಪದ ಮೇರೆಗೆ ಬಂಧನಕ್ಕೊಳಗಾಗುವ ಭೀತಿಯಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಕೋರ್ಟ್‌ನಿಂದ ಕೋರ್ಟ್‌ಗೆ ಅಲೆಯುತ್ತಿದ್ದಾರೆ.

ಬಾಯಿ ಬಿಟ್ಟರೆ ಸಾಕು ಅಭಿವೃದ್ಧಿಯ ಮಾತುಗಳನ್ನಾಡುತ್ತಿದ್ದ ಬಿಜೆಪಿ ಸರ್ಕಾರದ 3 ವರ್ಷಗಳು ಆನಂತರದ ಇಂದಿನವರೆಗಿನ ದಿನಗಳು ದುಡಿಯುವ ವರ್ಗಕ್ಕೆ ದ್ರೋಹ ಎಸಗಿದ ದಿನಗಳಾಗಿವೆ. ದುಡಿದ ವೇತನ ನೀಡದೆ, ಕಾರ್ಖಾನೆ ಮುಚ್ಚಿ ಓಡಿಹೋಗಿರುವ ಮಾಲೀಕನನ್ನು ಬಂಧಿಸಿ ಕರೆ ತನ್ನಿ, ಇಂದು, ದುಡಿದ ವೇತನ ಕೊಡಿಸಿ ಎಂದು ಮನೆ ಬಾಗಿಲಿಗೆ ಹೋಗಿದ್ದ ಸಾವಿರಾರು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಬಿಜೆಪಿ ಸರ್ಕಾರದ ಸಿ.ಎಂ ಹೇಳಿದ ಮಾತು "ಮಾಲೀಕ ಓಡಿ ಹೋದರೆ ನಾನೇನು ಮಾಡಲಿ, ಧರಣಿ–ಸತ್ಯಾಗ್ರಹದಿಂದ ಏನಾಗುತ್ತದೆ" ಎಂಬುದು. ಗಾರ್ಮೆಂಟ್ಸ್ ಎಂದೊಡನೆ ಅವರಿಗೆ ನೆನಪಾದದ್ದು ಶಿವಮೊಗ್ಗದ ಗಾರ್ಮೆಂಟ್ಸ್ (ಅಪರೆಲ್) ಪಾರ್ಕ್, ಕಾರ್ಯದರ್ಶಿ ಕರೆದು "ಸಂಜೆ ಒಳಗೆ ಗಾರ್ಮೆಂಟ್ಸ್ ಪಾರ್ಕ್ ಫೈಲ್ ಬರಬೇಕು ಅದು ಕ್ಲಿಯರ್ ಆಗಬೇಕು" ಎಂದಿದ್ದರು. ಒಂದು ವಾರದೊಳಗೆ ಅಪರೆಲ್ ಪಾರ್ಕ್‌ಗೆ ಶಿವಮೊಗ್ಗದಲ್ಲಿ ಅಡಿಗಲ್ಲನ್ನು ಹಾಕಲಾಯಿತು. ಅದೇ ಕಾರ್ಮಿಕರು ಕಾರ್ಮಿಕ ಸಚಿವರ ಮನೆ ಬಾಗಿಲಿಗೆ ಹೋದಾಗ, ಕುತ್ತಿಗೆ ಹಿಡಿದು ಅವರನ್ನು ಹೊರದಬ್ಬಿ ಬಂಧಿಸಲಾಯಿತು. 2009 ಆಗಸ್ಟ್–ಸೆಪ್ಟೆಂಬರ್ ತಿಂಗಳ ದುಡಿದ ವೇತನವನ್ನು ಇದುವರೆಗೆ ಕೊನೆಗಾ ಗಾರ್ಮೆಂಟ್ಸ್ ಕಾರ್ಮಿಕರಿಗೆ ಕೊಡಿಸಲು ಸರ್ಕಾರ ಕ್ರಮ ವಹಿಸಿಲ್ಲ.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಲಕ್ಷಾಂತರ ಕೋಟಿ ರೂ.ಗಳ ಬಂಡವಾಳ ತರಲಾಗಿದೆ ಎಂಬ ಬಡಾಯಿ ಸರ್ಕಾರದ್ದು, ಆದರೆ ಬೆಂಗಳೂರಿನಲ್ಲಿ ಹತ್ತಾರು ವರ್ಷಗಳಿಂದ ಕಾರ್ಖಾನೆ ಹೊಂದಿರುವ ಮಾಲೀಕರಿಗೆ ದೊಡ್ಡಬಳ್ಳಾಪುರ, ದಾಬಸಪೇಟೆ, ಹೊಸಕೋಟೆ, ಬಿಡದಿ, ನಂಜನಗೂಡು, ತುಮಕೂರು ಮುಂತಾದೆಡೆ ಕೈಗಾರಿಕಾ ನಿವೇಶನ, ಭೂಮಿ ನೀಡಿ ಕಾರ್ಖಾನೆ ಸ್ಥಳಾಂತರಕ್ಕೆ ಅನುವುಗೊಳಿಸಿ, ಇದ್ದ ಬಂಡವಾಳವನ್ನೇ ಮತ್ತೊಂದು ಸ್ಥಳಕ್ಕೆ ಬದಲಾಯಿಸಿ ಬಂಡವಾಳ ಹರಿದು ಬಂದಿದೆ ಎಂದಿದೆ. ಅದನ್ನು ತಂದಿದ್ದು ತನ್ನ ಹೆಗ್ಗಳಿಕೆ ಎನ್ನುತಿದೆ. ಆದರೆ ತೊಂದರೆಗೆ ಒಳಗಾಗುತ್ತಿರುವವರು ಮಾತ್ರ ವರ್ಗಾವಣೆಯ ಭೀತಿಯಲ್ಲಿ ಕಾರ್ಮಿಕರು, ಲಾಭ ಪಡೆದವರು ಮಾಲೀಕರು.

ಕೆಲಸದ ಅವಧಿ ಹೆಚ್ಚಿಸಿದ ಕೀರ್ತಿ

ಅಧಿಕಾರಕ್ಕೆ ಬಂದೊಡನೆ ಮಾಡಿದ ಪ್ರಥಮ ಕೆಲಸ ಎಂದರೆ, ಕೈಗಾರಿಕಾ ನೀತಿಯನ್ನು ಮಧ್ಯದಲ್ಲೇ ಬದಲಾಯಿಸಿದ್ದು. ಜೆಡಿ(ಎಸ್) ನೊಂದಿಗೆ ಸಮ್ಮಿಶ್ರ ಸರ್ಕಾರ ನಡೆಸಿದ ಸಮಯದಲ್ಲಿ ತಾವೇ ರೂಪಿಸಿದ್ದ ನೀತಿಯನ್ನು ಬದಲಾಯಿಸಿದರು. ಕಾರ್ಮಿಕ ಕಾನೂನುಗಳನ್ನು ಹೂಡಿಕೆ ಸ್ನೇಹಿಯಾಗಿ ಬದಲಾಯಿಸುವ ಪ್ರಸ್ತಾಪವನ್ನು ನೀತಿಯಲ್ಲಿ ಮಂಡಿಸಲಾಯಿತು. ಕೆಲಸದ ಅವಧಿ ಹೆಚ್ಚಿಸುವ ಪ್ರಸ್ತಾಪವನ್ನು ಮಾಡಲಾಗಿತ್ತು. ಸುವರ್ಣ ವಸ್ತ್ರ ನೀತಿಯಲ್ಲಿ ಕೆಲಸದ ಅವಧಿ ಹೆಚ್ಚಿಸುವ, ರಾತ್ರಿ ಪಾಳಿಯಲ್ಲೂ ಉತ್ಪಾದನಾ ವಲಯದಲ್ಲಿ ಮಹಿಳಾ ಕಾರ್ಮಿಕರಿಗೆ ಕೆಲಸ ಮಾಡಲು ಅನುವು ಮಾಡುವ ಪ್ರಸ್ತಾಪ ಮಾಡಲಾಗಿದೆ.

ಮಾಲೀಕರಿಗೆ ಕೊಟ್ಟಿದ್ದ ಮಾತಿನಂತೆ ತಮ್ಮದು ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ತೋರಿದೆ ಈ 3 ವರ್ಷಗಳಲ್ಲಿ ಬಿಜೆಪಿ ಸರ್ಕಾರ. 2011 ಫೆಬ್ರವರಿಯಲ್ಲಿ ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ಮಾಡಿ ದಿನದ ಕೆಲಸದ ಅವಧಿಯನ್ನು 9 ಗಂಟೆಯ ಮಿತಿಯಿಂದ 10 ಗಂಟೆಗೆ (ಊಟದ ಬಿಡುವಿನ ಸಹಿತ) ಹೆಚ್ಚಿಸಿದೆ. ಅಂತೆಯೇ ದಿನದ ಕೆಲಸದ ಅವಧಿಯ ವಿಸ್ತರಣೆ (ಸ್ಪ್ರೆಡ್ ಓವರ್)ಯನ್ನು 11 ರಿಂದ 13 ಗಂಟೆಗೆ ಹೆಚ್ಚಿಸಿದೆ. ಆದರೆ ವಾರದ 48 ಗಂಟೆಗಳ ಕೆಲಸದ ಮಿತಿಯನ್ನು ಹಾಗೂ ಹೆಚ್ಚುವರಿ ಕೆಲಸಕ್ಕೆ (ಓವರ್ ಟೈಮ್) ದುಪ್ಪಟ್ಟು ವೇತನದ ಕಲಂಗಳನ್ನು ತಿದ್ದುಪಡಿ ಮಾಡಿಲ್ಲ ಎಂಬುದಷ್ಟೇ ಸಮಾಧಾನದ ಸಂಗತಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ (WFTU) ದಿನಕ್ಕೆ 7 ಗಂಟೆ, ವಾರದ 5 ದಿನ ಮಾತ್ರ ಒಟ್ಟು 35 ಗಂಟೆಗೆ ಕೆಲಸದ ಬೇಡಿಕೆಗಾಗಿ ಒತ್ತಾಯಿ ಸುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ಬಿಜೆಪಿ ಸರ್ಕಾರ ದುಡಿಯುವ ವರ್ಗದ 8 ಗಂಟೆಗಳ ಕೆಲಸದ ಶತಮಾನದ ಹಕ್ಕಿನ ಮೇಲೆ ದಾಳಿ ನಡೆಸಿ, ಕಸಿಯಲು ಬಂಡವಾಳಿಗರಿಗೆ ಅನುವು ಗೊಳಿಸಿದೆ.

ವ್ಯಾಪಕ ಗುತ್ತಿಗೀಕರಣ

ಗುತ್ತಿಗೆ ಕಾರ್ಮಿಕರ ರಕ್ಷಣೆಗೆ ದುಡಿಯುವ ಜನತೆ ಒತ್ತಾಯಿಸುತ್ತಿರುವಾಗ, ಗುತ್ತಿಗೆ ಕಾರ್ಮಿಕರಿಗೆ ಅಂಗನವಾಡಿ ನೌಕರರ ಗೌರವಧನಕ್ಕಿಂತ ಕಡಿಮೆ ಕನಿಷ್ಠ ವೇತನವನ್ನು ಸರ್ಕಾರ ನಿಗದಿ ಮಾಡಿದೆ. ಕಾರ್ಖಾನೆ ಕಾಯ್ದೆಯಲ್ಲಿನ ಓ.ಟಿ. ಕೆಲಸಕ್ಕೆ ಪೂರ್ಣ ವೇತನದ ದುಪ್ಪಟ್ಟು ನೀಡಬೇಕೆಂಬ ಕಾನೂನಿಗೆ ಭಿನ್ನವಾಗಿ ಜೆನಿತ್ ಮತ್ತು ತುಟ್ಟಿಭತ್ಯೆ ದುಪ್ಪಟ್ಟು ಕೊಟ್ಟರೆ ಸಾಕೆಂದಿದೆ. 5 ದಿನಕ್ಕಿಂತ ಹೆಚ್ಚು ಗೈರು ಹಾಜರಾದರೆ, ಮುನ್ಸೂಚನೆ ನೀಡದೆ ಕೆಲಸದಿಂದ ವಜಾಗೊಳಿಸುವ (Hire & Fire) ಹಕ್ಕನ್ನು ಮಾಲೀಕರಿಗೆ ನೀಡಿದೆ. ಶಿಕ್ಷಕರನ್ನು ಮತ್ತು ಇತರೆ ಇಲಾಖೆಗಳಲ್ಲೂ ಗುತ್ತಿಗೆ ನೌಕರರನ್ನು ನೇಮಿಸಲು ಮುಂದಾಗಿದೆ.

ಅಂಗನವಾಡಿ ನೌಕರರ ಪಿಂಚಣಿಯನ್ನು ಶೇರು ಮಾರುಕಟ್ಟೆ ಆಧಾರಿತ ನೂತನ ಪಿಂಚಣಿ ಯೋಜನೆಗೆ ಒಳಪಡಿಸಿದೆ. ಅಂಗನವಾಡಿ ನೌಕರರನ್ನು ನೌಕರರೆಂದು ಪರಿಗಣಿಸಲು ತಯಾರಿಲ್ಲದ ಸರ್ಕಾರ, ಹೋರಾಟ–ಪ್ರತಿಭಟನೆಗಳಲ್ಲಿ ಭಾಗವಹಿಸುವ ನೌಕರರನ್ನು ದಂಡಿಸುವ, ವಜಾಗೊಳಿಸುವ ಸುತ್ತೋಲೆ ಹೊರಡಿಸಿತ್ತು. ನೌಕರರ ಹೋರಾಟದ ಪರಿಣಾಮದಿಂದಾಗಿ ತಾತ್ಕಾಲಿಕವಾಗಿ ಹಿಂದೆ ಪಡೆದಿದೆ. ಪಂಚಾಯಿತಿ ನೌಕರರಿಗೆ ತಾನೆ ನಿಗದಿ ಮಾಡಿರುವ ಕನಿಷ್ಠ ವೇತನ ಜಾರಿ ಮಾಡುತ್ತಿಲ್ಲ. ವರ್ಷಗಟ್ಟಲೆ ವೇತನ ನೀಡಿಲ್ಲ. ಅಂಗನವಾಡಿ ನೌಕರರಿಗೆ 6 ತಿಂಗಳುಗಳ ಗೌರವಧನ ನೀಡಿಲ್ಲ. ಆದರೆ ಹಣಕ್ಕೇನೂ ತೊಂದರೆ ಇಲ್ಲ ಎಂಬ ಬಡಾಯಿಗೇನು ಕೊರತೆಯಿಲ್ಲ. ಸರ್ಕಾರಕ್ಕೆ. ಗಾರ್ಮೆಂಟ್ಸ್ ಕಾರ್ಮಿಕರ ತುಟ್ಟಿಭತ್ಯೆ 2009ರಲ್ಲಿ ತಪ್ಪು ಲೆಕ್ಕ ಮಾಡಲಾಗಿದೆ ಎಂದು ಹೇಳಿ, 2010ರಲ್ಲಿ ಕಡಿಮೆ ಮಾಡಿ, ಒಮ್ಮೆ ಮಾಡಲಾಗಿದ್ದ ಅಧಿಸೂಚನೆಯನ್ನು ಬದಲಾಯಿಸಿ, ತುಟ್ಟಿ ಭತ್ಯೆ ಕಡಿಮೆ ಮಾಡಲಾಯಿತು. ಬೆಲೆ ಏರಿಕೆಯ ಬಿಸಿಯಲ್ಲಿ ಕಾರ್ಮಿಕರು ಬಸವಳಿದಿರುವಾಗ ತುಟ್ಟಿಭತ್ಯೆ ಕಡಿಮೆ ಮಾಡುವ ಕೆಲಸವನ್ನು ಮಾಲೀಕರ ಕೋರಿಕೆ ಮೇರೆಗೆ ರಾಜ್ಯ ಸರ್ಕಾರ ನಡೆಸಿದೆ. ಪರಿಣಾಮವಾಗಿ ಕಾರ್ಮಿಕರಿಗೆ ಲಭಿಸಬೇಕಿದ್ದ ನೂರಾರು ಕೋಟಿ ರೂಪಾಯಿಗಳನ್ನು ಮಾಲೀಕರಿಗೆ ಉಳಿಸಿದೆ. ಅಂತೆಯೇ ತುಟ್ಟಿಭತ್ಯೆಯೊಂದಿಗೆ ಹೆಚ್ಚಳವಾಗಿದ್ದ ಬೀಡಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ಮಾಲೀಕರ ಕೋರಿಕೆ ಮೇರೆಗೆ ಕಡಿಮೆ ಮಾಡಲು, ಅದಿಸೂಚಿತ ಕನಿಷ್ಠ ಕೂಲಿಗಿಂತ ಕಡಿಮೆ ನೀಡಲು ಅನುವುಗೊಳಿಸಿದೆ. ಅಗರಬತ್ತಿ ಕಾರ್ಮಿಕರ ಕನಿಷ್ಟ ಕೂಲಿಯಲ್ಲಿನ Basicನ್ನೇ ಕಡಿಮೆ ಮಾಡಿ ಅಧಿಸೂಚನೆ ಹೊರಡಿಸಿದೆ.



ಅಸಂಘಟಿತರಿಗಿಲ್ಲ ಭದ್ರತೆ

ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿ ರಚಿಸಿ 3 ವರ್ಷಗಳೇ ಕಳೆದಿದ್ದರೂ ಸಹಾ ಕಲ್ಯಾಣ ಯೋಜನೆಗಳನ್ನು ರೂಪಿಸಿಲ್ಲ. ಒಬ್ಬರೇ ಒಬ್ಬರು ಭದ್ರತಾ ಮಂಡಳಿಯ ಫಲಾನುಭವಿಯನ್ನು ನೊಂದಾಯಿಸಿಲ್ಲ, ಆದರೆ ಶೇರು ಮಾರುಕಟ್ಟೆ ಆಧಾರಿತ ಎನ್‌ಪಿಎಸ್ ಲೈಟ್ ಸ್ವಾವಲಂಬನೆಯಡಿ, ಕಾರ್ಮಿಕರನ್ನು ನೊಂದಾಯಿಸಲು ಮುಂದಾಗಿದ್ದು ಈಗಾಗಲೇ ಇದನ್ನು ಜಾರಿಗೊಳಿಸಿದೆ. ಕೇಂದ್ರ ಸರ್ಕಾರ 5 ವರ್ಷಗಳಿಗೆ ರೂ.5,000, ರಾಜ್ಯದ 5 ವರ್ಷಗಳಿಗೆ ರೂ.6,000 ಕೊಡುಗೆಯೊಂದಿಗೆ ಕಾರ್ಮಿಕರ ಮಾಸಿಕ ರೂ.100/– ಅನ್ನು ಸಂಗ್ರಹಿಸಿ ಶೇರು ಮಾರುಕಟ್ಟೆಯಲ್ಲಿ ಹೂಡಲು ರಾಜ್ಯ ಸರ್ಕಾರ ಮುಂದಾಗಿದೆ.

ಕೇಂದ್ರದಲ್ಲಿ ತಮ್ಮ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇದ್ದಾಗ ಜಾರಿಗೆ ತಂದ 1–1–2004'ರ ನಂತರ ಕೇಂದ್ರ ಸರ್ಕಾರಿ ನೌಕರರಿಗೆ ಕೊಡುಗೆ ಆಧಾರಿತ ಪಿಎಫ್‌ಆರ್‌ಡಿಎ ನೂತನ ಪಿಂಚಣಿ ಯೋಜನೆಯನ್ನು 1–4–2006 ರಿಂದ ರಾಜ್ಯ ಸರ್ಕಾರಿ ನೌಕರರಿಗೂ ಜಾರಿಗೆ ತಂದಿದೆ.

ಕೈಗಾರಿಕಾ ಮಾದರಿ ಸ್ಥಾಯಿ ಆದೇಶಗಳಿಗೆ ತಿದ್ದುಪಡಿ ತಂದು, ಆಯುಕ್ತರಿಂದ ಸ್ಥಾಯಿ ಆದೇಶಗಳ ಶಾಸನಬದ್ಧ ಧೃಡೀಕರಣದ ಬದಲಾಗಿ ಅನುಮೋದನೆಗೆ ಅನುವುಗೊಳಿಸಲಾಗಿದೆ. ಕಾರ್ಮಿಕ ಸಂಘಗಳಿಗೆ, ಕಾರ್ಮಿಕರಿಗೆ ಸ್ಥಾಯಿ ಆದೇಶಗಳ ರೂಪಣೆಯಲ್ಲಿ ಇದ್ದ ಶಾಸನಬದ್ಧ ಮಧ್ಯಪ್ರವೇಶದ ಹಕ್ಕಿನ ಪೂರ್ವ ಶರತ್ತನ್ನು ಇಲ್ಲವಾಗಿಸಲಾಗಿದೆ. ಮಾಲೀಕರು ತಮ್ಮ ಕೈಗೊಂಬೆ, ಬಾಲಂಗೋಚಿ ಕಾರ್ಮಿಕರು ಅಥವಾ ಸಂಘಗಳ ರುಜುವಾತಿನೊಂದಿಗೆ ಸ್ಥಾಯಿ ಆದೇಶಗಳನ್ನು ಅನುಮೋದಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

ಆಟೋ ಚಾಲಕರನ್ನು ಸುರಕ್ಷತಾ ಗಾಜು, ಪರಿಸರ ರಕ್ಷಣೆ ನೆಪದಲ್ಲಿ ಬಣ್ಣ ಬದಲಾವಣೆ, ಮೀಟರ್ ಬದಲಾವಣೆ ಹೆಸರಿನಲ್ಲಿ ದೋಚಲು ಸಂಬಂಧಿತ ಕಂಪನಿಗಳಿಗೆ ಅನುವುಗೊಳಿಸಲು ಮುಂದಾಗಿತ್ತು. ಚಾಲಕರ ಹೋರಾಟ, ಪ್ರತಿರೋಧದ ಫಲವಾಗಿ ಸರ್ಕಾರ ತನ್ನ ಈ ನೀತಿಯನ್ನು ಹಿಂಪಡೆಯಬೇಕಾಗಿ ಬಂದಿದೆ. ಆದರೆ ಆಟೋ ತಯಾರಿಕಾ ಕಂಪನಿಗಳಿಗೆ ಲಾಭ

ಪುಟ 14 ಕ್ಕೆ


ಶಹೀದ್ ಭಗತ್‌ಸಿಂಗ್ ನೆನಪು






ಭಗತ್‌ಸಿಂಗ್ 105ನೇ ಜನ್ಮದಿನಾಚರಣೆ ಅಂಗವಾಗಿ 27.09.2011 ರಂದು ಬೆಳಿಗ್ಗೆ : 7.30ಕ್ಕೆ ಬೆಂಗಳೂರಿನ ಪ್ರಕಾಶ್ ನಗರದ ಗಾಯತ್ರಿದೇವಿ ಪಾರ್ಕ್‌ನಲ್ಲಿ ಭಗತ್‌ಸಿಂಗ್ ನೆನಪಿನ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮಕ್ಕೆ ಮಾಜಿ ಮಹಾ ಪೌರರಾದ ಜಿ.ಹುಚ್ಚಪ್ಪ, ಪ್ರಖ್ಯಾತ ಕ್ಯಾನ್ಸರ್ ತಜ್ಞರಾದ ಡಾ॥ಪ್ರಮೋದ್ ಮತ್ತು ಎಫ್.ಎಸ್.ಎಂ.ಕೆ. ಕಾರ್ಯದರ್ಶಿ ಜಯ ಕುಮಾರ್ ರವರು ಭಾಗವಹಿಸಿದ್ದರು.



ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 25.08.2011 ರಂದು ಕುಣಿಗಲ್ ತಹಶೀಲ್ದಾರ್ ಕಛೇರಿ ಮುಂದೆ ನಡೆದ ಪ್ರತಿಭಟನಾ ಧರಣಿ

ಮಹಾಧಿವೇಶನ-ಸಮ್ಮೇಳನಗಳ ಪರ್ವ



ಸಿಪಿಐ(ಎಂ) ಪಕ್ಷದ ಮಹಾಧಿವೇಶದ ಪ್ರಕ್ರಿಯೆಗಳು ಚಾಲನೆ ಪಡೆದುಕೊಂಡಿವೆ. ಮಹಾಧಿವೇಶನಕ್ಕೆ ಪೂರಕವಾಗಿ, ಕರ್ನಾಟಕ ರಾಜ್ಯ ಸಮ್ಮೇಳನವು ಚಿಕ್ಕಬಳ್ಳಾಪುರದಲ್ಲಿ ಜನವರಿ .... ರಿಂದ ....2011 ವರೆಗೆ ನಡೆಯಲಿದೆ. ಇದಕ್ಕೆ ಪೂರಕವಾಗಿ ವಿವಿಧ ಜಿಲ್ಲಾ ಸಮ್ಮೇಳನಗಳು ಈ ಪ್ರಕ್ರಿಯೆ ಭಾಗವಾಗಿ ಬೆಂಗಳೂರು ಜಿಲ್ಲಾ ಸಮ್ಮೇಳನವು ಡಿಸೆಂಬರ್ 4-6, 2011 ರಂದು ಬೆಂಗಳೂರು ನಗರದ ರಾಜಾಜಿ ನಗರದ ಡಾ॥ರಾಜಕುಮಾರ್ ಸಂಭಾಂಗಣದಲ್ಲಿ ನಡೆಯಲಿದೆ. ಇದರ ಪೂರ್ವಭಾವಿಯಾಗಿ ಸಮ್ಮೇಳನದ ಪ್ರಚಾರಕ್ಕಾಗಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸ್ವಾಗತ ಸಮಿತಿ ಅಧ್ಯಕ್ಷರಾಗಿ ಕಾಂ॥ಎಂ.ರತ್ನಾಕರಶೆಣೈ, ಪ್ರಧಾನ ಕಾರ್ಯದರ್ಶಿ ಕಾಂ॥ಗೋಪಾಲಕೃಷ್ಣ ಅರಳಹಳ್ಳಿ, ಖಜಾಂಚಿ; ಕಾಂ॥ಎಸ್.ಹೆಚ್. ವಿಜಯಕುಮಾರ್.

ಸಮ್ಮೇಳನದ ಪ್ರಚಾರ ಮತ್ತು ನಿಧಿ ಸಂಗ್ರಹದ ಭಾಗವಾಗಿ ದಿ : 18.09.2011 ರಂದು ಮಲ್ಲೇಶ್ವರಂನಲ್ಲಿ ಉದ್ಘಾಟನೆ ಮೂಲಕ ಪ್ರಚಾರ ಮತ್ತು ನಿಧಿ ಸಂಗ್ರಹ ಕಾರ್ಯಕ್ರಮವನ್ನು ಜೊತೆ ಜೊತೆಯಲ್ಲಿ ಹಮ್ಮಿಕೊಳ್ಳ ಲಾಯಿತು.

ಉದ್ಘಾಟನೆಯನ್ನು ಜಿಲ್ಲಾ ಕಾರ್ಯದರ್ಶಿ ಕಾಂ॥ಪ್ರಕಾಶ್ ಕೆ. ಮಾಡಿದರು. ಇದರ ನಂತರ ಪ್ರತಿ ಭಾನುವಾರ ನಿಧಿ ಸಂಗ್ರಹ ಮತ್ತು ಪ್ರಚಾರ ಕಾರ್ಯಕ್ರಮ ನಡೆಯುತ್ತಿದೆ. ಉಳಿದ ದಿನಗಳಲ್ಲಿ ಪ್ರತಿ ದಿನ ಸಂಜೆ ಮನೆ ಮನೆ ಪ್ರಚಾರದ ಮೂಲಕ ಜನತೆಯ ಮಧ್ಯೆ ಪಕ್ಷದ ವಿಚಾರವನ್ನು ಕೊಂಡೊಯ್ಯುವ ಕೆಲಸಗಳು ನಡೆಯುತ್ತಿದೆ. ●

ನಾಡ ಗ್ರಾಮ ಪಂಚಾಯತ್: ವಿದ್ಯುತ್ ಸಾಮಗ್ರಿ ಖರೀದಿ ಅವ್ಯವಹಾರ ತನಿಖೆಗೆ ಒತ್ತಾಯಿಸಿ-ಜಿಲ್ಲಾ ಪಂಚಾಯತ್ ಸಿ.ಇ.ಓ.ಗೆ ದೂರು

ಕುಂದಾಪುರ ತಾಲ್ಲೂಕು ನಾಡ ಗ್ರಾಮ ಪಂಚಾಯತ್‌ನಲ್ಲಿ ವಿದ್ಯುತ್ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸಮಗ್ರ ತನಿಖೆಗೆ ಒತ್ತಾಯಿಸಿ ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ದೂರು ದಾಖಲಿಸಲಾಗಿದೆ.

ನಾಡ ಗ್ರಾಮ ಪಂಚಾಯಿತಿ ವತಿಯಿಂದ 2009 ಹಾಗೂ 2011ರ ಸಾಲಿಗೆ ವಿದ್ಯುತ್ ಸಾಮಗ್ರಿಗಳನ್ನು ಸ್ಥಳೀಯ ಮಾರುಕಟ್ಟೆ ಸ್ಪರ್ಧಾತ್ಮಕ ದರದಲ್ಲಿ ಖರೀದಿಸದೇ ಬದಲಾಗಿ ದೂರದ ಉಡುಪಿ, ಮಣಿಪಾಲದ ಇಲೆಕ್ಟ್ರಿಕಲ್ ಅಂಗಡಿಯಿಂದ ತುಲನಾತ್ಮಕ ದರಪಟ್ಟಿ (ಕೊಟೇಶನ್) ಯಲ್ಲಿ ಹೆಚ್ಚಿಗೆ ದರದ ಮೊಬಲಗನ್ನು ನಮೂದಿಸಿ ವಿದ್ಯುತ್ ಸಾಮಗ್ರಿ ಖರೀದಿಯಲ್ಲಿ ಅವ್ಯವಹಾರ ನಡೆದು, ನಾಡಾ ಗ್ರಾಮ ಪಂಚಾಯಿತಿಗೆ ಸುಮಾರು ರೂ.1/2 ಲಕ್ಷ ಕ್ಕೂ ಮಿಕ್ಕಿ ಆರ್ಥಿಕ ನಷ್ಟ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಸುಮಾ ಟ್ರೇಡರ್ಸ್ ವಿಪ್ರೋ ಡೀಲರ್ ಶಿರಿಬೀಡು ಉಡುಪಿ ಪೂರೈಕೆದಾರ ಸಂಸ್ಥೆಯು ಡಿಸೆಂಬರ್ 2, 2009ರಂದು ಬಿಲ್ ನಂಬರ್ 1095, 1096, 1097, 1098 ಮತ್ತು 1100 ರಂತೆ ವಿದ್ಯುತ್ ಸಾಮಗ್ರಿಗಳನ್ನು ಸರಬರಾಜು ಮಾಡಿದ ಬಗ್ಗೆ ಒಟ್ಟು ರೂ.47602-00 ಜನವರಿ 28, 2011 ರಂದು ಬಿಲ್ ನಂ.952 ಮತ್ತು 953 ರಂತೆ ವಿದ್ಯುತ್ ಸಾಮಗ್ರಿಗಳನ್ನು ಸರಬರಾಜು ಮಾಡಿದ ಬಗ್ಗೆ ರೂ.58,396-00 ಹೀಗೆ ಒಟ್ಟು ಮೊತ್ತ ರೂ.1,05,998-00ನ್ನು ನಾಡ ಗ್ರಾಮ ಪಂಚಾಯತ್‌ನಿಂದ ಪಾವತಿಸಲಾಗಿದೆ.

ಆದರೆ ಇದೇ ವಿದ್ಯುತ್ ಸಾಮಗ್ರಿಗಳನ್ನು ಸ್ಥಳೀಯ ಮಾರುಕಟ್ಟೆ ಧಾರಣೆಯಂತೆ ಸ್ಪರ್ಧಾತ್ಮಕ ದರದಲ್ಲಿ ಖರೀದಿಸಲು ಕೇವಲ ರೂ.52160-00 ಮಾತ್ರ ವೆಚ್ಚ ಆಗುತ್ತದೆ. ಈ ಅಕ್ರಮ ಖರೀದಿ ವ್ಯವಹಾರದಿಂದಾಗಿ ನಾಡ ಗ್ರಾಮ ಪಂಚಾಯತ್‌ಗೆ ಸರಿ ಸುಮಾರು ಹಣ ಅರ್ಧ ಲಕ್ಷಕ್ಕೂ ಮಿಕ್ಕಿ ನಷ್ಟ ಉಂಟು ಮಾಡಲಾಗಿದೆ.

ಈ ವಿದ್ಯುತ್ ಸಾಮಗ್ರಿಗಳ ಖರೀದಿ ವ್ಯವಹಾರಕ್ಕೆ ಗ್ರಾಮ ಪಂಚಾಯಿತಿನಿಂದ ಬೇಡಿಕೆ ಪಟ್ಟಿಯನ್ನು ಸಾಮಾನ್ಯ ಸಭೆಯಲ್ಲಿ ಕ್ರಮಬದ್ಧವಾಗಿ ಅನುಮೋದನೆ ಪಡೆದಿರುವುದಿಲ್ಲ.

ಖರೀದಿಸಿದ ವಿದ್ಯುತ್ ಸಾಮಗ್ರಿಗಳಿಗೆ ಹಣ ಪಾವತಿಸಲು ಗ್ರಾಮ ಪಂಚಾಯಿತಿ ಯಾವುದೇ ನಿರ್ಣಯ ಮಂಜೂರಾತಿ ಮಾಡಿರುವುದಿಲ್ಲ. 2009ರಲ್ಲಿ ಖರೀದಿಸಿದ ವಿದ್ಯುತ್ ಸಾಮಗ್ರಿಗಳ ಬಿಲ್‌ನ ಹಣ ಎರಡು ವರ್ಷಗಳ ನಂತರ 2011ರಲ್ಲಿ ಪಾವತಿ ಮಾಡಿರುವುದರ ಹಿಂದಿನ ಉದ್ದೇಶ ತನಿಖೆಯಾಗಬೇಕು. ಸ್ಪರ್ಧಾತ್ಮಕ ದರ ಪಟ್ಟಿಯಂತೆ ವಿದ್ಯುತ್ ಸಾಮಗ್ರಿಗಳ ಸ್ಥಳೀಯ ಪೂರೈಕೆದಾರರಿರುವಾಗ ದೂರದ ಉಡುಪಿ, ಮಣಿಪಾಲದ ಇಲೆಕ್ಟ್ರಿಕಲ್ ಅಂಗಡಿಯ ಅತಿ ಹೆಚ್ಚು ದರ ನಮೂದಿಸಿರುವ ಕೊಟೇಷನ್ ಪಡೆಯುವ ಅವಶ್ಯಕತೆ ಅನುಮಾನಕ್ಕೆ ಎಡೆ ಮಾಡಿದೆ.


ಈ ಎಲ್ಲಾ ಅವ್ಯವಹಾರ ಪ್ರಕರಣಗಳನ್ನು ಸಮಗ್ರ ತನಿಖೆಗೆ ಒತ್ತಾಯಿಸಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (AIAWU) ಕುಂದಾಪುರ ತಾಲ್ಲೂಕು ಸಮಿತಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಇವರು ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ದೂರು ದಾಖಲಿಸಿರುತ್ತಾರೆ.

ವರದಿ : ವೆಂ.ಕೊ.

ಕಾರ್ಮಿಕ ದ್ರೋಹಿ ಪಿಂಚಣಿ ಯೋಜನೆ ಪಾರ್ಲಿಮೆಂಟಿನ ಸ್ಥಾಯಿ ಸಮಿತಿಯಲ್ಲೇ ತಕರಾರು

ಎಸ್.ಪ್ರಸನ್ನಕುಮಾರ್

ಹೊಸ ಪಿಂಚಣಿ ಯೋಜನೆಯನ್ನು ಕೇಂದ್ರ ಸರಕಾರವು ಹಾಗೂ ರಾಜ್ಯ ಸರಕಾರಗಳು ಬಲವಂತವಾಗಿ ಸರಕಾರಿ ನೌಕರರಿಗೆ ಜಾರಿಗೊಳಿಸಿದ್ದೂ ಸರಕಾರಗಳ ಆರ್ಥಿಕ ಹೊರೆ ಕಡಿಮೆ ಮಾಡುವ ಸಲುವಾಗಿ ಅನಿವಾರ್ಯ ಎಂದು ಪ್ರತಿಪಾದಿಸಲಾಗಿದೆ. 2004 ರಿಂದ ಜಾರಿಗೆ ತಂದಿರುವ ಪಿಂಚಣಿ ಯೋಜನೆಯ ಕಾನೂನು ಚೌಕಟ್ಟೇ ಇನ್ನೂ ರೂಪಿಸಲಾಗಿಲ್ಲ. ಪಾರ್ಲಿಮೆಂಟ್‌ನಲ್ಲಿ ಪಿಂಚಣಿ ನಿಧಿ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಮತ್ತೊಮ್ಮೆ ಮಾರ್ಚ್ 24,2011 ರಂದು ಮಂಡಿಸಲಾಯಿತು. ಸದರಿ ಮಸೂದೆಯನ್ನು ಪಾರ್ಲಿಮೆಂಟನ ಸ್ಟಾಂಡಿಂಗ್ ಸಮಿತಿಗೆ ಪರಿಶೀಲನೆಗಾಗಿ ಕಳುಹಿಸಲಾಯಿತು. ಹಣಕಾಸು ಸ್ಟಾಂಡಿಂಗ್ ಸಮಿತಿಯ ಅಧ್ಯಕ್ಷರಾಗಿ ಮಾಜಿ ಹಣಕಾಸು ಮಂತ್ರಿಗಳಾದ ಹಾಗೂ ಬಿಜೆಪಿ ಮುಖಂಡರಾದ ಯಶವಂತ ಸಿನ್ಹಾ ಹಾಗೂ ಕಾಂಗ್ರೆಸ್, ಮತ್ತು ಇತರ ಪಕ್ಷಗಳ ಪ್ರತಿನಿಧಿಗಳು ಈ ಸಮಿತಿಯಲ್ಲಿ ಸದಸ್ಯರಾಗಿದ್ದಾರೆ. ಸದರಿ ಸಮಿತಿಯು ಪರಿಶೀಲನೆ ನಂತರ ತನ್ನ ವರದಿಯನ್ನು ಆಗಸ್ಟ್ 30, 2011 ರಂದು ಸಲ್ಲಿಸಿದೆ.



ಈ ವರದಿಯಲ್ಲಿನ ಅಂಶಗಳು ಆಸಕ್ತಿದಾಯಕವಾಗಿವೆ. ಸಿಐಟಿಯು ಮತ್ತು ನೌಕರರು, ಕಾರ್ಮಿಕರು ಹೊಸ ಪಿಂಚಣಿ ಯೋಜನೆಯ ವ್ಯವಸ್ಥೆ ಹಾಗೂ ವಿಧಾನ ಕುರಿತು ವ್ಯಕ್ತ ಪಡಿಸಿದ ಆತಂಕಗಳು, ವಿರೋಧಗಳು ಸಮರ್ಪಕವಾಗಿವೆ ಎನ್ನುವುದಕ್ಕೆ ಪುರಾವೆಗಳನ್ನು ನೀಡಿದೆ. ಸಿಐಟಿಯು ಸದರಿ ಪಿಂಚಣಿ ಯೋಜನೆಗೆ ವಿರೋಧ ಮಾಡುವಾಗ ನೀಡಿದ ಕಾರಣಗಳು ಸರಿಯೆಂದು ಸಾಬೀತಾಗಿದೆ. 3 ಅಂಶಗಳನ್ನು ಸ್ಟಾಂಡಿಂಗ್ ಸಮಿತಿಯು ಗುರುತಿಸಿದೆ. 1. ಕಾರ್ಮಿಕರು ಪಾವತಿಸಿದ ಕೊಡುಗೆಗಳಿಗೆ ಭದ್ರತೆ ಇಲ್ಲ. 2.

ಷೇರು ಪೇಟೆಯಲ್ಲಿ ಈಗ ಶೇ 15 ರಷ್ಟು ಹೂಡಿಕೆ ಮಾಡುವ ಕಡ್ಡಾಯ ಮಾಡುವುದು ಸಮಂಜಸವೇ ಎಂಬ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿ ತೋರಿದೆ. ಆದ್ದರಿಂದ ಶೇ 100 ರಷ್ಟು ಹೂಡಿಕೆಯು ಸರಕಾರಿ ಬಾಂಡ್‌ಗಳಲ್ಲಿ ಹೂಡಲು ಅವಕಾಶವಿರಬೇಕೆಂದು ಸಿಫಾರಸ್ಸು ಮಾಡಲಾಗಿದೆ. ಇದುವರೆಗೆ ಸರಕಾರಿ ನೌಕರರು ಒಟ್ಟು 23.56 ಲಕ್ಷ ಸದಸ್ಯರಾಗಿದ್ದಾರೆ. ಹಾಗೂ ಅಸಂಘಟಿತ ಕಾರ್ಮಿಕರು 51000 ಕಾರ್ಮಿಕರು ಸದಸ್ಯರಾಗಿದ್ದಾರೆ. ಇವರಿಂದ ರೂ.9924.72 ಕೋಟಿ ಹಣ ಸಂಗ್ರಹವಾಗಿ ಸರಕಾರದಲ್ಲಿ ಜಮಾ ಆಗಿದೆ. ಅಸಂಘಟಿತ ಕಾರ್ಮಿಕರ ಹಣ ಹೂಡಿಕೆಯಿಂದ ಗಳಿಸಲಾದ ಮೊತ್ತ ಕನಿಷ್ಟ ಶೇ 1.82 ರಾಜ್ಯ ಸರಕಾರಿ ನೌಕರರ ಹಣ ಹೂಡಿಕೆ ಯಿಂದ ಗಳಿಸಿದ ಮೊತ್ತ ಶೇ 5.94 ಮಾತ್ರ ಸಾಧ್ಯವಾಗಿದೆ. ಕೇಂದ್ರ ಸರಕಾರಿ ನೌಕರರ ಹಣ ಹೂಡಿಕೆಯಿಂದ ಬಂದದ್ದು ಕೇವಲ ಶೇ 8.05 ಮಾತ್ರ. ಆದ್ದರಿಂದಲೇ ಸ್ಥಾಯಿ ಸಮಿತಿ ಯು ತನ್ನು ವರದಿಯಲ್ಲಿ ಹಣ ಹೂಡಿಕೆಯಿಂದ ಗಳಿಕೆ ಭವಿಷ್ಯ ನಿಧಿ ಯೋಜನೆಯಲ್ಲಿ ಸಿಗುವ ಬಡ್ಡಿಗಿಂತಲೂ ಕಡಿಮೆ ಇರಬಾರದೆಂದು ಸಿಫಾರಸ್ಸು ಮಾಡಲಾಗಿದೆ.

ಅಲ್ಲದೇ ಗ್ಯಾರಂಟಿ ಪಿಂಚಣಿ ಮೊತ್ತ ಇಲ್ಲದಿದ್ದರೇ ಅದನ್ನು ವೃದ್ಧಾಪ್ಯದ ಸಾಮಾಜಿಕ ಭದ್ರತೆ ಎಂದು ಪರಿಗಣಿಸಲು ಸಾಧ್ಯವೇ ಎಂದು ಪ್ರಶ್ನೆಯನ್ನು ಮುಂದಿಟ್ಟಿದೆ. ಗ್ಯಾರಂಟಿ ಪಿಂಚಣಿ ನೀಡಲು ಹಣದ ಕೊರತೆ ಈ ಯೋಜನೆಯಲ್ಲಿ ಆದರೇ ಸರಕಾರವು ಬಡ್ಜೆಟ್ ಮೂಲಕ ಹಣಕಾಸು ಸಂಪನ್ಮೂಲಗಳನ್ನು ಒದಗಿಸಬೇಕೆಂದು ಸಿಫಾರಸ್ಸು ಮಾಡಿದೆ. ಟೈರ್ 1 ಖಾತೆಯಲ್ಲಿ ಹಣ ಹಿಂಪಡೆಯಲು ಇದುವರೆಗೆ ಅವಕಾಶ ವಿಲ್ಲ ಎಂದು ನಿಯಮಗಳನ್ನು ರೂಪಿಸಲಾಗಿದೆ. ಆದರೇ ಈಗ ಸ್ಥಾಯಿ ಸಮಿತಿಯು ಈ ಖಾತೆಯಲ್ಲು ಶೇ 50 ರವರೆಗೆ ಹಿಂಪಡೆಯಲು ಅವಕಾಶವಿರಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಪಿಂಚಣಿ ನಿರ್ವಹಣೆ ವೆಚ್ಚಗಳು ಹೆಚ್ಚಾಗದಂತೆ ಶಿಫಾರಸ್ಸು ಮಾಡಲಾಗಿದೆ. ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡುವ ಬಗ್ಗೆ ಕಾನೂನಿನಲ್ಲೇ ನಿಯಮ ಒಳಗೊಳ್ಳಬೇಕು. ವಿದೇಶ ನೇರ ಬಂಡವಾಳ ಹೂಡಿಕೆಯು ಪಿಂಚಣಿ ಯೋಜನೆಯಲ್ಲಿ ಮಾಡಲು ಸರಕಾರದ ಇಚ್ಛೆಯಂತೆ ಅಧಿಕಾರ ಉಪಯೋಗಿಸುವ ವಿಧಾನ ಸರಿಯಲ್ಲ. ಆದ್ದರಿಂದ ಕಾನೂನು ಮೂಲಕ ಪಾರ್ಲಿ ಮೆಂಟಿನ ಪರವಾನಿಗೆ ಪಡೆಯುವುದು ಅನಿವಾರ್ಯ ವಾಗಿರಬೇಕೆಂದು ಶಿಫಾರಸ್ಸು ಮಾಡ ಲಾಗಿದೆ. ಪಿಂಚಣಿ ನಿಧಿ ಮೇನೇಜರ್ ಗಳ ನೇಮಕದಲ್ಲಿ ಸರಕಾರಿ ಕಂಪನಿಗಳಿಗೆ ಆದ್ಯತೆ ನೀಡಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಅಲ್ಲದೇ ಪಿಂಚಣಿ ನಿಧಿ ಸಲಹಾ ಸಮಿತಿಯು ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಒಳಗೊಂಡು 25 ಸದಸ್ಯರ ಒಳಗೆ ಇರುವಂತೆ ಶಿಫಾರಸ್ಸು ಮಾಡಲಾಗಿದೆ.

ಈ ಎಲ್ಲಾ ಶಿಫಾರಸ್ಸುಗಳು ಸಿಐಟಿಯು ಎತ್ತಿದ ವಿರೋಧಗಳು ಅಭ್ಯಂತರಗಳು ಸತ್ಯ ಹಾಗೂ ಸಕಾರಣದಿಂದ ಕೂಡಿದೆ ಎಂಬುದು ಸಾಬೀತು ಮಾಡುತ್ತಿವೆ. ಆದ್ದರಿಂದ ದುಡಿಯುವ ಜನತೆಯ ಬೆವರಿನ ದುಡಿಮೆಯಿಂದ ಉಳಿತಾಯ ಮಾಡುವ ಹಣಕ್ಕೆ ಭದ್ರತೆ ಹಾಗೂ ಖಚಿತವಾದ ಲಾಭ ಮತ್ತು ಸಾಮಾಜಿಕ ಭದ್ರತೆಯ ಪಿಂಚಣಿಗಾಗಿ ಹೋರಾಟವನ್ನು ತೀವ್ರ ಗೊಳಿಸುವುದೆ ತುರ್ತು ಕರ್ತವ್ಯವೆಂಬುದು ಸ್ಪಷ್ಟವಾಗುತ್ತದೆ. ಹಣಕಾಸು ಬಂಡವಾಳದಾರರ ಹಿತಕ್ಕಾಗಿ ಸರಕಾರಗಳು ನೌಕರರ ಹಾಗೂ ಕಾರ್ಮಿಕರ ಹಣವನ್ನು ಕೊಳ್ಳೆಹೊಡೆಲು ಹವಣಿಸುತ್ತಿದೆ ಎನ್ನುವುದು ಬಯಲಾಗುತ್ತಿದೆ. ಕಾರ್ಮಿಕರ ಹಿತ ಕಾಪಾಡುವ ವರ್ಗ ಹೋರಾಟಕ್ಕೆ ಸಿದ್ದರಾಗಬೇಕಿದೆ. ●

ಪದವಿಯ ಹಣ

ಈ ಪದವಿ ಅನ್ನುವುದು ಸಾಮಾನ್ಯ ಅಲ್ಲ
ಮನವಿರದ ಜನಗಳಿಗೆ ದಕ್ಕುವುದೇ ಇಲ್ಲ
ಹಣ ತೆತ್ತು ಪಡೆಯುವುದು ಈ ಪದವಿ ಚಿತ್ರ
ಅದು ಪದವಿ ಅಲ್ಲವೋ ಅದರ ಹಣ ಮಾತ್ರ.

- ವಿಡಂಬಾರಿ

ಹಣವೇ ದೇವ

ಬೇರೆ ಯಾತಕ್ಕಲ್ಲ ಪಠಿಸುವುದು ಮಂತ್ರ
ಹಣವುಳ್ಳ ಭಾವುಕರ ಬರಸೆಳೆವ ತಂತ್ರ
ಆ ಜನತೆ ಹಣ ಒಂದೆ ಪರಮಾತ್ಮನೋಡಿ
ಹಣಕ್ಕಾಗಿ ಮಾಡುವುದು ಏನೆಲ್ಲಾ ಮೋಡಿ

- ವಿಡಂಬಾರಿ

ಇದು ನಿಮಗೆ ಗೊತ್ತೆ?

ದಿನಕ್ಕೆ ಎರಡು ರೂ. ತರಕಾರಿ ಕೊಳ್ಳಬಲ್ಲಿರಾ? ಹಾಗಿದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಿದೆ ಯೋಜನಾ ಆಯೋಗ

ಮಹಾನ್ ಭಾರತದ ರಾಷ್ಟ್ರೀಯ ಯೋಜನಾ ಆಯೋಗ ದೇಶದ ಸರ್ವೋಚ್ಚ ನ್ಯಾಯಾಲಯದ ಎದುರು ಸಲ್ಲಿಸಿದ ಪ್ರಮಾಣ ಪತ್ರದ ಪ್ರಕಾರ ಹಾಲಿಗೆ ದಿನಕ್ಕೆ ಎರಡೂವರೆ ರೂಪಾಯಿ, ಬೇಳೆಗಳಿಗೆ ಒಂದೂ ಕಾಲು ರೂಪಾಯಿ, ತರಕಾರಿಗೆ ಎರಡು ರೂಪಾಯಿ ಕೊಡಲು ಸಾಧ್ಯವಿದ್ದರೆ ಈ ಪುಣ್ಯ ಭೂಮಿಯಲ್ಲಿ ಹಾಯಾಗಿರಬಹುದು.

ನಗರ ಪ್ರದೇಶಗಳಲ್ಲಿ ದಿನಕ್ಕೆ 32ರೂ. ಮತ್ತು ಗ್ರಾಮಾಂತರದಲ್ಲಿ 26ರೂ. ಖರ್ಚು ಮಾಡಬಲ್ಲವರು ಬಡವರಲ್ಲ, ಅವರಿಗೆ ಸರಕಾರದಿಂದ ಯಾವುದೇ ಸಬ್ಸಿಡಿಯ ಅಗತ್ಯವಿಲ್ಲ ಎಂದು ಯೋಜನಾ ಆಯೋಗದ ಲೆಕ್ಕಾಚಾರವನ್ನು ಬಿಡಿಸಿದಾಗ ಸಿಗುವ ಅಂಕೆ-ಸಂಖ್ಯೆಗಳನ್ನು ನೋಡಿ:

ಆಹಾರಧಾನ್ಯಗಳು	ರೂ. 5.50
ಬೇಳೆ ಕಾಳುಗಳು	1.02
ಹಾಲು	2.33
ಅಡುಗೆ ಎಣ್ಣೆ	1.55
ತರಕಾರಿ	1.95
ಹಣ್ಣು	0.44
ಸಕ್ಕರೆ	0.70
ಉಪ್ಪು ಮತ್ತು ಇತರ ಮಸಾಲೆ ಪದಾರ್ಥಗಳು	0.78
ಇತರೆ ಆಹಾರ ವಸ್ತುಗಳಿ	1.51

ಇಷ್ಟೂ ಹಣ ಇಲ್ಲದವರು ಮಾತ್ರ ಬಡವರು, ಸ್ವಲ್ಪ ಕಷ್ಟ ಪಡಬೇಕಾದೀತು. ಅವರಿಗೆ ಸರಕಾರ ಏನಾದರೂ ಸಹಾಯ ಮಾಡಬಹುದು. ಇದಕ್ಕಿಂತ ಒಂದು ಪೈಸೆ ಹೆಚ್ಚಿದ್ದರೂ ಈ ಘನ ಸರಕಾರ ಅವರಿಗೆ ಏನೂ ಮಾಡಬೇಕಿಲ್ಲ. ಅವರು ಹಾಯಾಗಿ ಬದುಕು ಸಾಗಿಸಬಹುದು; ಸರಕಾರ ಅಂಬಾನಿಗಳು ಇತ್ಯಾದಿಗಳಿಗೆ ಲಾಭ ದಕ್ಕುವಂತೆ ಮಾಡುವ ಘನ ಕರ್ತವ್ಯವನ್ನು ಈಡೇರಿಸಲು ಗಮನ ಹರಿಸಬೇಕು!

ಭಾರತದ ಯೋಜನಾ ಆಯೋಗದ ಪ್ರಕಾರ ಸೀಮೆ ಎಣ್ಣೆ/ಅಡುಗೆ ಅನಿಲಕ್ಕೆ ತಿಂಗಳಿಗೆ 120 ರೂ., ಮನೆಬಾಡಿಗೆ ಮತ್ತು ಓಡಾಟಕ್ಕೆ 50 ರೂ., ವೈದ್ಯಕೀಯ ವೆಚ್ಚಕ್ಕೆ 40 ರೂ., ಮಕ್ಕಳ ಶಿಕ್ಷಣಕ್ಕೆ 30ರೂ., ಬಟ್ಟೆ-ಬರೆಗೆ 62 ರೂ. ಸಾಕು! ಇಷ್ಟಿದ್ದರೆ ಭಾರತವೇ ಸ್ವರ್ಗ! ಇದು ಪ್ರಸಿದ್ಧ ಆರ್ಥಿಕ ತಜ್ಞರೂ ಆದ ನಮ್ಮ ಪ್ರಧಾನ ಮಂತ್ರಿಗಳು ಸೈ ಎಂದಿರುವ ಲೆಕ್ಕಾಚಾರ. ●

ಪ್ಯಾಲೆಸ್ತೈನ್‌ಗೆ ದೇಶವೆಂಬ ಸ್ಥಾನಮಾನಕ್ಕೆ ವಿರೋಧ

ಅಮೆರಿಕನ್ ಅಧ್ಯಕ್ಷರೇಕೆ ಎಗರಾಡುತ್ತಿದ್ದಾರೆ?



'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸೆಪ್ಟೆಂಬರ್-29ರ ಸಂಚಿಕೆಯ ಸಂಪಾದಕೀಯ ಆಧರಿಸಿ

ಅಧ್ಯಕ್ಷ ಒಬಾಮರ ಜನರನ್ನು ಮರುಳು ಮಾಡುವ ಮಾತಿನ ಅಬ್ಬರವೇನೇ ಇರಲಿ, ಆತನಂತೂ ಬಲಿಷ್ಠ ಯೆಹೂದಿ ಲಾಬ್ಬಿಯ ಪ್ರತಿಪಾದಕನಾಗಿ ಹೊಮ್ಮಿದ್ದಾರೆ. ಇದು ಜಾಗತಿಕ ಯಜಮಾನಿಕೆ ನಡೆಸುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಕುತಂತ್ರಗಳನ್ನು ಬಿಂಬಿಸುವಂತದ್ದು.

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಮೆರಿಕನ್ ಅಧ್ಯಕ್ಷ ಒಬಾಮರವರ ಭಾಷಣ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳನ್ನು ಬಿಂಬಿಸುವ ಮಾದರಿ ಭಾಷಣವೇ ಆಗಿತ್ತು. ಇಸ್ರೇಲ್ ಪ್ಯಾಲಿಸ್ತೀನಿ ನೆಲವನ್ನು ಆಕ್ರಮಿಸಿಕೊಂಡು ಯಾವುದೇ ಎಗ್ಗಿಲ್ಲದೆ ವಿಶ್ವಸಂಸ್ಥೆಯ ವಿವಿಧ ಠರಾವುಗಳ ನಗ್ನ ಉಲ್ಲಂಘನೆಗಳನ್ನು ಮಾಡುತ್ತಲೇ ಇದ್ದರೂ, ಮಿಲಿಟರಿ ಆಕ್ರಮಣಗಳನ್ನು ನಡೆಸುತ್ತಲೇ ಇದ್ದರೂ, ಅದಕ್ಕೆ ಸದಾ ಬೆಂಬಲವಾಗಿ ನಿಂತಿರುವಂತದ್ದು ಈ ಅಮೆರಿಕನ್ ಸಾಮ್ರಾಜ್ಯಶಾಹಿ. ಇಸ್ರೇಲ್ ಒಂದು ಸ್ವತಂತ್ರ ಪ್ಯಾಲೆಸ್ತೀನಿ ಪ್ರಭುತ್ವ ರಚನೆಯಾಗದಂತೆ ವಾಸ್ತವವಾಗಿಯೇ ತಡೆಯುತ್ತಿದೆ. ಇದು ಇಸ್ರೇಲಿನ ಜೊತೆ-ಜೊತೆಗೆ ಒಂದು ಪ್ಯಾಲೆಸ್ತೀನಿ ಪ್ರಭುತ್ವದ ರಚನೆಯಾಗಬೇಕೆಂದಿರುವ ವಿಶ್ವ ಸಂಸ್ಥೆಯ ಠರಾವು 181ರ ಸ್ಪಷ್ಟ ಉಲ್ಲಂಘನೆ.

ಕಳೆದ ವರ್ಷ ಅಧ್ಯಕ್ಷ ಒಬಾಮ ವಿಶ್ವಸಂಸ್ಥೆಯಲ್ಲಿ ಮಾಡಿದ ತನ್ನ ಭಾಷಣದಲ್ಲಿ 'ಪ್ಯಾಲೆಸ್ತೀನಿ ಪ್ರಭುತ್ವದ ಪ್ರತಿಪಾದನೆಯ ಭರವಸೆ ಮತ್ತು ದೃಢ ವಿಶ್ವಾಸ'ದ ಬಗ್ಗೆ ಹೇಳಿದ್ದರು. ತದ್ವಿರುದ್ಧವಾಗಿ, ಈ ವರ್ಷ "ಶಾಂತಿ ಬಹಳ ಕಠಿಣ" ಎನ್ನುತ್ತ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಪ್ಯಾಲೆಸ್ತೀನೀ ಪ್ರಭುತ್ವ ರಚನೆಯ ಪ್ರಯತ್ನ ನಡೆದರೆ ಅದರ ವಿರುದ್ಧ ವಿಟೋ(ನಿಷೇಧಾಧಿಕಾರ) ಪ್ರಯೋಗಿಸುವುದಾಗಿ ಪಣ ತೊಟ್ಟಿದ್ದಾರೆ.

ನವಂಬರ್ 9, 2008ರಂದು, ಒಬಾಮರವರ ಅಧ್ಯಕ್ಷ ಪೀಠಾರೋಹಣದ ಸಂದರ್ಭದಲ್ಲಿ, ಮೊತ್ತಮೊದಲ ಬಾರಿಗೆ ಓರ್ವ ಆಫ್ರಿಕನ್-ಅಮೆರಿಕನ್ ಅಮೆರಿಕಾ ಸಂಯುಕ್ತ ಸಂಸ್ಥಾನಗಳ 44ನೇ ಅಧ್ಯಕ್ಷರ ಪೀಠವನ್ನು ಏರುತ್ತಿರುವ ಬಗ್ಗೆ ವಿಶ್ವಾದ್ಯಂತ ಭಾವೋದ್ವೇಗ, ನಿರೀಕ್ಷೆಗಳು ಸೃಷ್ಟಿಯಾಗಿದ್ದಾಗ, ನಾವು, "ಇದನ್ನು ಒಂದು ಉತ್ತಮ ಜಗತ್ತನ್ನು ನಿರ್ಮಿಸಲು ಬಳಸಬಹುದೇ? ಆದರೆ, ಅಮೆರಿಕನ್ ಸಾಮ್ರಾಜ್ಯಶಾಹಿ ಕುರಿತಂತೆ ಹಿಂದಿನ ಅನುಭವಗಳು, ಚಿರತೆಯ ಪಟ್ಟೆಗಳೆಂದೂ ಬದಲಾಗುವುದಿಲ್ಲ ಎಂಬುದನ್ನು ತೋರಿಸುತ್ತವೆ. ಹಾಗಿದ್ದಲ್ಲಿ, ಅನುಭವದ ಮೇಲೆ ನಿರೀಕ್ಷೆಯ ವಿಜಯಕ್ಕಾಗಿ ಹೋರಾಟ ಮುಂದುವರೆಯುತ್ತದೆ" ಎಂದಿದ್ದೆವು. ಇದು ನಿಜವೇ ಎಂದು ಯಾರಿಗಾದರೂ ಸಂದೇಹವಿದ್ದಿದ್ದರೆ, ಅದೀಗ ಸಂಪೂರ್ಣ ನಿವಾರಣೆಯಾಗಿರಬೇಕು.

ಪ್ಯಾಲೆಸ್ತೀನಿಯರಿಗಂತೂ ಈ ಹೋರಾಟ ಮುಂದುವರೆಯುತ್ತಿದೆಯಷ್ಟೇ ಅಲ್ಲ, ಅದು ಖಂಡಿತವಾಗಿಯೂ ತೀವ್ರಗೊಳ್ಳುತ್ತದೆ.

ಝಿಯೊನಿಸ್ಟ್ ದನಿ

ಅತ್ಯಂತ ವ್ಯಾಪಕವಾದ ಪ್ರಸಾರವುಳ್ಳ ಇಸ್ರೇಲಿ ದಿನಪತ್ರಿಕೆ 'ಹಾರೆಟ್ಜ್' ಸಪ್ಟಂಬರ್ 23, 2011 ರಂದು ಹೀಗಂದಿದೆ: "ತೋರಿಕೆಗೆ ಇಸ್ರೇಲಿಗೆ ಸಂಭ್ರಮ ಪಡಲು ಕಾರಣಗಳಿವೆ. ಒಬಾಮರ ಭಾಷಣದ ದನಿ ಹಿಂದೆಂದಿಗಿಂತಲೂ ಹೆಚ್ಚು ಝಿಯೊನಿಸ್ಟ್ ಆಗಿ ಕೇಳಿಸಿದೆ. ಪ್ಯಾಲೆಸ್ತೀನಿಯನ್ ಪ್ರಾಧಿಕಾರದ ಮುಖಂಡತ್ವ ಅಮೆರಿಕಾದೊಂದಿಗೆ ಘರ್ಷಣೆಯ ದಾರಿ ಹಿಡಿದಿದೆ; ಅಮೆರಿಕನ್ನರಿಗೆ ಇನ್ನು ಮುಂದೆ ಇಸ್ರೇಲಿಗಳು ಮತ್ತು ಪ್ಯಾಲೆಸ್ತೀನಿಯನ್ನರ ನಡುವೆ ಮಧ್ಯಸ್ಥಿಕೆ ನಡೆಸಲು ಸಾಧ್ಯವಾಗಲಿಕ್ಕಿಲ್ಲ ಎಂದು ಪ್ಯಾಲೆಸ್ತೀನಿಯನ್ ವಿಮೋಚನಾ ಸಂಘಟನೆ(ಪಿಎಲ್‌ಒ)ಯ ಮಹಾ ಕಾರ್ಯದರ್ಶಿ ಯಾಸೆರ್ ಅಬೆದ್ ರಬ್ಬೋ ನಿನ್ನೆ ಚಾನೆಲ್ 2ರಲ್ಲಿ ಹೇಳಿದ್ದಾರೆ."

ಅಧ್ಯಕ್ಷ ಒಬಾಮರ ಜನರನ್ನು ಮರುಳು ಮಾಡುವ ಮಾತಿನ ಅಬ್ಬರವೇನೇ ಇರಲಿ, ಆತನಂತೂ ಬಲಿಷ್ಠ ಯೆಹೂದಿ ಲಾಬ್ಬಿಯ ಪ್ರತಿಪಾದಕನಾಗಿ ಹೊಮ್ಮಿದ್ದಾರೆ. ಇದು ಜಾಗತಿಕ ಯಜಮಾನಿಕೆ ನಡೆಸುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಕುತಂತ್ರಗಳನ್ನು ಬಿಂಬಿಸುವಂತದ್ದು. "ಪ್ಯಾಲೆಸ್ತೀನಿಯನ್ ಸದಸ್ಯತ್ವದ ಬಗ್ಗೆ ವಿಶ್ವ ಸಂಸ್ಥೆಯ ಮತ ವಿನಾಶಕಾರಿ" ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಅಪ್ಪಣೆ ಕೊಡಿಸಿದೆ. ಪ್ಯಾಲೆಸ್ತೀನಿಯನ್ನರು "ಇಸ್ರೇಲಿಗೆ ಕಿರುಕುಳ ಕೊಡುವ, ಅದನ್ನು ಕಾನೂನುಬಾಹಿರವಾಗಿಸುವ ಮತ್ತು ಅಂತಿಮವಾಗಿ ಧ್ವಂಸಗೊಳಿಸುವ ತಮ್ಮ ನಿರಂತರ ಪ್ರಚಾರದಲ್ಲಿ ಇನ್ನೊಂದು ಸಾಧನವನ್ನು ಬಳಸುತ್ತಿದ್ದಾರೆ" ಎಂದು ವಾಲ್ ಸ್ಟ್ರೀಟ್ ಜರ್ನಲ್ ಆರೋಪಿಸಿದೆ. ಸಂಪ್ರದಾಯ ಶರಣರ ಪ್ರಾಬಲ್ಯವಿರುವ ಅಮೆರಿಕಾದ ಸಂಸತ್ತು ಪ್ಯಾಲೆಸ್ತೈನ್‌ಗೆ ಮಾನ್ಯತೆ ನೀಡಿದರೆ ಹಣಸಹಾಯವನ್ನು ಹಿಂತೆಗೆದುಕೊಳ್ಳುವುದಾಗಿ ಬೆದರಿಸಿದೆ.

ಅಪಪ್ರಚಾರದ ಕಂತೆ

ಪ್ಯಾಲೆಸ್ತೀನಿಯನ್ನರು ಇಸ್ರೇಲಿ ಪ್ರಭುತ್ವವನ್ನು ಮಾನ್ಯ ಮಾಡುವುದಿಲ್ಲ ಎಂಬ ಅಮೆರಿಕಾ ಬೆಂಬಲಿತ ಇಸ್ರೇಲಿ ಸುಳ್ಳನ್ನು ಮತ್ತು ಅದರೊಂದಿಗೆ ಸುಳ್ಳು ಮಾಹಿತಿ ಹರಡುವ ವಿಶ್ವವ್ಯಾಪಿ ಅಪಪ್ರಚಾರದ ಕಂತೆಯನ್ನು ಬಯಲಿಗೆಳೆಯುತ್ತ ಪ್ಯಾಲೆಸ್ತೀನಿಯನ್ ಪ್ರಾಧಿಕಾರದ ಅಧ್ಯಕ್ಷ ಮಹಮುದ್ ಅಬ್ಬಾಸ್ ಪ್ಯಾಲೆಸ್ತೀನಿಯನ್ ಪ್ರಭುತ್ವಕ್ಕೆ 1967ರ ಗಡಿಗಳೊಳಗೆ ಇರುವ, ಇಸ್ರೇಲಿ ಪ್ರಭುತ್ವದೊಂದಿಗೆ ಶಾಂತಿಯಿಂದಿರುವ ಒಂದು ಪ್ರಭುತ್ವಕ್ಕೆ ಮಾನ್ಯತೆ ನೀಡಬೇಕೆಂದು ವಿಶ್ವ ಸಂಸ್ಥೆಯ ಮಹಾ ಕಾರ್ಯದರ್ಶಿ ಬಾನ್ ಕಿ-ಮೂನ್ ರವರಿಗೆ ಒಂದು ಅಧಿಕೃತ ಮನವಿಯನ್ನು ಸಲ್ಲಿಸಿದ್ದಾರೆ. ಇದು ವಿಶ್ವಸಂಸ್ಥೆಯ ನಿರ್ಣಯ 181ನ್ನು ಆಧರಿಸಿದೆ; ಈ ನಿರ್ಣಯ ಪೂರ್ವ ಜೆರುಸಲೇಂ ಪ್ಯಾಲೆಸ್ತೀನಿ ಪ್ರಭುತ್ವದ ರಾಜಧಾನಿ ಎಂದೂ ಪ್ರಸ್ತಾಪಿಸಿದೆ.

ಪಾಶ್ಚಿಮಾತ್ಯ ಏಜೆನ್ಸಿಗಳು ನಡೆಸಿರುವ ಅಭಿಪ್ರಾಯ ಸಂಗ್ರಹಗಳಲ್ಲಿ ವಿಶ್ವಾದ್ಯಂತ 83 ಶೇಕಡಾ ಪ್ಯಾಲೆಸ್ತೀನಿಯನ್ನರು ವಿಶ್ವಸಂಸ್ಥೆಯಲ್ಲಿನ ಪ್ರಯತ್ನವನ್ನು ಅತ್ಯುತ್ಸಾಹದಿಂದ ಬೆಂಬಲಿಸಿದ್ದಾರೆ. ಹಲವು ಅರಬ್ ದೇಶಗಳು "ಅಮೆರಿಕಾ ವಿಟೋ ಪ್ರಯೋಗಿಸಿದರೆ ಅರಬ್ ಮತ್ತು ಮುಸ್ಲಿಂ ಜಗತ್ತಿನೊಡನೆ ಸಂಬಂಧಗಳನ್ನು ಸರಿಪಡಿಸುವ ಅದರ ಬಡಾಯಿಯೆಲ್ಲ ನಿರರ್ಥಕವಾಗುತ್ತದೆ ಎಂದು ಕಟ್ಟೆಚ್ಚರಿಕೆಯನ್ನು ಕೊಟ್ಟಿವೆ" ಎಂದು 'ದಿ ಇಕನಾಮಿಸ್ಟ್' ಪತ್ರಿಕೆ ವರದಿ ಮಾಡಿದೆ. "ದೀರ್ಘ ಕಾಲ ಸೌದಿ ಬೇಹುಗಾರಿಕೆಯ ಮುಖ್ಯಸ್ಥನಾಗಿದ್ದಾತ, ಅಮೆರಿಕಾ ಪ್ಯಾಲೆಸ್ತೈನ್ ಪ್ರಭುತ್ವವನ್ನು ಮಾನ್ಯ ಮಾಡುವುದರ ವಿರುದ್ಧ ಅಮೆರಿಕಾ ಮತ ನೀಡಿದರೆ ಅದರೊಂದಿಗೆ ಇದುವರೆಗೆ ಚಾರಿತ್ರಿಕವಾಗಿ ಸಹಕರಿಸಿದ ರೀತಿಯಲ್ಲಿ ಮುಂದೆಯೂ ಸಹಕರಿಸುತ್ತಿರಲು ಸೌದಿ ಅರೇಬಿಯಾಕ್ಕೆ ಸಾಧ್ಯವಾಗಲಿಕ್ಕಿಲ್ಲ" ಎಂದು ಹೇಳಿರುವುದಾಗಿ ಆ ಪತ್ರಿಕೆ ವರದಿ ಮಾಡಿದೆ.

ಪ್ರಸಕ್ತ ತೀವ್ರ ಹಣಕಾಸು ಬಿಕ್ಕಟ್ಟಿನ ಮತ್ತು ಹಿಂಜರಿತದ ಹಿನ್ನೆಲೆಯಲ್ಲಿ, ತನ್ನ ಮರುಚುನಾವಣೆಯತ್ತ ಸಾಗುತ್ತಿರುವ ಅಧ್ಯಕ್ಷ ಒಬಾಮ ಎಲ್ಲೆಡೆಗಳಿಂದ ಹೊಡೆತಗಳಿಗೊಳಗಾಗಿರುವ ಅಮೆರಿಕನ್ ಆರ್ಥಿಕವನ್ನು ನವೀಕರಿಸಲು ನಡೆಸಿರುವ ಪ್ರಯತ್ನದಲ್ಲಿ ಯೆಹೂದಿ ಲಾಬ್ಬಿಯ ಹತೋಟಿಯಲ್ಲಿರುವ ಹಣಕಾಸು ಬಂಡವಾಳ ಒಂದು ಪ್ರಮುಖ ಅಂಶವಾಗಿರುವುದರಿಂದ ಆತ ಈ ಉಗ್ರ ನಿಲುವು ತಳೆದಿದ್ದಾರೆ ಎಂಬುದಂತೂ ಸ್ಪಷ್ಟ. ಇದು ಅಫಘಾನಿಸ್ತಾನದಲ್ಲಿ, ಆತನ ಆಫ್-ಪಾಕ್ ಧೋರಣೆ ಉಂಟು ಮಾಡಿದ ಬಿಕ್ಕಟ್ಟಿನಲ್ಲಿ ಕಾಣಬರುತ್ತಿರುವ ಸಾಮ್ರಾಜ್ಯಶಾಹಿ ಆಕ್ರಮಣಕೋರತನಕ್ಕೆ ಅನುಗುಣವಾಗಿಯೇ ಇದೆ. ಇದು ಎಂತಹ ಮಟ್ಟ ತಲುಪಿದೆಯೆಂದರೆ, ದಕ್ಷಿಣ ಏಶ್ಯಾದಲ್ಲಿ ಅದರ ದೀರ್ಘ ಕಾಲದ ಅಡಿಯಾಳಾಗಿರುವ ಪಾಕಿಸ್ತಾನ, ತನ್ನ ವಿದೇಶಾಂಗ ಮಂತ್ರಿಯನ್ನು ಅಮೆರಿಕಾ ಭೇಟಿಯಿಂದ ಹಿಂದಕ್ಕೆ ಕರೆಸಿಕೊಳ್ಳುವ ಅಭೂತಪೂರ್ವ ಕ್ರಮಕ್ಕೆ ಮುಂದಾಗಿದೆ.

ಮೂಲಭೂತ ಹಕ್ಕಿನ ನಿರಾಕರಣೆ

ಇಂತಹ ಸನ್ನಿವೇಶದಲ್ಲಿ ತನ್ನ ಜಾಗತಿಕ ಯಜಮಾನಿಕೆಯನ್ನು ಇನ್ನಷ್ಟು ಬಲಪಡಿಸಿಕೊಳ್ಳುವ ಅಮೆರಿಕನ್ ಕುತಂತ್ರಗಳು ವಿಶ್ವದ ಜನಸಂಖ್ಯೆಯ ಬಹುಪಾಲು ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೊರಿಸುತ್ತವಷ್ಟೇ. ಅಂದರೆ ಪ್ಯಾಲೆಸ್ತೀನಿಯನ್ನರಿಗೆ ಪ್ರಭುತ್ವ ರಚಿಸುವ ಮೂಲಭೂತ ಹಕ್ಕಿನ ನಿರಾಕರಣೆ ಮುಂದುವರೆದಿದೆ ಎಂದೇ ಅರ್ಥ

ಆದರೆ, ಅಮೆರಿಕಾ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ತನ್ನ ವಿಟೋ ಅಧಿಕಾರವನ್ನು ಪ್ರಯೋಗಿಸುವ ಬೆದರಿಕೆ ಒಡ್ಡಿದರೆ ಏನಾಗಬಹುದು? 'ಒಂದು ನಿರ್ದಿಷ್ಟ ವೇಳಾಪಟ್ಟಿಯಿಲ್ಲದ ಪುನರ್ವಿಮರ್ಶಾ ಪ್ರಕ್ರಿಯೆ'

ಪುಟ 14 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಗದಗಲ

ಉತ್ತರ ಆಫ್ರಿಕಾದ ತೈಲಭರಿತ ಲಿಬಿಯಾ ದೇಶದ ಮೇಲೆ ನ್ಯಾಟೋ ಪಡೆಗಳು ಮುಗಿಬಿದ್ದು ದಾಳಿ ನಡೆಸಿವೆ. 'ಸರ್ವಾಧಿಕಾರಿ' ಗಡಾಫಿ ಆಡಳಿತ ಕೊನೆಗೊಂಡ ಮೇಲೆ ಜನತೆಯ ಬದುಕಿಗೆ ಏನೇನು ಲಾಭವಾಗಲಿದೆ. ಓದಿ....

ಲಿಬ್ಯಾದಲ್ಲಿ ನಾಟೋ ಅಧಿಪತ್ಯ

–ತೈಲ ಹಂಚಿಕೆ ಸಂಚು–

■ ಶರತ್ ಚಂದ್ರ



ಲಿಬ್ಯಾದಲ್ಲಿ ಏನಾಗುತ್ತಿದೆ ಎಂಬುದು ಇನ್ನೂ ಸ್ಪಷ್ಟವಿಲ್ಲ. ಗದ್ದಾಫಿ ಸರ್ಕಾರ ಬಿದ್ದು ಹೋಗಿದೆ. ದಂಗೆಕೋರರು ರಾಜಧಾನಿ ಟ್ರಿಪೋಲಿ ವಶ ಪಡಿಸಿಕೊಂಡಿದ್ದಾರೆ. ಜನ ಸಂತಸದ, ನಿಟ್ಟುಸಿರು ಬಿಟ್ಟಿದ್ದಾರೆ... ಹೊಸ ಸರ್ಕಾರವನ್ನು ಸ್ವಾಗತಿಸಿದ್ದಾರೆ ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ಹೇಳುತ್ತಿವೆ. ಆದರೆ ಗದ್ದಾಫಿಯನ್ನು ಇನ್ನೂ ಸೆರೆ ಹಿಡಿಯಲು ಸಾಧ್ಯವಾಗಿಲ್ಲ. ಗದ್ದಾಫಿ ಪಡೆಗಳು ಮತ್ತು ದಂಗೆಕೋರ ಪಡೆಗಳ ನಡುವೆ ಘರ್ಷಣೆ ರಾಜಧಾನಿಯಲ್ಲೂ ಇತರ ಪಟ್ಟಣಗಳಲ್ಲಿ ಇನ್ನೂ ನಡೆಯುತ್ತಿದೆ. ಗದ್ದಾಫಿ ಪಡೆಗಳ ಮೇಲೆ ದಾಳಿ ಹೆಸರಲ್ಲಿ ನಾಗರಿಕರ ಮೇಲೆ ಬರ್ಬರ ನಾಟೋ ಬಾಂಬ್ ದಾಳಿ ಮುಂದುವರೆದಿದೆ. ರಾಜಧಾನಿ ಟ್ರಿಪೋಲಿಯಲ್ಲೂ ಇತರ ಪಟ್ಟಣಗಳಲ್ಲೂ ದಂಗೆಕೋರ ಪಡೆಗಳಿಗೆ ಪೂರ್ಣ ನಿಯಂತ್ರಣ ಇಲ್ಲ. ಕಾನೂನು ಮತ್ತು ಸುವ್ಯವಸ್ಥೆ ಪೂರ್ಣವಾಗಿ ಮುರಿದು ಬಿದ್ದಿದೆ. ಪುಂಡರಿಂದ ಮತ್ತು ದಂಗೆಕೋರ ಪಡೆಗಳ ವಿಭಾಗಗಳಿಂದ ಲೂಟಿ ಕೊಲೆ ಅವ್ಯಾಹತವಾಗಿ ಮುಂದುವರೆದಿದೆ. ದಂಗೆಕೋರ ಜನರಲ್ ಒಬ್ಬನನ್ನು ದಂಗೆಕೋರ ನಿಯಂತ್ರಣ ಇರುವ ಪ್ರದೇಶದಲ್ಲೇ ಇನ್ನೊಂದು ದಂಗೆಕೋರ ಗುಂಪಿನವರು ಕೊಲೆ ಮಾಡಿದ್ದಾರೆ. ಟ್ರಿಪೋಲಿ ಮತ್ತು ದೇಶದ ಬಹು ಭಾಗಗಳಲ್ಲಿ ನಾಟೋ ಬಾಂಬ್ ದಾಳಿಯಿಂದಾಗಿ ಮೂಲಭೂತ ಸೌಕರ್ಯಗಳ ನಾಶ ಆಗಿದೆ. ವಿದ್ಯುತ್, ನೀರು, ಆಹಾರ ವಸ್ತುಗಳು, ಔಷಧಿಗಳ ತೀವ್ರ ಕೊರತೆಯಿಂದ ಜನ ನರಳುತ್ತಿದ್ದಾರೆ.

'ಮಾನವೀಯ ಮಿಶನ್'ಗೆ ಜಿಹಾದಿ-ನಾಟೋ ಮೈತ್ರಿ !

ದಂಗೆಕೋರ ಗುಂಪುಗಳ ಕೂಟವಾದ 'ರಾಷ್ಟ್ರೀಯ ತಾತ್ಕಾಲಿಕ ಮಂಡಳಿ' (ನೇಶನಲ್ ಟ್ರಾನ್ಸಿಶನ್ ಕೌನ್ಸಿಲ್ – ಎನ್.ಟಿ.ಸಿ.) ಒಳಗೆ ಗುಂಪುಗಳ ನಡುವೆ ತೀವ್ರ ಸಂಘರ್ಷ ಸಿಡಿದಿದೆ. ಅತಿ ದೊಡ್ಡ ಗುಂಪಾದ ಮುಸುಕಿನ ಅಲ್-ಖೈದಾ ಸಂಘಟನೆ ಎನ್ನಲಾದ 'ಲಿಬ್ಯನ್ ಇಸ್ಲಾಮಿಕ್ ಫೈಟಿಂಗ್ ಗ್ರೂಪ್' ಮೇಲಾಟದ ಸ್ಪರ್ಧೆಯಲ್ಲಿ ಮುಂದಿದೆ. ಎನ್.ಟಿ.ಸಿ. ತನ್ನ ಮುಖ್ಯ ಕಚೇರಿಯನ್ನೂ ಟ್ರಿಪೋಲಿಗೆ ಈಗಿರುವ ಬೆಂಗಾಝಿಯಿಂದ ವರ್ಗಾಯಿಸುವ ಧೈರ್ಯ ತೋರಿಸಿಲ್ಲ. ಎನ್.ಟಿ.ಸಿ.ಗೆ 40 ದೇಶಗಳು ಮಾನ್ಯತೆ ಕೊಟ್ಟಿದ್ದರೂ ರಾಜಧಾನಿಯಲ್ಲಿ ವಿಧ್ಯುಕ್ತವಾಗಿ ಸರ್ಕಾರ ಸ್ಥಾಪನೆಯ ಉದ್ಘಾಟನೆಯನ್ನು ಹಲವು ಬಾರಿ ಮುಂದೂಡಲಾಗಿದೆ. ಇದಕ್ಕೆ ಅಧಿಕಾರವನ್ನು ಹೇಗೆ ಹಂಚಿಕೊಳ್ಳುವುದು ಎಂಬ ಬಗ್ಗೆ ಆರು ದಂಗೆಕೋರ ಗುಂಪುಗಳ ನಡುವೆಯೇ ತೀವ್ರ ಭಿನ್ನಾಭಿಪ್ರಾಯ, ಸಂಘರ್ಷ ಮತ್ತು ರಾಜಧಾನಿಯಲ್ಲೂ ಪರಿಸ್ಥಿತಿಯ ಮೇಲೆ ಅಗತ್ಯ ನಿಯಂತ್ರಣ ಇಲ್ಲದಿರುವುದು ಮುಖ್ಯ ಕಾರಣಗಳು. ಗದ್ದಾಫಿ ನಾಯಕರಾಗಿದ್ದ ಆಫ್ರಿಕನ್ ಒಕ್ಕೂಟ ಎನ್.ಟಿ.ಸಿ.ಗೆ ಮಾನ್ಯತೆ ನೀಡಲು ನಿರಾಕರಿಸಿದೆ. ಅದೇ ರೀತಿ ಲ್ಯಾಟಿನ್ ಅಮೆರಿಕದ ದೇಶಗಳೂ ಎನ್.ಟಿ.ಸಿ.ಗೆ ಮಾನ್ಯತೆ ನೀಡಿಲ್ಲ. ಸಾಮಾನ್ಯವಾಗಿ ಅಮೆರಿಕವನ್ನು ಹಲವು ವಿದೇಶ ನೀತಿಯ ವಿಷಯಗಳಲ್ಲಿ ಕಣ್ಣು ಮುಚ್ಚಿ ಹಿಂಬಾಲಿಸುವ ಭಾರತ ಕೂಡಾ ಎನ್.ಟಿ.ಸಿ.ಗೆ ಮಾನ್ಯತೆ ನೀಡಿಲ್ಲ.

ಆದರೆ ಲಿಬ್ಯಾದ ಅತಿಕ್ರಮಣ ಮಾಡಿದವರು ಎನ್.ಟಿ.ಸಿ. ಟ್ರಿಪೋಲಿಯಲ್ಲಿ ನಿಯಂತ್ರಣ ಹೊಂದುವ ವರೆಗೆ ಕಾಯಲು ತಯಾರಿಲ್ಲ. ಪ್ಯಾರಿಸಿನಲ್ಲಿ 'ಲಿಬ್ಯಾದ ಮಿತ್ರರ ಸಮ್ಮೇಳನ'ವನ್ನು ಕರೆದೇ ಬಿಟ್ಟರು. ಸುಮಾರು 60 ದೇಶಗಳ ಪ್ರತಿನಿಧಿಗಳಲ್ಲದೆ ನಾಟೋ, ಅರಬ್ ಲೀಗ್ ಮತ್ತು ವಿಶ್ವಸಂಸ್ಥೆಯ ಪ್ರತಿನಿಧಿಗಳೂ ಭಾಗವಹಿಸಿದ್ದರು. ನಾಟೋ ಅತಿಕ್ರಮಣ ವಿರೋಧಿಸಿದ್ದ ಚೀನಾ, ರಶ್ಯಾಗಳನ್ನೂ ಆಹ್ವಾನಿಸಲಾಗಿತ್ತು. ಯುದ್ಧಾನಂತರದ ಪುನರ್ರಚನೆ ಪರಿಹಾರ ಕಾರ್ಯಕ್ರಮಕ್ಕೆ ಅಂತರ್ರಾಷ್ಟ್ರೀಯ ನೆರವು ಬಗ್ಗೆ ಚರ್ಚೆ ಸಮ್ಮೇಳನದ ಅಧಿಕೃತ ಅಜೆಂಡಾ. ಗದ್ದಾಫಿ ಸರ್ಕಾರ ವಿದೇಶೀ ಬ್ಯಾಂಕುಗಳಲ್ಲಿ ಇಟ್ಟಿದ್ದ ಮತ್ತು ನಾಟೋ ಅತಿಕ್ರಮಣದ ನಂತರ ಪಾಶ್ಚಿಮಾತ್ಯ ಬ್ಯಾಂಕುಗಳು ಸ್ಥಗಿತಗೊಳಿಸಿದ್ದ ನಿಧಿಯನ್ನು ಬಿಡಿಸಿಕೊಳ್ಳುವುದು, ವಿಶ್ವಸಂಸ್ಥೆ ಲಿಬ್ಯಾದ ಮೇಲೆ ವಿಧಿಸಿದ ದಿಗ್ಬಂಧನ ತೆಗೆಯುವುದು – ಎನ್.ಟಿ.ಸಿ.ಯ ಅಜೆಂಡಾ.

ಪ್ಯಾರಿಸಿನ ನಿಜವಾದ ಅಜೆಂಡಾ

ಲಿಬ್ಯಾದ ಅತಿಕ್ರಮಣದ ನಾಯಕತ್ವ ವಹಿಸಿದ ಮತ್ತು ಅದಕ್ಕಾಗಿ ನೀರಿನಂತೆ ಹಣ ಖರ್ಚು ಮಾಡಿದ (ಸುಮಾರು ಹತ್ತು ಸಾವಿರ ನಾಟೋ ವಿಮಾನ ಬಾಂಬ್ ದಾಳಿ ಪುಕ್ಕಟ್ಟೆಗೆ ಮಾಡಲಿಕ್ಕೆ ಆಗ್ತದಾ ?) ಬ್ರಿಟನ್ ಫ್ರಾನ್ಸ್ ಅಮೆರಿಕಗಳ ಅಜೆಂಡಾವೇ ಬೇರೆ. ಈಗ ನಿಯಂತ್ರಣಕ್ಕೆ ಬಂದಿರುವ ಲಿಬ್ಯಾದ (ಆಫ್ರಿಕಾದಲ್ಲೆ ಅತಿ ದೊಡ್ಡ – ಸುಮಾರು 46 ಶತಕೋಟಿ ಬ್ಯಾರೆಲುಗಳ) ತೈಲ ಸಂಪತ್ತಿನ ದೊಡ್ಡ ಪಾಲು ಪಡೆಯುವುದು ಹೇಗೆ ? ಚೀನಾ, ರಶ್ಯಾದಂತಹ ಎದುರಾಳಿಗಳ 'ಅಖಾಡಾ'ದಿಂದ ಹೊರಗೆ ಹಾಕುವುದು ಹೇಗೆ ? ಇದಕ್ಕಾಗಿ ಪಾಶ್ಚಿಮಾತ್ಯ ಬ್ಯಾಂಕುಗಳಲ್ಲಿ ಇಟ್ಟಿರುವ ಲಿಬ್ಯಾದ ಸರ್ಕಾರದ 150 ಶತಕೋಟಿ ಡಾಲರುಗಳ ನಿಧಿಯನ್ನು 'ಒತ್ತೆಯಾಳು' ಆಗಿ ಬಳಸುವುದು ಹೇಗೆ ? ನಾಟೋ ಬಾಂಬ್ ದಾಳಿಯಿಂದಲೇ ಆಗಿರುವ ಮೂಲಭೂತ ಸೌಕರ್ಯಗಳ ಭಾರಿ ಹಾನಿಯ ರಿಪೇರಿ ಮತ್ತು ಪುನರ್ರಚನೆಯ ಖರ್ಚಿನ ನೆಪದಲ್ಲಿ ಈ ನಿಧಿಯ ದೊಡ್ಡ ಭಾಗವನ್ನು ಲಪಟಾಯಿಸುವುದು ಹೇಗೆ ? ಇತರ ಆಫ್ರಿಕನ್ ದೇಶಗಳಿಗೆ ಸಾಲ ಕೊಡುತ್ತಿದ್ದ ಲಿಬ್ಯಾವನ್ನು ಸಾಲದ ಕೂಪಕ್ಕೆ ತಳ್ಳುವುದು ಹೇಗೆ ? ಇದು ಅವರ ಅಜೆಂಡಾ ಆಗಿತ್ತು. ಹಿಂದಿನ ಯುಗೋಸ್ಲಾವಿಯ, ಇರಾಕ್ ಮತ್ತು ಅಫ್ಘಾನಿಸ್ತಾನಗಳ ಮೇಲೆ ಯುದ್ಧ ಹೂಡಿ ಭಾರೀ ವಿನಾಶ ಮಾಡಿ, ಪರಿಹಾರ ಮತ್ತು ರಿಪೇರಿಗೆ ಅವರಿಂದಲೇ ಹಣ ವಸೂಲಿ ಮಾಡಿದ, ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡಿದ ಅಪಾರ 'ಅನುಭವ' ಅವರಿಗಿತ್ತು.

ಸಮ್ಮೇಳನದಲ್ಲಿ ಎನ್.ಟಿ.ಸಿ.ಯಿಂದ ಗದ್ದಾಫಿ ಬೆಂಬಲಿಗರ ಮೇಲೆ ಪ್ರತೀಕಾರ ಮಾಡದಿರುವ (ಈಗ ನಡೆಯುತ್ತಿರುವ ವ್ಯಾಪಕ ಹಿಂಸಾಚಾರ ಇಂತಹ ಪ್ರತೀಕವೇ ಎಂದು ಒಪ್ಪಿಕೊಂಡಂತೆ ಆಯ್ತು ಅಲ್ಲವೇ?), 18 ತಿಂಗಳೊಳಗೆ ಹೊಸ ಪ್ರಜಾಸತ್ತಾತ್ಮಕ ಸಂವಿಧಾನ ರಚಿಸುವ ಮತ್ತು ಚುನಾವಣೆ ನಡೆಸುವ ಭರವಸೆ ತೆಗೆದುಕೊಳ್ಳಲಾಯಿತು. ಪ್ರತಿಯಾಗಿ ಮೂಲಭೂತ ಸೌಕರ್ಯಗಳ ರಿಪೇರಿ ಮತ್ತು ಪುನರ್ರಚನೆಗೆ ಐಎಂಎಫ್ ಸಾಲ ಕೊಡುವ ಮತ್ತು ವಿಶ್ವಸಂಸ್ಥೆಯ ದಿಗ್ಬಂಧನ ತೆಗೆಯುವ 'ಭರವಸೆ' ಮಾತ್ರ ಕೊಡಲಾಯಿತು. ಅಧಿಕೃತವಾಗಿ ಸಮ್ಮೇಳನದಲ್ಲಿ ಇಷ್ಟೇ ನಡೆದಿದ್ದು. ಆದರೆ ಪರದೆಯ ಹಿಂದೆ ತೈಲ ಸಂಪತ್ತಿನ ಸಿಂಹ ಪಾಲನ್ನು, ರಿಪೇರಿ ಪುನರ್ರಚನೆಯ ಕಾಂಟ್ರಾಕ್ಟುಗಳನ್ನು ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕನ್ ಕಂಪನಿಗಳಿಗೆ ವಹಿಸಿಕೊಡುವ ಬಗ್ಗೆ ಷರತ್ತುಗಳನ್ನು ಎನ್.ಟಿ.ಸಿ. ಮೇಲೆ ಹೇರಲಾಯಿತು. ರಶ್ಯ, ಚೀನಾಗಳೊಡನೆ ಇರುವ ತೈಲ ಕಾಂಟ್ರಾಕ್ಟುಗಳನ್ನು ರದ್ದು ಮಾಡುವ ಬಗೆಗೂ ಒತ್ತಡ ಹೇರಲಾಯಿತು. ಭಾರತ ಮತ್ತು ಅಲ್ಜೀರಿಯಾ ಜಂಟಿಯಾಗಿ ಪಡೆದ ತೈಲ ಕಾಂಟ್ರಾಕ್ಟು ಸಹ ಈ ಅಪಾಯ ಎದುರಿಸುತ್ತಿದೆಯಂತೆ. ರಾಷ್ಟ್ರೀಯ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಇರದ, ನಾಟೋ ಮಿಲಿಟರಿ ಆಡಳಿತ ನಡೆಸುವ, ವಸಾಹತು ಆಗಿರುವ 'ಹೊಸ ಲಿಬ್ಯಾ'ಕ್ಕೆ ಎನ್.ಟಿ.ಸಿ.ಯನ್ನು ಕೈ ತಿರುಚಿ ಒಪ್ಪಿಸಲಾಯಿತಂತೆ. ಇದಕ್ಕೆ ಈಗಾಗಲೇ ವಿಶ್ವಸಂಸ್ಥೆ ನೀಲನಕ್ಷೆ ತಯಾರಿಸಿದೆಯಂತೆ.

ಲಿಬ್ಯಾದ ಜನತೆಗೆ ಮುಂದೇನು ?

ಐಎಂಎಫ್ ಸಾಲಕ್ಕೆ ಬೇಕಾದ 'ಸುಧಾರಣೆ'ಯ ಷರತ್ತು ಪೂರೈಸಲು ಹೊಸ ಲಿಬ್ಯಾ ಸರ್ಕಾರ ಈಗಿರುವ, ಸಾಮಾಜಿಕ ಕಲ್ಯಾಣ ಯೋಜನೆ (ಉಚಿತ ಶಿಕ್ಷಣ, ಆರೋಗ್ಯ ಸೇವೆ ಇತ್ಯಾದಿ)ಗಳನ್ನು ಕೈ ಬಿಡಬೇಕಾಗುತ್ತದೆ. ಇದರ ಜತೆ ಗದ್ದಾಫಿ ಆಡಳಿತದ ಪ್ರಮುಖ ಸಾಧನೆಗಳಾದ – ಸ್ವಾವಲಂಬಿತ ರಾಷ್ಟ್ರೀಯ ಬೆಳವಣಿಗೆ, ಮಹಿಳಾ ಸಮಾನತೆ, ಜಾತ್ಯತೀತತೆ, ಪ್ರಗತಿಪರ ಮೌಲ್ಯ– ಇವುಗಳನ್ನು ಗಾಳಿಗೆ ತೂರುವುದು ಸಹ ಅಷ್ಟೇ ಖಚಿತ. ದಂಗೆಕೋರ ಬಣಗಳಲ್ಲಿ ಅತಿ ದೊಡ್ಡ ಮುಸುಕಿನ ಅಲ್-ಖೈದಾ ಸಂಘಟನೆ ಇರುವಾಗ ಇನ್ನೇನು ನಿರೀಕ್ಷಿಸಲು ಸಾಧ್ಯ ? ಲಿಬ್ಯಾದ ಜನತೆಯ ಬದುಕು ಹೆಚ್ಚಿನ ಸ್ವಾತಂತ್ರ್ಯದ ಜತೆಗೆ ಉತ್ತಮಗೊಳ್ಳುವುದರ ಬದಲು, ಕಳೆದ ನಾಲ್ಕು ದಶಕಗಳ ಸಾಧನೆಗಳು ರಾತ್ರೋ ರಾತ್ರಿ ಮಣ್ಣುಗೂಡುವ ಸಾಧ್ಯತೆಯೇ ಹೆಚ್ಚು. ■

ಇದೀಗ ಮತ್ತೆ ತೆಲಂಗಾಣ ಪ್ರದೇಶದಲ್ಲಿ ಪ್ರತ್ಯೇಕ ರಾಜ್ಯ ಹೆಸರಿನಲ್ಲಿ ಜನರ ಭಾವನೆಗಳನ್ನು ಕೆರಳಿಸುವ ಪ್ರಯತ್ನ ನಡೆಯುತ್ತಿದೆ. ನಿಜವಾಗಿಯೂ ತೆಲಂಗಾಣದ ಹೆಸರಿನಲ್ಲಿ ಅಲ್ಲಿ ಏನೇನು ನಡೆಯುತ್ತಿದೆ.

ತೆಲಂಗಾಣ ಉದ್ವಿಗ್ನತೆ: ಕಾಂಗ್ರೆಸ್‌ನ ಅವಕಾಶವಾದಿ ರಾಜಕಾರಣದ ಫಲ

● ಅಪ್ಪು

ಆಂಧ್ರಪ್ರದೇಶದ ತೆಲಂಗಾಣ ಪ್ರದೇಶಕ್ಕೆ ಸೇರಿದ ಟಿಡಿಪಿ, ಟಿಆರ್‌ಎಸ್, ಬಿಜೆಪಿ, ಸಿಪಿಐ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ಧ ನೂರಕ್ಕೂ ಹೆಚ್ಚು ಶಾಸಕರು ಮತ್ತು ಬಹುತೇಕ ಸಂಸದರು ಕಳೆದ ಜುಲೈ 4 ಮತ್ತು 5ರಂದು ಸಾಮೂಹಿಕವಾಗಿ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ಇದರ ಬೆನ್ನಲ್ಲೇ ಎರಡು ದಿನಗಳ ತೆಲಂಗಾಣ ಸಂಪೂರ್ಣ ಬಂದ್ ಆಚರಿಸಲಾಯಿತು. ಇದರ ಬೆನ್ನ ಹಿಂದೆಯೇ ಸಹಜವಾಗೇ ಕರಾವಳಿ ಆಂಧ್ರ ಮತ್ತು ರಾಯಲಸೀಮಾ ಪ್ರದೇಶಗಳಲ್ಲಿ ಐಕ್ಯ ಆಂಧ್ರಕ್ಕಾಗಿ ಪ್ರತಿಭಟನೆಗಳು ಆರಂಭಗೊಂಡವು.



ಟಿಆರ್‌ಎಸ್ ಮತ್ತು ತೆಲಂಗಾಣ ಜಂಟಿ ಕ್ರಿಯಾ ಸಮಿತಿ (ಜೆಎಸಿ) ಆರಂಭದಿಂದಲೂ ತೆಲಂಗಾಣ ಪ್ರಾಂತ್ಯದ ಜನಪ್ರತಿನಿಧಿಗಳ ರಾಜೀನಾಮೆಗಳಿಗೆ ಒತ್ತಾಯಿಸುತ್ತಿತ್ತು. ಕಾಂಗ್ರೆಸ್ ಸದಸ್ಯರು ಸಾಮೂಹಿಕ ರಾಜೀನಾಮೆಗೆ ಮುಂದಾದರೆ ತೆಲಂಗಾಣ ಪ್ರತ್ಯೇಕ ರಾಜ್ಯ ರಚನೆಯ ಹಾದಿ ಸುಗಮವಾಗಲಿದೆ. ಸಾಮೂಹಿಕ ರಾಜೀನಾಮೆಗಳಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇಕ್ಕಟ್ಟಿಗೆ ಸಿಲುಕಲಿವೆ ಎಂದು ಆ ಕಡೆಯಿಂದ ಊಹಿಸಲಾಗಿತ್ತು. ಇಷ್ಟೊಂದು ಪ್ರಮಾಣದಲ್ಲಿ ಒಮ್ಮೆಗೆ ರಾಜೀನಾಮೆಗಳನ್ನು ಸಲ್ಲಿಸಿರುವುದು ತುಂಬಾ ಗಂಭೀರ ವಿಷಯವಾದರೂ, ಊಹಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಯಾವುದೇ ಒತ್ತಡ ಹೇರಲಿಲ್ಲ. ನಿಜ ಹೇಳಬೇಕೆಂದರೆ, ಎಐಸಿಸಿಯಿಂದ ಆಂಧ್ರ ಉಸ್ತುವಾರಿಯಾಗಿರುವ ಗುಲಾಂ ನಬಿ ಆಜಾದ್, ಈ ಕುರಿತಂತೆ ನಿರ್ಧಾರ ಕೈಗೊಳ್ಳಲು ಇನ್ನಷ್ಟು ಕಾಲಾವಕಾಶ ಬೇಕಾಗಲಿದೆ ಎಂಬುದನ್ನು ಪುನರುಚ್ಚರಿಸಿದರು. ರಾಜೀನಾಮೆ ನೀಡುತ್ತಿದ್ದಂತೆ ನಾಯಕರನ್ನು ಕೂಡಲೆ ದೆಹಲಿಗೆ ಕರೆಸಲಾಯಿತು. ಅವರು ರಾಜೀನಾಮೆಗಳನ್ನು ಸಲ್ಲಿಸಿದ ನಂತರ ಅದೇ ದಿನ ಹೈದರಾಬಾದ್‌ಗೆ ಹಿಂದಿರುಗಿದರು. ಸಾಮೂಹಿಕ ರಾಜೀನಾಮೆಗಳಿಗೆ ಚಾಲನೆ ನೀಡಿದ ಪಂಚಾಯತ್ ರಾಜ್ ಸಚಿವ ಕೆ. ಜನಾರೆಡ್ಡಿ ಇದು ರಾಜಕೀಯ ಬಿಕ್ಕಟ್ಟಲ್ಲ ಎಂದು ಘೋಷಿಸಿದರು. ವಿರೋಧಾಭಾಸ ಏನೆಂದರೆ, ರಾಜೀನಾಮೆ ನೀಡಿದ ನಾಯಕರು ಇನ್ನೂ ರಾಜೀನಾಮೆ ನೀಡದ ಕೇಂದ್ರ ಸಚಿವ ಜೈಪಾಲ್‌ರೆಡ್ಡಿ ಅವರ ಮನೆಯಲ್ಲಿ ಸಭೆ ನಡೆಸಿದರು. ಸಹಜವಾಗಿ ಹಲವಾರು ಸಮಾಲೋಚನೆಗಳು, ಸಭೆಗಳು ನಡೆದವು, ಎಂದಿನಂತೆ ಸಾಮಾನ್ಯ ಜನರಲ್ಲಿ ಪ್ರಾದೇಶಿಕ ಭಾವನೆಗಳನ್ನು ಉದ್ರೇಕಿಸುವ ಸಾಕಷ್ಟು ಹೇಳಿಕೆಗಳು ಬಿಡುಗಡೆಯಾದವು.

ಗೊಂದಲ ಸೃಷ್ಟಿ

ಅಂತಿಮವಾಗಿ ಕೇಂದ್ರ ಗೃಹ ಸಚಿವ ಪಿ.ಚಿದಂಬರಂ ಡಿಸೆಂಬರ್ 9, 2009ರ ಹೇಳಿಕೆ ಕುರಿತು ಮಾತನಾಡುವ ಸಂದರ್ಭದಲ್ಲೇ ಡಿಸೆಂಬರ್ 23ರ ಹೇಳಿಕೆಯನ್ನೂ ಪರಿಗಣಿಸುವುದಾಗಿ ಪ್ರಕಟಿಸಿದರು. ಈ ಗೊಂದಲಗಳನ್ನು ಸೃಷ್ಟಿಸಿದ್ದೇ ಕೇಂದ್ರ ಸರ್ಕಾರ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ. 2010ರ ಜನವರಿ 5ರಂದು ಸರ್ವಪಕ್ಷಗಳ ಸಭೆಯನ್ನು ಕರೆಯಲಾಯಿತು. ಅಲ್ಲಿನ ಕೈಗೊಂಡ ನಿರ್ಧಾರದಂತೆ ಶ್ರೀಕೃಷ್ಣ ಸಮಿತಿಯನ್ನು ರಚಿಸಲಾಯಿತು. 2010ರ ಅಂತ್ಯದ ವೇಳೆಗೆ ಸಮಿತಿ ತನ್ನ ವರದಿಯನ್ನು ಸಲ್ಲಿಸಿತು. ಈ ಕುರಿತಂತೆ ತನ್ನ ನಿರ್ಧಾರವನ್ನು ಪ್ರಕಟಿಸುವ ಅಧಿಕಾರವನ್ನೂ ಕೇಂದ್ರ ಸರ್ಕಾರ ಹೊಂದಿತ್ತು. ಆದರೆ ಕೇಂದ್ರ ಸರ್ಕಾರ ಇದಾವುದನ್ನೂ ಮಾಡಲಿಲ್ಲ. ಬದಲಿಗೆ ರಾಜ್ಯದಲ್ಲಿನ ರಾಜಕೀಯ ಪಕ್ಷಗಳೇ ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಹೇಳಿತು. ಅದಕ್ಕೆ ಅನುಗುಣವಾಗಿಯೇ ಮತ್ತೊಂದು ಸರ್ವಪಕ್ಷಗಳ ಸಭೆ ಕರೆಯಲಾಯಿತು. ಟಿಆರ್‌ಎಸ್, ಟಿಡಿಪಿ ಮತ್ತು ಬಿಜೆಪಿ ಪಕ್ಷಗಳು ಸಭೆಯನ್ನು ಬಹಿಷ್ಕರಿಸಿದವು. ಇದನ್ನೆ ನೆಪವಾಗಿಸಿಕೊಂಡ ಕೇಂದ್ರ ಸರ್ಕಾರ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆ ಕುರಿತು ಒಮ್ಮತ ಮೂಡುವ ತನಕ ಈ ಕುರಿತು ಮುನ್ನಡೆಯುವುದಿಲ್ಲ ಎಂದು ಕೂತಿದೆ. ಈ ವರ್ತನೆ ಹೇಗಿದೆ ಎಂದರೆ, ಕುದುರೆಗಳ ಮುಂದೆ ಗಾಡಿಯನ್ನು ಕಟ್ಟಿದಂತಿದೆ. ಟಿಡಿಪಿ ಮತ್ತು ಕಾಂಗ್ರೆಸ್ ಪಕ್ಷಗಳು ತಮ್ಮ ನಿಲುವನ್ನು ಸ್ಪಷ್ಟಪಡಿಸುವ ತನಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಅಂತಲೂ ಪಿ.ಚಿದಂಬರಂ ಹೇಳಿದರು. ಈ ಎರಡೂ ಪಕ್ಷಗಳು ವಿವಿಧ ಪ್ರದೇಶಗಳಲ್ಲಿ ಭಿನ್ನ ರಾಗಗಳನ್ನು ಹಾಡುತ್ತಿವೆ. ಟಿಆರ್‌ಎಸ್ ಮಾತ್ರ ಈ ಕುರಿತಂತೆ ಇನ್ನಷ್ಟು ದೃಢವಾಗುತ್ತಿದೆ. ನಿಜ ಹೇಳಬೇಕೆಂದರೆ ಟಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್, ಜನಾರೆಡ್ಡಿ ಮನೆಗೆ ಭೇಟಿ ನೀಡಿದ ನಂತರವೇ ಇಷ್ಟೆಲ್ಲ ಬೆಳವಣಿಗೆಗಳು ಕಂಡಿದ್ದು.


ವೈರುಧ್ಯಗಳು

ಸಿಪಿಐ(ಎಂ), ಎಂಐಎಂ ಮತ್ತು ಲೋಕ್‌ಸತ್ತಾ ಪಕ್ಷಗಳನ್ನು ಹೊರತುಪಡಿಸಿ ಪ್ರತ್ಯೇಕತೆಯ ವಾದವನ್ನು ಹೇಳುತ್ತಿರುವ ಉಳಿದೆಲ್ಲ ಪಕ್ಷಗಳಲ್ಲೂ ಹಲವಾರು ವೈರುಧ್ಯಗಳಿವೆ. ವಾಸ್ತವವಾಗಿ ಎಲ್ಲ ಪಕ್ಷಗಳನ್ನು ಒಳಗೊಂಡು ರಚಿತವಾದ ಜಂಟಿ ಕ್ರಿಯಾ ಸಮಿತಿಯಲ್ಲಿ ಈಗ ಟಿಆರ್‌ಎಸ್, ಸಿಪಿಐ (ಎಂಎಲ್) ಮತ್ತು ಕೆಲವು ಸಂಘಟನೆಗಳು ಮಾತ್ರ ಉಳಿದಿವೆ. ಈ ಜಂಟಿ ಕ್ರಿಯಾ ಸಮಿತಿಯಲ್ಲಿ ಹಲವಾರು ಸರ್ಕಾರಿ ನೌಕರರು, ವಿದ್ಯಾರ್ಥಿಗಳು, ಡಾಕ್ಟರ್‌ಗಳು, ಲಾಯರ್‌ಗಳು, ಶಿಕ್ಷಕರು ಮತ್ತಿತರರು ಇದ್ದಾರೆ. ಇವೆಲ್ಲವುಗಳ ಪೈಕಿ ಟಿಡಿಪಿ ಮತ್ತು ಟಿಆರ್‌ಎಸ್ ನಡುವಿನ ವೈರುಧ್ಯಗಳು ತುಂಬಾ ಪ್ರಮುಖವಾಗಿದೆ. ಟಿಆರ್‌ಎಸ್ ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಂಡಿದೆ ಎಂಬ ವದಂತಿಗಳೂ ಇವೆ. ಬಿಜೆಪಿ ಮಾತ್ರ ತೆಲಂಗಾಣ ಪ್ರದೇಶದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಪ್ರತ್ಯೇಕ ರಾಜ್ಯ ರಚನೆ ಎಂದು ಹೇಳುತ್ತಿದೆ. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಇಲ್ಲಿಂದಲೇ ಸ್ಪರ್ಧಿಸುವ ಸುಳಿವನ್ನೂ ನೀಡಿದ್ದಾರೆ. ಸಿಪಿಐ ಸಹ ಹೈದರಾಬಾದ್‌ನಲ್ಲಿ ರ‍್ಯಾಲಿಯನ್ನು ಏರ್ಪಡಿಸಿತ್ತು. ರ‍್ಯಾಲಿಯನ್ನು ಉದ್ದೇಶಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿ ಎ.ಬಿ. ಬರ್ಧನ್ ಮಾತನಾಡಿದರು.

ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಈಗಾಗಲೆ ಸಂಕಷ್ಟದಲ್ಲಿರುವ ಕಿರಣ್ ಕುಮಾರ್ ರೆಡ್ಡಿ ಸರ್ಕಾರಕ್ಕೆ ಈ ಸಾಮೂಹಿಕ ರಾಜೀನಾಮೆ ಇನ್ನಷ್ಟು ಸಂಕಷ್ಟವನ್ನು ಉಂಟು ಮಾಡಿದೆ. ರಾಷ್ಟ್ರಪತಿ ಆಡಳಿತ ಹೇರಿಕೆ ಸೇರಿದಂತೆ ಹಲವು ರೀತಿಯ ರಾಜಕೀಯ ಚಿತ್ರಣಗಳು ಕಾಣುತ್ತಿವೆ. ಇದರ ಮಧ್ಯೆ ಮೂವರು ಸಚಿವರು ಸೇರಿದಂತೆ ಗ್ರೇಟರ್ ಹೈದರಾಬಾದ್ ಪ್ರದೇಶದಿಂದ ಆಯ್ಕೆಯಾಗಿರುವವರು ಇನ್ನೂ ರಾಜೀನಾಮೆ ಸಲ್ಲಿಸದಿರುವುದು ಇನ್ನಷ್ಟು ಪ್ರಾಮುಖ್ಯತೆ ಪಡೆದುಕೊಂಡಿದೆ. ಟಿಆರ್‌ಎಸ್ ಮತ್ತು ಜಂಟಿ ಕ್ರಿಯಾ ಸಮಿತಿ ಹಲವು ರೀತಿಯ ಪ್ರತಿಭಟನೆಗಳು, ಬಂದ್‌ಗಳಿಗೆ ಕರೆ ನೀಡುತ್ತಿದ್ದರೆ, ಇತ್ತ ಇತರ ಪ್ರದೇಶಗಳಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ. ಮತ್ತೊಮ್ಮೆ ಹೇಳುವುದಾದರೆ ಇದೆಲ್ಲ ಕಾಂಗ್ರೆಸ್ ಪಕ್ಷದ ಅವಕಾಶವಾದಿ ರಾಜಕಾರಣದ ಪ್ರತಿಫಲವಾಗಿದೆ. ಇವೆಲ್ಲ ಸ್ವಾರ್ಥಹಿತಾಸಕ್ತಿ ಹೊಂದಿರುವವರ ವಿವಿಧ ರೀತಿಯ ತಂತ್ರಗಳು ಎಂಬುದನ್ನು ಯಾರೊಬ್ಬರೂ ಊಹಿಸಬಲ್ಲರು. ●

ತತ್ವ ನಿಷ್ಠರ ಮೇಲೆ ದಾಳಿ

ಜುಲೈ 6ರಂದು ಕೆಲವು ದುಷ್ಕರ್ಮಿಗಳು ನಲಗೊಂಡ ಜಿಲ್ಲೆಯ ಭುವನಗಿರಿಯಲ್ಲಿ ಸಿಪಿಐ(ಎಂ) ಪಕ್ಷದ ಕಚೇರಿಗೆ ಬೆಂಕಿ ಹಚ್ಚಿದರು. ಪಕ್ಷದ ನೀತಿಯ ಹಿನ್ನೆಲೆಯಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡದ ಸಿಪಿಐ(ಎಂ)ನ ಏಕೈಕ ಶಾಸಕ ಜೆ.ರಂಗಾ ರೆಡ್ಡಿಯನ್ನು ಅಪಹರಿಸುವ ಯತ್ನಗಳನ್ನೂ ನಡೆಸಲಾಯಿತು. ಇಲ್ಲಿ ಪಕ್ಷ ಜನತೆಯ ಆಶಯಗಳಿಗೆ ಸಂಬಂಧಿಸಿದಂತೆ ತುಂಬಾ ಸಂಯಮ, ಜವಾಬ್ದಾರಿಯಿಂದ ನಡೆದುಕೊಂಡಿರುವುದಕ್ಕೆ ನಿಂದನೆಗೆ ಗುರಿಯಾಗುವಂತಾಗಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯಲ್ಲಿ ಪಕ್ಷದ ನಿಲುವು ತುಂಬಾ ಸ್ಪಷ್ಟವಾಗಿದೆ. ಆದರೆ ಅದೆಂದೂ ಜನರ ಭಾವನೆಗಳಿಗೆ ವಿರುದ್ಧವಾಗಿರಬಾರದು. ಯಾವುದೇ ರೀತಿಯ ಸಂಕುಚಿತ ಚಳವಳಿಗಳೊಂದಿಗೆ ಸೇರಬಾರದು ಮತ್ತು ಸಾಮಾನ್ಯ ಜನ ಎದುರಿಸುತ್ತಿರುವ ಸಮಸ್ಯೆಗಳತ್ತ ತಮ್ಮ ಚಳವಳಿಯನ್ನು ಕೇಂದ್ರೀಕರಿಸಿರಬೇಕು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಸಿಪಿಎಂ ಪಕ್ಷ ದುಡಿವ ವರ್ಗದ ಮತ್ತು ಬಡಜನರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಂತೆ ಹಲವಾರು ಗಣನೀಯ ಹೋರಾಟಗಳನ್ನು ನಡೆಸಿದೆ. ಜನತೆಯ ಭಾವನೆಗಳಿಗೆ ಅನುಗುಣವಾಗಿ ನಡೆಯುತ್ತಿದೆ. ಸ್ಪಂದಿಸುವುದು ಮಾತ್ರ ಎಂದೆಂದಿಗೂ ಗೆಲ್ಲಲಿದೆ. ಅದನ್ನು ಹೊರತುಪಡಿಸಿ ಅಪ್ರಜಾಪ್ರಭುತ್ವೀಯ ವಾದ ಮತ್ತು ವಿಭಜಕ ಕೃತ್ಯಗಳು ಕೊನೆಗಾಣಲೇ ಬೇಕಾಗಿದೆ. ●



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

'ಸದಾನಂದ'ರ ಆಡಳಿತದಲ್ಲಿ ಏನು ದಕ್ಷತೆ ಅಂತೀರಿ ಮಾರಾಯ್ರೆ

.ಎಸ್. ಯಡಿಯೂರಪ್ಪನವರೇ ನೇರವಾಗಿ ರ್ಕಾರದ ಚುಕ್ಕಾಣಿ ಹಿಡಿದಿದ್ದಾಗ ರಾಜ್ಯದಲ್ಲಿ ರ್ಕಾರ ಎಷ್ಟು ದಕ್ಷವಾಗಿ ನಡೆಯುತ್ತಿತ್ತು, ರ್ಕಾರದ ಸಚಿವರು ತಿಂಗಳಲ್ಲಿ ಎಷ್ಟು ದಿನ ಮ್ಮ ಕಚೇರಿಯಲ್ಲಿ ಕುಳಿತು-ಕೆಲಸ ಕಾರ್ಯ ಾಡಿ ಕಡತ ವಿಲೆವಾರಿ ಮಾಡುತ್ತಿದ್ದರು ಂಬುದನ್ನು ರಾಜ್ಯದ ಜನ ನೋಡಿದ್ದಾರೆ.

ಕೆಲವರಿಗೆ ಮಠ, ದೇಗುಲಗಳನ್ನು ಸುತ್ತುವ-ದಾರ ಉಂಬಳಿ ದಾನ, ಧರ್ಮ ಘೋಷಿಸುವ ನ ಕಾರ್ಯ, ಇನ್ನು ಕೆಲವರಿಗೆ ಗಣಿ ಅದಿರು ೆಡಿ ತೋಡಿ ವಿದೇಶಗಳಿಗೆ ಸಾಗ ಹಾಕುವ ಭಿವೃದ್ಧಿ' ಕಾರ್ಯಗಳ ಜೊತೆಗೆ ತಮ್ಮ ಬಳ್ಳಾರಿ ಸ್ಥಾನದ ದರ್ಬಾರ್ ನಡೆಸುವ ಕೈಂಕರ್ಯ. ು ಬಿಟ್ಟರೆ ದೊಡ್ಡ ಸಂಖ್ಯೆಯ ಸಚಿವರು, ಸಕರುಗಳಿಗೆ ಆಗಾಗ್ಗೆ ರೆಸಾರ್ಟ್ ವಾಸ್ತವ್ಯದ ೂಣೆಗಾರಿಕೆ'ಗಳು, ಮತ್ತೆ ಕೆಲವರಿಗೆ ರಾತ್ರಿ ೆಯನ ಮನೆಯಲ್ಲಿ ಉಳಿದು....ಛೇ ಛೇ ಬೇಡ ಇಷ್ಟು ಹೇಳಿದರೆ ನಮ್ಮ ಸರ್ಕಾರದ ಸಚಿವರ ೋಗ್ಯತೆಗಳು ಮತ್ತು ಅವರ ಕೆಲಸ ರ್ಯಗಳ ಒಂದು ಸ್ಥೂಲ ಅಂದಾಜು ಸಿಕ್ಕೇ ಡುತ್ತದೆ.

ನಮ್ಮ ಅಭಿನವ ಭರತ ಸದಾನಂದ ಗೌಡರು ್ಯಯ ಮೇಲೆ ಅಣ್ಣನ ಪಾದುಕೆಗಳನ್ನು ಹೊತ್ತು ಂಡು ಸಿಂಹಾಸನದ ಮೇಲೆ ಕುಳಿತ ಮೇಲೆ ಂದು ಪ್ರತಿಜ್ಞೆ ಮಾಡಿದರು.

ವಾರದಲ್ಲಿ ನಾಲ್ಕು ದಿನ ತಾನು ವಿಧಾನ ಧದ ಕಚೇರಿಯಲ್ಲಿ ಕುಳಿತು ಕೆಲಸ ಾಡುತ್ತೇನೆ. ಕಡತಗಳನ್ನು ಹದಿನೈದು ದಿನಗಳ ಳಗಾಗಿ ಇತ್ಯರ್ಥ ಪಡಿಸುತ್ತೇನೆ. ನನ್ನ ಸಚಿವ ಂಪುಟದ ಸದಸ್ಯರೂ ಅಂದರೆ ಸಚಿವರುಗಳು ಗೆಯೇ ಮಾಡುತ್ತಾರೆ. ಹೀಗೆ ಮಾಡಲೇ ೇಕು ನಾನು ತಾಕೀತು ಮಾಡಿದ್ದೇನೆ ಅಂತ ೊದಮೊಧಲು ಬಡಾಯಿ ಕೊಚ್ಚಿದ ಭರತರು ಗ ಪಕ್ಷದ ಸಭೆಯಲ್ಲಿ " ಸಚಿವರುಗಳು ೇರಿಗೆ ಬಂದು ಕೂರುವುದೇ ಇಲ್ಲ...ಕಡತಗಳ ಲೇವಾರಿಯನ್ನು ಸೂಚಿತವಾದ ಕಾಲ ಮಿತಿಗೆ ನುಗುಣವಾಗಿ ನಡೆಸುತ್ತಿಲ್ಲ..." ಎಂದು ಲವತ್ತುಕೊಂಡು ಗೋಳಾಡಿದರಂತೆ.

ಪಾಪ ಸಚಿವರುಗಳಾದರೂ ಏನು ಾಡುತ್ತಾರೆ ಒಬ್ಬೊಬ್ಬರಿಗೆ ಒಂದೊಂದು ಕೆಲಸ. ೆಗಾ' ಹಗರಣಗಳನ್ನು ನಡೆಸಿದವರಿಗೆ ಮುಂದೆ ರಬಹುದಾದ ಕಾನೂನು ್ರಿಯೆಗಳಿಗೆ...ಅಂದರೆ ಜಾಮೀನು ಅರ್ಜಿ ಲ್ಲಿಸುವ ಸಂಬಂಧದ 'ಮೆಗಾ' ್ವತೆಗಳು...ಯಾವುದಕ್ಕೂ ಇರಲಿ ಅಂತ ರಪ್ಪನ ಅಗ್ರಹಾರದಲ್ಲಿ ವಾಸಕ್ಕೆ ್ವತೆಗಳು...ಹೀಗೆ ಹಲವು ಸಚಿವರುಗಳಿಗೆ ಲವು ಕೆಲಸ ಕಾರ್ಯಗಳು...

ಇದನ್ನೆಲ್ಲ ಕೇಳಿ 'ವಿಚಾರಿಸಿಕೊಳ್ಳ' ಾದವರು ಮುಖ್ಯಮಂತ್ರಿಗಳು. ಪಾಪ ವರಿಗೇ ತಮ್ಮ ಪ್ರತಿಜ್ಞೆ ಪೂರೈಸಲು ಆಗಿಲ್ಲ. ಗಪುರದ, ಕೇಶವ ಕೃಪದ ದೊಣೆ ನಾಯಕರ ಲಿಗೆರಗುವುದು. ಗುಜರಾತಿಗೆ ಹೋಗಿ ನರಹಂತಕ ನರೇಂದ್ರ ಮೋದಿಯವರಿಗೆ ಜೋ ಘರಾಕ್ ಹಾಕುವುದು....ಇನ್ನೂ ಏನೇನೋ ಮಾಡಲೇ ಬೇಕಾದ ಕರ್ತವ್ಯಗಳು. ಇಂತಹ ಮಹತ್ವದ ಕೆಲಸ ಕಾರ್ಯಗಳನ್ನು ಬಿಟ್ಟು ಚಿಲ್ಲರೆ ಜನಗಳ ಕುಂದು ಕೊರತೆಗಳ ಬಗೆಗೆ ಕಡತ ನೋಡಿ ಕ್ರಮವಹಿಸುತ್ತಾ ಕೂರಲು ಆಗುತ್ತದೆಯೇ ? ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ....

ಹಾಂ! ಹಿರಿಯಕ್ಕ ಅಂದರೆ ತಪ್ಪು ಲೆಕ್ಕ ಹಾಕಿ



ತಲೆಯನ್ನು ಯಶವಂತಪುರ ಕ್ಷೇತ್ರದ ಕಡೆ ಓಡಿಸ ಬೇಡಿ. ಹಿರಿಯಕ್ಕ ಅಂದರೆ ಶಿಕಾರಿ ಪುರದ ಶಾಸಕರೂ...ರೈತಪರ ಓರಾಟಗಾರರೂ ಆದ... ಡಾ। ಬಿ.ಎಸ್.....ಗೊತ್ತಾಯ್ತು ಅಲ್ಲವೇ ? ಅವರು ಹಾಕಿಕೊಟ್ಟ ಮಾರ್ಗವಲ್ಲವೇ ಇದು. ಈಗಲೂ ಅವರೇ ಅಲ್ಲವೇ ಈ ಸರ್ಕಾರಕ್ಕೆ ಹಾಗೂ ರಾಜ್ಯದಲ್ಲಿ ಕಮಲ ಪಕ್ಷಕ್ಕೆ ಹಿರಿಯರು.

★

ಶಿಕಾರಿ ಪುರದಲ್ಲಿ ನಿಧಿ...ಅಗಾಧ ನಿಧಿ...?!

ಶಿಕಾರಿ ಪುರ ಅಂತ ಅಂದ ತಕ್ಷಣ ನೆನಪಾಯ್ತು ನೋಡಿ. ಮೊನ್ನೆ ಮೊನ್ನೆ ಶಿಕಾರಿ ಪುರದಲ್ಲಿ ಏನಾಗಿದೆ. ಆ ಜನರಿಗೆ ಕೇರಳದ ಅನಂತ ಪದ್ಮನಾಭ ದೇವರು... ಆ ಮೇಲೆ ತಿರುಪತಿ ತಿಮ್ಮಪ್ಪ... ಆಮೇಲೆ ಗಾಲಿ ಜನಾರ್ಧನ ರೆಡ್ಡಿ ಇವರೆಲ್ಲ ನೆನಪಿಗೆ ಬಂದಿದ್ದರೂ ಆಶ್ಚರ್ಯವಿಲ್ಲ.

ಶಿಕಾರಿಪುರದಲ್ಲಿ ಡಾ। ಬಿ.ಎಸ್. ಯಡಿಯೂರಪ್ಪನವರ ತೋಟದ ಮನೆ ಇದೆ. ಆ ತೋಟದ ಮನೆಯಲ್ಲಿ ಅಪಾರ ಪ್ರಮಾಣದ ಗುಪ್ತ ನಿಧಿ ಪತ್ತೆಯಾಗಿದೆ...ಕ್ಷಮಿಸಿ ನಿಧಿ ಇದೆ.. ಆ ನಿಧಿ 'ಪತ್ತೆ'ಗಾಗಿ ಗಾಲಿ ಜನಾರ್ಧನನ ಅರಮನೆಗೆ ಸಿಬಿಐ ಮಾವಂದಿರು ಬಂದಂತೆ ಈ ತೋಟದ ಮನೆಗೂ ಆಗಮಿಸಲಿದ್ದಾರೆ...ಅದರಿಂದಾಗಿ ಗುಪ್ತ ನಿಧಿಯನ್ನು ಕದಲಿಸಿ ಬೇರೆ ಕಡೆ 'ಸರಿ' ಯಾದ ಜಾಗಕ್ಕೆ ಸಾಗಿಸಲಾಗುತ್ತದೆ ಅಂತ ಹೇಗೋ ಬಿಸಿ ಬಿಸಿ ಸುದ್ದಿ ಹರಡಿದೆ. ಸುತ್ತ ಮುತ್ತಲ ಜನ ಈ ಅಮೂಲ್ಯ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಮನೆಯ ಸುತ್ತ ಭಾರಿ ಸಂಖ್ಯೆಯಲ್ಲಿ ಅಣಿ ನೆರೆದು ಬಿಟ್ಟಿದ್ದಾರೆ. ಸುದ್ದಿಯಲ್ಲಿ ಎಷ್ಟು ನಿಜವೋ ? ಎಷ್ಟು ಸುಳ್ಳೋ ? ನಮಗಂತೂ ಗೊತ್ತಿಲ್ಲ. ಆದರೆ ತಮ್ಮ ಕ್ಷೇತ್ರದ ಶಾಸಕರೂ, ಮಾಜಿ ಮು.ಮ. ಗಳೂ ಆದವರ ಬಗೆಗಿನ ಸುದ್ದಿಯಲ್ಲವೇ. ಜನಕ್ಕೆ 'ನಂಬಿಕೆ'ಯೇ. ತಮ್ಮ ದೇವರ ಸತ್ಯ ತಮಗೆಲ್ಲದೇ ಇನ್ಯಾಗಿಗೆ ಗೊತ್ತು ಎಂಬುದು ಅವರ ಬಲವಾದ ನಂಬಿಕೆಯ ಆಧಾರವೂ ಇರಬಹುದು. ಅವರು ಇದು ಸುಳ್ಳು ಸುದ್ದಿ ಇರಬಹುದು ಇದು ಅಂತೇನು ಭಾವಿಸಲಿಲ್ಲ. ಅದನ್ನು ನಾವು ಗಮನಿಸಬೇಕು.

ನೆರೆದ ಜನರನ್ನು ಪೋಲಿಸರು ಲಘು ಲಾಠಿ ಪ್ರವಾಹ ಮಾಡಿ ಚದುರಿಸಿದರಂತೆ. ಆಹಾ !! ಕ್ಷೇತ್ರದ ಜನರ ಪುಣ್ಯವೇ !!! ಇಂಥಾ ನಾಯಕನ್ನು ಪಡೆದ ಕ್ಷೇತ್ರವೇ ಧನ್ಯ. ಇಂಥಾ ನೇತಾರನ್ನು ಪಡೆದ ಬಿಜೆಪಿ ಪಕ್ಷವೂ ಧನ್ಯ.

ಶ್ರೀರಾಮುಲು ರಾಜಿನಾಮೆ ಅಂಗೀಕಾರವಾಗದೇ ವಾಪಸ್ ?

ಟಿ.ವಿ.-9 ಚಾನೆಲ್ ಮಹಾನ್ ಸಂಶೋಧನೆಯ ಪ್ರಕಾರ ಈಗ ಚುಂಚಲಗುಡ ಜೈಲಿನೊಳಗೆ ಮಹಾ 'ಶಿವಧ್ಯಾನ' ಹಾಗೂ ಘೋರ ತಪಸ್ಸನ್ನು ಆಚರಿಸುತ್ತಿರುವ ಶಿವಭಕ್ತಾಗ್ರೇಸರ ಗಾಲಿ ಜನಾರ್ಧನ ರೆಡ್ಡಿಗಾರುರವರ ಪರಮಾಪ್ತ ಮಿತ್ರ ಶ್ರೀರಾಮುಲು ಅವರು ಏನು ಮಾಡುತ್ತಿದ್ದಾರೆ. ? ಅವರು ಕಳೆದ 20 ದಿನಗಳ ಹಿಂದೆ ತಮ್ಮ ಶಾಸಕ ಸ್ಥಾನಕ್ಕೆ ಸಲ್ಲಿಸಲಾದ ರಾಜಿನಾಮೆಯನ್ನು ವಾಪಸ್ ಪಡೆಯುವುದು ಹೇಗೆ, ಅದಕ್ಕೆ ಜನರ ಮುಂದೆ ಯಾವ ಕಾರಣ, ನೆಪ ವಿಶೇಷಣಗಳನ್ನು ಮುಂದಿಡಬಹುದು ಯೋಜಿಸುತ್ತಿದ್ದಾರೆ. ಇರಲಿ ಅದು ಅವರ ತಲೆ ನೋವು.

ಪುಟ 14ಕ್ಕೆ

ಉದ್ಯೋಗ ಖಾತ್ರಿ: ಎರಡನೇ ಹಂತದ ಹಣ ಬಿಡುಗಡೆಗೆ ರಾಜ್ಯದ ಮೂರು ಜಿಲ್ಲೆಗಳು ಮಾತ್ರವೇ ಅರ್ಹ

ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯು ಜಾರಿಯಾಗುತ್ತಿರುವ ಪರಿಯ ಬಗೆಗೆ ಇದೇ ಅಂಕಣದಲ್ಲಿ ಹಲವಾರು ಬಾರಿ ನೀವು ಓದಿದ್ದೀರಿ. ಈಗ ಮತ್ತೊಂದು ಹೊಸ ಸುದ್ದಿ ಓದಿ.

ಈ ಯೋಜನೆಯಲ್ಲಿ ಇಡೀ ವರ್ಷಕ್ಕೆ ಅಗತ್ಯವಾದ ಹಣ ಒಮ್ಮೆಗೆ ಬಿಡುಗಡೆ ಆಗುವುದಿಲ್ಲ. ಹಣಕಾಸು ವರ್ಷದ ಮೊದಲನೇ ತ್ರೈಮಾಸಿಕ ಅಂದರೆ ಮೊದಲ ಮೂರು ತಿಂಗಳಿಗೆ ಒಂದನೇ ಹಂತದಲ್ಲಿ ಹಣ ಬಿಡುಗಡೆಯಾಗುತ್ತದೆ. ಬಿಡುಗಡೆಯಾದ ಹಣದಲ್ಲಿ ಶೇ. 60 ರಷ್ಟು ಬಳಕೆಯಾಗಿದ್ದರೆ ಆಗ ಮುಂದಿನ ತ್ರೈ ಮಾಸಿಕದ ಹಣ ಬಿಡುಗಡೆಯಾಗುತ್ತದೆ. ಇದು ಈಗ ಇರುವ ಕ್ರಮ.

ದೇಶದಲ್ಲಿ ಒಟ್ಟಾರೆ ಕೇವಲ 18 ಶೇ. ಜಿಲ್ಲೆಗಳಲ್ಲಿ ಮಾತ್ರವೇ ಈ ಹಣಕಾಸು ವರ್ಷದ ಮೊದಲ ಹಂತದ ಹಣವನ್ನು ಶೇ. 60 ರಷ್ಟು ಬಳಕೆ ಮಾಡಲಾಗಿದೆ ಯಂತೆ. ಅಂದರೆ 640 ಜಿಲ್ಲೆಗಳಲ್ಲಿ 112 ಜಿಲ್ಲೆಗಳು ಮಾತ್ರ.

ಕರ್ನಾಟಕ ರಾಜ್ಯದಲ್ಲಿ ಈ ಅರ್ಹತೆ ಗಳಿಸಿದ ಜಿಲ್ಲೆಗಳ ಸಂಖ್ಯೆ ಎಷ್ಟು ? ಖಾಲಿ ಮೂರು. ರಾಜ್ಯದ 30 ಜಿಲ್ಲೆಗಳ ಪೈಕಿ ಚಿತ್ರದುರ್ಗ, ದಾವಣಗೆರೆ, ರಾಯಚೂರುಗಳಲ್ಲಿ ಮಾತ್ರ ಶೇ. 60 ಹಣ ಬಳಕೆಯಾದ ದಾಖಲೆ ಇದೆ.

ಹೌದು ದಾಖಲೆ ಇದೆ ಅಂತ ಅಷ್ಟೆ ನಾವು ಹೇಳಬಹುದು. ಈ ಜಿಲ್ಲೆಗಳಲ್ಲೇ ಆಗಲಿ ಅಥವಾ ಇತರೆ ಜಿಲ್ಲೆಗಳಲ್ಲೇ ಆಗಲಿ ನಿಜವಾಗಿಯೂ ಯೋಜನೆ ಸಮರ್ಪಕವಾಗಿ ಜಾರಿ ಆಗಿ ನಿಜವಾದ ಕೂಲಿಕಾರರ ಖಾತೆಗೆ ಹಣ ಸೇರಿದೆ ಅನ್ನುವುದಕ್ಕೆ ಖಾತ್ರಿ ಕೊಡುವವರು ಯಾರು ?

ಯಂತ್ರಗಳ ಮೂಲಕ ಕೆಲಸ ಮಾಡಿಸುವುದು. ಕೆಲಸವನ್ನೇ ಮಾಡದೇ ನಕಲಿ ಕೂಲಿಕಾರರ ಖಾತೆಗೆ ಹಣ ತುಂಬಿಕೊಂಡು ಕಾಂಟ್ರ್ಯಾಕ್ಟರ್‌ದಾರರೇ ಹಣ ಲಪಟಾಯಿಸುವುದು... ಇವೆಲ್ಲವೂ ನಡೆದೂ ಈ ಸ್ಥಿತಿ ಈ ಗತಿ ಕರ್ನಾಟಕ ರಾಜ್ಯಕ್ಕೆ ಈ ಬಿಜೆಪಿ ದರ್ಬಾರ್‌ನಲ್ಲಿ. ●

ರಾಮನಗರ

ಅರಣ್ಯ ಮತ್ತು ಬಗರ್‌ಹುಕುಂ ಸಾಗುವಳಿ ರೈತರಿಗೆ ಉಳುಮೆ ಚೀಟಿಗಾಗಿ ಮತ್ತು ಮನೆ ನಿವೇಶನ ರಹಿತರಿಗೆ ಮನೆ ನಿವೇಶನಕ್ಕಾಗಿ ಒತ್ತಾಯಿಸಿ ರಾಮನಗರ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆದಿದ್ದು ಒಂದು ವರದಿ

ಭೂಮಿ–ನಿವೇಶನಕ್ಕಾಗಿ ಬೃಹತ್ ಪ್ರತಿಭಟನೆ

■ ಶ್ರೀನಿವಾಸ್

ರಾಮನಗರ ಜಿಲ್ಲೆಯಲ್ಲಿ ಕಳೆದ 30–40 ವರ್ಷಗಳಿಂದ ಅರಣ್ಯ ಮತ್ತು ಬಗರ್‌ಹುಕುಂ ಸಾಗುವಳಿದಾರ ರೈತರಿಗೆ ಉಳುಮೆ ಚೀಟಿಗಾಗಿ ಬಡ ರೈತರು ಫಾರಂ ನಂ.50 ಮತ್ತು 53 ಅರ್ಜಿ ಸಲ್ಲಿಸಿದ ರೈತರಿಗೆ ಸಕ್ರಮ ಮಾಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು, ಮನೆ ನಿವೇಶನವಿಲ್ಲದ ಸಾವಿರಾರು ಬಡವರಿಗೆ ಮನೆ ನಿವೇಶನ ನೀಡಲು ಒತ್ತಾಯಿಸಿ, ಬಿಬಿಎಂಪಿ ಗಡಿಯಿಂದ 25 ಕಿ.ಮೀ. ವರೆಗಿನ ಬಗರ್‌ಹುಕುಂ ಸಾಗುವಳಿ ಸಕ್ರಮ ಮಾಡಬಾರದೆಂಬ ಸರ್ಕಾರದ ತೀರ್ಮಾನ ವಾಪಸ್ಸು ಪಡೆಯಬೇಕೆಂದು, ಅರಣ್ಯ ಇಲಾಖೆಯವರು ಬಡ ರೈತರಿಗೆ ಕಿರುಕುಳ ನೀಡಿ ಒಕ್ಕಲೆಬ್ಬಿಸುವುದನ್ನು ಕೈಬಿಡಬೇಕೆಂದು ಒತ್ತಾಯಿಸಿ ರಾಮನಗರ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸಾವಿರಾರು. ಜನ ಯಶಸ್ವಿಯಾಗಿ ಧರಣಿ ಸತ್ಯಾಗ್ರಹ ನಡೆಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ಡಿಸೆಂಬರ್ 2009ರ ಸರ್ಕಾರದ ಅಂಕಿ–ಅಂಶಗಳ ಪ್ರಕಾರ ವಿಲೇವಾರಿಯಾಗದೇ ಸರ್ಕಾರದ ಮುಂದೆ ಉಳಿದಿರುವ ಫಾರಂ ನಂ. 50 ಮತ್ತು 53 ಅರ್ಜಿಗಳ ಸಂಖ್ಯೆ 37, 395 ಈ ಅರ್ಜಿದಾರರ ಸ್ವಾಧೀನದಲ್ಲಿ ಇರುವ ಭೂಮಿ 93, 114 ಎಕರೆ, ಇದರ ಜೊತೆಗೆ ರಾಜಕೀಯ ಮತ್ತಿತರ ಕ್ಷುಲ್ಲಕ ಕಾರಣಗಳಿಂದ ಅನ್ಯಾಯವಾಗಿ ವಜಾ ಆಗಿರುವ ಅರ್ಜಿಗಳ ಮತ್ತು ಭೂಮಿಯ ವಿಸ್ತಾರ ಇದರ ಎರಡು ಪಟ್ಟು ವಿಲೇವಾರಿಯಾಗದೇ ಉಳಿದಿರುವ ಅರ್ಜಿದಾರರು ಹಾಗೂ ವಜಾಗೊಂಡಿರುವ ಬಗರ್‌ಹುಕುಂ ಸಾಗುವಳಿಯಲ್ಲಿ ಸ್ವಾಧೀನದಲ್ಲಿರುವ ದಲಿತರು, ಬಡ ರೈತರಿಗೆ ಈ ಭೂಮಿ ಬಿಟ್ಟರೆ ಬೇರೆ ಭೂಮಿಯೇ ಇಲ್ಲ. ಇಂತಹ ಸ್ಥಿತಿಯಲ್ಲಿ ಅರ್ಜಿ ವಜಾ ಆಗಿರುವ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಒಂದು ಕಡೆಯಿಂದ ಡಾ. ಬಾಲಸುಬ್ರಹ್ಮಣ್ಯಂ ಸಮಿತಿ ಮೂಲಕ ಸರ್ಕಾರ ಹೊರಟಿದೆ, ಇನ್ನೊಂದು ಕಡೆಯಲ್ಲಿ 30–40 ವರ್ಷಗಳ ಸ್ವಾಧೀನದಲ್ಲಿರುವ ಹಾಗೂ 20 ವರ್ಷಗಳ ಹಿಂದೆ ಅರ್ಜಿ ಹಾಕಿಕೊಂಡಿರುವ ಭೂಮಿಯನ್ನು ನಿನ್ನೆ, ಮೊನ್ನೆ ಹೊಸ ಕಾನೂನನ್ನು ಮಾಡಿ ವಿಲೇವಾರಿಯಾಗದಿರುವ ಬಹುತೇಕ ಅರ್ಜಿಗಳನ್ನು ವಜಾಮಾಡಲು ನಗರದ ಪ್ರದೇಶದಾಚೆಯ 25 ಕಿ.ಮೀ. ಪ್ರಶ್ನೆಯ ಆಧಾರದಲ್ಲಿ ರಾಜ್ಯ ಸರ್ಕಾರ ಪಿತೂರಿ ನಡೆಸಿದೆ.

ಇದರ ಮುಂದುವರಿದ ಭಾಗವಾಗಿಯೇ ಬೆಂಗಳೂರು ನಗರ ವ್ಯಾಪ್ತಿಯ ಸುತ್ತಮುತ್ತಲ 25 ಕಿ.ಮೀ. ವ್ಯಾಪ್ತಿ ಭೂಮಿಯನ್ನು ಸಕ್ರಮ ಮಾಡುವುದಿಲ್ಲವೆಂದು, ಮೂಲ ದಾಖಲೆಗಳ ಪ್ರಶ್ನೆ ಎತ್ತುವ ಮೂಲಕ ಹಾಗೂ ಬಡರೈತರಿಂದ ಅರಣ್ಯ ಇಲಾಖೆಯ ಮೂಲಕ ಒತ್ತುವರಿ ಭೂಮಿ ರೈತರಿಗೆ ಕಿರುಕುಳ ನೀಡಿ ಒಕ್ಕಲೆಬ್ಬಿಸುತ್ತಿದೆ. ಬಗರ್ ಹುಕುಂ ಅರಣ್ಯ ಭೂಮಿ ಒತ್ತುವರಿಯ ಸಾಗುವಳಿ ಚೀಟಿಗಾಗಿ, ಪೋಡಿಗಾಗಿ ರೈತರಿಂದ ಸಾವಿರಾರು ರೂ.ಗಳನ್ನು ಅಧಿಕಾರಿಗಳು ವಸೂಲಿ ಮಾಡಲು ಸರ್ಕಾರ ಅವಕಾಶ ಮಾಡಿಕೊಡುತ್ತಿದೆ. ನಿವೇಶನವಿಲ್ಲದ ಸಾವಿರಾರು ಬಡವರಿಗೆ ಒಂದು ಸೂರು ನೀಡದೆ ಸರ್ಕಾರ ಗೋಮಾಳ, ಅರಣ್ಯ ಭೂಮಿಯನ್ನು ಉಳ್ಳವರಿಗೆ, ಲ್ಯಾಂಡ್ ಡೆವಲಪರ್‌ಗಳಿಗೆ, ರಾಜಕಾರಣಿಗಳಿಗೆ ಭೂಮಿ ಮಂಜೂರು ಮಾಡಿ ಬಡವರನ್ನು ಸರ್ಕಾರ



ನಿರ್ಗತಿಕರನ್ನಾಗಿಸುತ್ತಿದೆ.

ಬಡರೈತರು, ದಲಿತರು, ಬಡವರ ಬಾಯಿಗೆ ಮಣ್ಣುಹಾಕಿ ಶ್ರೀಮಂತರ ಹೊಟ್ಟೆ ತುಂಬಿಸಲು ಸರ್ಕಾರಗಳು ಹೊರಟಿವೆ. ಇದರ ಮುಂಚೂಣಿಯಲ್ಲಿ ಬಿ.ಜೆ.ಪಿ. ಸರ್ಕಾರ ನಿಂತಿದೆ.


ಚನ್ನಪಟ್ಟಣ ತಾಲ್ಲೂಕಿನಲ್ಲಿ ದರಖಾಸ್ತು ಸಮಿತಿಗಳು ನಿಷ್ಕ್ರೀಯವಾಗಿವೆ. ಆದ್ದರಿಂದ ಬಗರ್‌ಹುಕುಂ ಮತ್ತು ಅರಣ್ಯ ಒತ್ತುವರಿದಾರರ ಸಾಗುವಳಿ ಚೀಟಿ ಮಂಜೂರು ಮಾಡಲು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ತಕ್ಷಣ ದರಖಾಸ್ತು ಸಮಿತಿಗಳನ್ನು ತಕ್ಷಣ ಪುನಶ್ಚೇತನಗೊಳಿಸಬೇಕು ಎಂದರು.


ಅಖಿಲಭಾರತ ಜನವಾದಿ ಮಹಿಳಾ ಸಂಘಟನೆ, ರಾಜ್ಯಾಧ್ಯಕ್ಷೆಯಾದ ಗೌರಮ್ಮ ಮಾತನಾಡಿ ಮೂರು ಜಿಲ್ಲೆಗಳ 20 ಸಾವಿರಕ್ಕಿಂತ ಹೆಚ್ಚಿನ ರೈತರು ಸುಮಾರು 35–40 ಸಾವಿರ ಎಕರೆ ಭೂಮಿಯ ಮೇಲಿನ ಸ್ವಾಧೀನವನ್ನು ಕಳೆದುಕೊಳ್ಳುತ್ತಾರೆ. ಈ ವ್ಯಾಪ್ತಿಯ ಭೂಮಿಯನ್ನು ಸಕ್ರಮ ಮಾಡುವುದಿಲ್ಲ. ಎಂಬುದಕ್ಕೆ ಕೊಡಲಾಗುತ್ತಿರುವ ಕಾರಣ ನಗರ ಬೆಳೆದಂತೆ ಸಾರ್ವಜನಿಕ ಬಳಕೆಗಾಗಿ ಈ ಭೂಮಿ ಬೇಕಾಗುತ್ತದೆ ಎಂಬುದು ಹಿಂದೆ ಈ ರೀತಿಯಲ್ಲಿ ಇದ್ದದ್ದು ನಿಜ. ಆದರೆ ಇತ್ತೀಚಿನ 4–5 ವರ್ಷಗಳಲ್ಲಿ ಇರುವ ಅಮೂಲ್ಯವಾದ ಸರ್ಕಾರಿ ಭೂಮಿಗಳನ್ನು ನೈಸ್ ರಸ್ತೆಯ ಖೇಣಿ, ಖೋಡೆ, ಇನ್‌ಫೋಸಿಸ್ ಇತ್ಯಾದಿ ಬಂಡವಾಳಶಾಹಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಇದು ಸಾಲದೇ ಫಲವತ್ತಾದ ರೈತರ ಭೂಮಿಯನ್ನು ಸಹ ಬಲತ್ಕಾರದ ಮೂಲಕ ಸ್ವಾಧೀನ ಪಡಿಸಿಕೊಂಡು ಶ್ರೀಮಂತರಿಗೆ ವರ್ಗಾವಣೆ ಮಾಡಲಾಗುತ್ತದೆ. ಎ.ಟಿ. ರಾಮಸ್ವಾಮಿ ವರದಿ ಗುರ್ತಿಸಿದ ಭೂಮಿಯಲ್ಲಿ ಸುಮಾರು 9 ಸಾವಿರ ಎಕರೆ ಭೂಮಿಯನ್ನು ಸರ್ಕಾರ ಮರುಸ್ವಾಧೀನ ಪಡೆದುಕೊಂಡು, ಹರಾಜು ಮೂಲಕ ಮತ್ತೆ ಬಂಡವಾಳಗಾರರಿಗೆ ನೀಡಲಾಗಿದೆ ಎಂದು ಟೀಕಿಸಿದರು.

ಬೀಡಿ ಕಾರ್ಮಿಕರ ರಾಜ್ಯ ಸಮಿತಿಯ ಮುಖಂಡರಾದ ಸೈಯದ್ ಮುಯೀಬ್ ಮಾತನಾಡಿ ರಾಮನಗರ ಜಿಲ್ಲೆಯಲ್ಲಿ ಮನೆ ನಿವೇಶನಗಳಿಲ್ಲದ ಸಾವಿರಾರು ಬಡವರು ವಾಸ ಮಾಡುತ್ತಿದ್ದಾರೆ. ಸರ್ಕಾರದ ಆಶ್ರಯ ಯೋಜನೆಯಂತಹ ಬಡವರ ಪರವಾದ ಯೋಜನೆಗಳನ್ನು ಉಳ್ಳವರಿಗೆ ನಿವೇಶನ ಹಂಚುವ ಮೂಲಕ ಬಡವರನ್ನು ನಿರ್ಲಕ್ಷಿಸಿದ್ದಾರೆ. ಬೀಡಿ ಕಾರ್ಮಿಕರಿಗೆ, ಪಿಲೇಚರಿ ಕೆಲಸ ಮಾಡುವ, ಊದುಬತ್ತಿ ಒತ್ತುವ ಕಾರ್ಮಿಕರಿಗೆ, ಯಾವುದೇ ರೀತಿಯ ಕನಿಷ್ಟ ಸೌಲಭ್ಯಗಳನ್ನು ನೀಡದೆ ಸರ್ಕಾರ ಸ್ಥಳೀಯ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ. ಆದ್ದರಿಂದ ನಮ್ಮ ಹಕ್ಕುಗಳನ್ನು ನಾವು ಪಡೆಯಲು ಮತ್ತು ಮನೆ ನಿವೇಶನಕ್ಕಾಗಿ ಸತತವಾಗಿ ಹೋರಾಟ ನಡೆಸಿದರೆ ಮಾತ್ರ ಜಯ ನಮ್ಮದಾಗುತ್ತದೆ ಎಂದು ತಿಳಿಸಿದರು. ಈ ಧರಣಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ನಗ
ಅಧ್ಯಕ್ಷರು, ಯಶೋಧಮ್ಮ, ಕರ್ನಾಟಕ ಪ್ರಾ
ರೈತ ಸಂಘದ ಜಿಲ್ಲಾ ಸಂಚಾಲಕ ಎ
ಶ್ರೀನಿವಾಸ್, ತಾಲ್ಲೂಕು ಕಾರ್ಯದರ್ಶಿ
ಸಂಜೀವಯ್ಯ, ತಾಲ್ಲೂಕು ಅಧ್
ಬಾಲಾನಾಯಕ್, ನಿವೇಶನ ರಹಿತ ಹೋರಾ
ಸಮಿತಿಯ ಅಧ್ಯಕ್ಷರಾದ ಖಾಜ, ಪ್ರಧಾ
ಕಾರ್ಯದರ್ಶಿ ಮಹಮದ್ ಮಖ್‌ದುಂ, ನಿಜಾ
ಜೌಹಾರ್, ರೆಹಮತ್ ಖಾನ್ , ಮುಂತಾ
ಮುಖಂಡರು ಹಾಗೂ ಸಾವಿರಾರು ಜ
ಭಾಗವಹಿಸಿದ್ದರು. ಧರಣಿಯ ಸ್ಥಳಕ್ಕೆ ಆಗಮಿಸಿ
ವಿಶೇಷ ಜಿಲ್ಲಾಧಿಕಾರಿಗಳು ಮನವಿಯನ್ನು
ಸ್ವೀಕರಿಸಿ ಹೋರಾಟಗಾರರನ್ನು ಮಾತುಕತೆ
ಕರೆದು ಸಮಸ್ಯೆಯನ್ನು ಇತ್ಯರ್ಥಪಡಿಸುವುದಾ
ತಿಳಿಸಿದರು.

ಪ್ರಮುಖ ಬೇಡಿಕೆಗಳು

* ಅರಣ್ಯ ಮತ್ತು ಬಗರ್‌ಹುಕುಂ ಸಾಗುವ
ದಾರರಿಗೆ ಶೀಘ್ರವೇ ಉಳುಮೆ ಚೀ
ನೀಡಬೇಕು. ಅರಣ್ಯ ಇಲಾಖೆಯ
ಕಿರುಕುಳ ತಪ್ಪಿಸಿ, ಒಕ್ಕಲೆಬ್ಬಿಸುವುದನ್ನು ನಿಲ್ಲಿ
ಬೇಕು.
* 50 ಮತ್ತು 53 ಫಾರಂ ಅಡಿಯಲ್ಲಿ ಅರ್ಜಿ
ಹಾಕಿರುವ ಎಲ್ಲಾ ಬಗರ್‌ಹುಕುಂ ಸಾಗುವ
ದಾರರ ರೈತರಿಗೆ ಭೂಮಿ ಸಕ್ರಮ ಗೊಳಿ
ಬೇಕು ಮತ್ತು ಬಗರ್‌ಹುಕುಂ ಸಾಗುವಳಿ
ಮಾಡುತ್ತಿರುವ ರೈತರಿಗೆ ಹೊಸದಾಗಿ ಅರ್ಜಿ
ಸಲ್ಲಿಸಲು ಅವಕಾಶ ನೀಡಬೇಕು.
* ಬಿಬಿಎಂಪಿ ವ್ಯಾಪ್ತಿಯಿಂದ 25 ಕಿ.ಮೀ
ದೂರದಲ್ಲಿ ಬಗರ್‌ಹುಕುಂ ಸಾಗುವ
ದಾರರಿಗೆ ಭೂ ಮಂಜೂರಾತಿ ಮಾಡು
ದಿಲ್ಲ ಎಂಬ ಆದೇಶ ವನ್ನು ರದ್ದು ಮಾ
ಬೇಕು.
* ಮೂಲ ದಾಖಲೆಗಳಿಲ್ಲ ಎನ್ನುವ ಹೆಸರಿನ
ರೈತರ ಮೇಲೆ ಕರ್ನಾಟಕ ಭೂ ಕಂದಾ
ಕಾಯ್ದೆ 1964ರ ಕಲಂ 136 (3) ರಡಿಯ
ಹಾಕಿರುವ ಕೇಸುಗಳನ್ನು ಕೂಡಲೇ ವಾಪ
ಪಡೆದು, ರೈತರ ಭೂಮಿಗಳಿಗೆ ಸರ್ಕಾರ
ದಾಖಲಾತಿ ಗಳನ್ನು ಒದಗಿಸಿಕೊಡಬೇಕ
* ಮನೆ ನಿವೇಶನ ರಹಿತರಿಗೆ ಮನೆ ನಿವೇಶ
ಮಂಜೂರು ಮಾಡಬೇಕು.
* ರೈತರಿಗೆ ಸ್ಕೆಚ್ ಕಾಪಿ, ಪೋಡಿ ಒದಗ
ಕೊಡಬೇಕೆಂದು ಹಾಗೂ ಅಧಿಕಾರಿಗ
ಭ್ರಷ್ಟಾಚಾರವನ್ನು ಸಂಪೂರ್ಣವಾ
ನಿಯಂತ್ರಿಸಬೇಕು.
* ಚನ್ನಪಟ್ಟಣ ತಾಲ್ಲೂಕಿನಲ್ಲಿ ನಿಷ್ಕ್ರಿ
ವಾಗಿರುವ ದರಖಾಸ್ತು ಕಮಿಟಿಯನ
ಪುನಶ್ಚೇತನಗೊಳಿಸಬೇಕು.






ವೇದರಾಜ ಎನ್.ಕೆ.

ಹಿರಿಯ ಮಂತ್ರಿಗಳ ನಡುವೆ ಜಟಾಪಟಿಯಷ್ಟೇ ಅಂತ್ಯ, ಹಗರಣವಲ್ಲ

ಜಿ ತರಂಗಾಂತರ ಹಂಚಿಕೆ ಕುರಿತಂತೆ ಕಾಸು ಇಲಾಖೆ ಪ್ರಧಾನ ಮಂತ್ರಿಗಳ ೀರಿಗೆ ಈ ವರ್ಷ ಮಾರ್ಚ್ ತಿಂಗಳಲ್ಲಿ ಸಿದ ಟಿಪ್ಪಣಿ ಯುಪಿಎ-2 ಸರಕಾರದ ಬ್ಬರು ಹಿರಿಯ ಮಂತ್ರಿಗಳ ನಡುವೆ ಟಾಪಟಿಗೆ ಕಾರಣವಾಗಿದ್ದು ಈಗ ಅದು ಗಿದ ಕಥೆ ಎಂದು ಇಬ್ಬರೂ ಮಂತ್ರಿಗಳು ರ್ವಜನಿಕವಾಗಿ ಒಟ್ಟಿಗೇ ದರ್ಶನ ನೀಡಿ ರಿದ್ದಾರೆ. ಆದರೆ ಯುಪಿಎ-2 ಸರಕಾರದ ಾಜಿ ಮತ್ತು ಹಾಲಿ ಹಣಕಾಸು ಮಂತ್ರಿಗಳ ಡುವೆ ಈ ಜಟಾಪಟಿಯಂತೂ ನಡೆಯಿತು ಂಬುದನ್ನು ಈ ಮೂಲಕ ಅವರು ಢಪಡಿಸಿದಂತಾಗಿದೆ. ಏಕೆ ಈ ಜಟಾಪಟಿ? ೀ ಹಗರಣಕ್ಕೆ ಕಾರಣರಾರು ಅಥವ ಅದರಲ್ಲಿ ಲುದಾರರು ಯಾರು ಎಂಬ ಬಗ್ಗೆಯೇ? ತರಂಗಾಂತರ ಹಂಚಿಕೆ ಪ್ರಧಾನ ಮಂತ್ರಿಗಳು ತ್ತು ಹಣಕಾಸು ಮಂತ್ರಿಗಳಿಗೆ ಗೊತ್ತಿದ್ದೇ ಡೆದಿದೆ ಎಂದು ಈಗ ನ್ಯಾಯಾಂಗ ಸ್ಟಡಿಯಲ್ಲಿರುವ ಮಾಜಿ ದೂರಸಂಪರ್ಕ ಂತ್ರಿಗಳ ವಾದದ ಬಗ್ಗೆಯೇ?

ಆ ಟಿಪ್ಪಣಿ ಒಂದು ಹಿನ್ನೆಲೆ ಪ್ರಬಂಧವಷ್ಟೇ, ಲ್ಲದೆ ಅದರಲ್ಲಿನ ಕೆಲವು ತೀರ್ಮಾನಗಳು, ್ಯಖ್ಯೆಗಳು ತನ್ನ ಅಭಿಪ್ರಾಯವನ್ನು ಂಬಿಸುವುದಿಲ್ಲ ಎಂದು ಹಾಲಿ ಹಣಕಾಸು ಂತ್ರಿಗಳು ಈಗ 'ಸ್ಪಷ್ಟೀಕರಣ' ಕೊಟ್ಟಿದ್ದಾರೆ. ಟಿಪ್ಪಣಿಯನ್ನು ತಯಾರಿಸಿದ ಹಣಕಾಸು ಲಾಖೆಯ ಉಪನಿರ್ದೇಶಕರು ಈ ಪ್ಪಣಿಯನ್ನು ಹಣಕಾಸು ಮಂತ್ರಿಯವರು ಸ್ವತ: ಪುಟಗಳ ದಸ್ತಾವೇಜನ್ನು ಪರೀಕ್ಷಿಸಿ ಂಜೂರು ಮಾಡಿದ್ದಾರೆ ಎಂದೂ ಪ್ಪಣಿಯಲ್ಲಿ ತಿಳಿಸಿದ್ದರು ಎಂಬುದನ್ನು ಇಲ್ಲಿ ನಪಿಸಿಕೊಳ್ಳಬಹುದು. ಈ ಬಗ್ಗೆ ಪ್ರತಿಕ್ರಿಯಿಸಲು ರಂಭದಲ್ಲಿ ಹಾಲಿ ಹಣಕಾಸು ಮಂತ್ರಿಗಳು ಾಕರಿಸಿದ್ದರು. ಈಗ ಯುಪಿಎ ಅಧ್ಯಕ್ಷರ ರ್ಮಾನಿನಂತೆ ಈ 'ಯುದ್ಧವಿರಾಮ' ನಡೆದಿದೆ ಂದು ಹೇಳಲಾಗಿದೆ. ಅದಕ್ಕೆ ಸಾಕ್ಷಿ ಎಂಬಂತೆ 'ಯುದ್ಧವಿರಾಮ'ವನ್ನು ಪ್ರಕಟಿಸುವಾಗ ಈ ಲಿ, ಮಾಜಿ ಯುಪಿಎ ಹಣಕಾಸು ಮಂತ್ರಿಗಳ ತೆಗೆ ಇನ್ನಿಬ್ಬರು ಹಿರಿಯ ಯುಪಿಎ ಂತ್ರಿಗಳೂ ಇದ್ದರು.

ಅದೇನೇ ಇರಲಿ, ದೊಡ್ಡ ಪ್ರಮಾಣದಲ್ಲಿ ದೇಶದ ಖಜಾನೆಯನ್ನು ಲೂಟಿ ಮಾಡಿದ ಈ ತರಂಗಾಂತರ ಹಂಚಿಕೆಗೆ ಇಡೀ ಯುಪಿಎ ಸರಕಾರ ಹೊಣೆ ಎಂಬುದನ್ನಂತೂ ಇದು ನಿರಾಕರಿಸುವುದಿಲ್ಲ. ಏಕೆ ಹೀಗಾಯಿತು ಎಂದು ಆತ್ಮಪರೀಕ್ಷೆ ಮಾಡಿಕೊಳ್ಳುವ ಒಲವು ಯುಪಿಎ-2 ಸರಕಾರದಲ್ಲಿ ಈಗಲೂ ಇಲ್ಲ ಎಂಬುದೂ



ಕೃಪೆ: ದಿ ಹಿಂದೂ

ಅಷ್ಟೇ ಸತ್ಯ. ಮಾನ್ಯ ಪ್ರಧಾನಮಂತ್ರಿಗಳು ಈ ಜಟಾಪಟಿಯ ಬಗ್ಗೆ ಜನರಲ್ಲಿ ಉಂಟಾಗಿರುವ ಆತಂಕವನ್ನು ಯಾವುದೇ ಮುಲಾಜಿಲ್ಲದೆ ಉಪೇಕ್ಷಿಸಿದ್ದಾರೆ, ಇದು ನಮ್ಮ ರಾಜಕೀಯ ವ್ಯವಸ್ಥೆಯನ್ನು, ಅಂದರೆ ಅವರ ಹಗರಣಪೀಡಿತ ಸರಕಾರವನ್ನು ಅಸ್ಥಿರಗೊಳಿಸುವ ಪ್ರತಿಪಕ್ಷಗಳ ಹುನ್ನಾರ ಎಂದು ಹೇಳಿದ್ದಾರೆ.

ಈ ನಡುವೆ ಅವರು (ವಿಮಾನ ಪತ್ರಿಕಾ ಸಮ್ಮೇಳನದಲ್ಲಿ) ಸಂಸತ್ತಿನ ಮುಂದಿರುವ ಆರ್ಥಿಕ ಶಾಸನಗಳ ಅಂಗೀಕಾರಕ್ಕೆ ನೆರವು ನೀಡಬೇಕು ಎಂದು ಪ್ರತಿಪಕ್ಷಗಳನ್ನು ವಿನಂತಿಸಿಕೊಂಡಿದ್ದಾರೆ. ವಿಮಾವಲಯದಲ್ಲಿ ವಿದೇಶಿ ನೇರ ಹೂಡಿಕೆ ಮಿತಿ ಹೆಚ್ಚಳ, ಪೆನ್ಶನ್ ನಿಧಿಗಳಿಂದ ಶೇರು ಮಾರುಕಟ್ಟೆಗೆ ಹಣ ಒದಗಿಸುವ ಪೆನ್ಶನ್ 'ಸುಧಾರಣಾ' ಮಸೂದೆ ಇತ್ಯಾದಿ ಅವರು ಹೇಳುವ ಆರ್ಥಿಕ ಶಾಸನಗಳು.

ಅಂತೂ ಈ 'ಸ್ವಚ್ಛ ಮನುಷ್ಯ' ಒಟ್ಟಿನಲ್ಲಿ ಪ್ರಸ್ತುತ ಯುಪಿಎ-2 ಸನ್ನಿವೇಶದಲ್ಲಿ ಆರಾಮವಾಗಿದ್ದಾರೆ ಎನ್ನಬೇಕೇ?

ಕಾರ್ಪೊರೇಟ್ ವಲಯಕ್ಕೆ ಶರಣಾದ ಕಾರ್ಮಿಕ ಇಲಾಖೆ

ನವ-ಉದಾರೀಕರಣವಾದಿಗಳು ಮತ್ತು ಯುಪಿಎ-2 ಸರಕಾರದ ಆರ್ಥಿಕ ಇಲಾಖೆಗಳ ವಕ್ತಾರರು ದೇಶದ ಕಾರ್ಮಿಕ ಕಾನೂನುಗಳು ಹಳಸಲಾಗಿವೆ, ಅವನ್ನು ಸಮಕಾಲಿಕಗೊಳಿಸಬೇಕು ಎಂದು ಸದಾ ಹೇಳುತ್ತಿರುತ್ತಾರೆ. ಆದರೆ ಅವರ ಸಂಕೇತವಿರುವುದು ಕಾರ್ಮಿಕರಿಗೆ ಅಲ್ಪ-ಸ್ವಲ್ಪ ಪರಿಹಾರವನ್ನಾದರೂ ಕೊಡುವ ಕಾನೂನು ಅಂಶಗಳ ಬಗ್ಗೆ ಮಾತ್ರ ಎಂಬುದು ಸ್ಪಷ್ಟ. ಇದು ಕಳೆದ ವಾರ ಇನ್ನಷ್ಟು ಸ್ಪಷ್ಟವಾಗಿದೆ.

ಕೇಂದ್ರ ಕಾರ್ಮಿಕ ಇಲಾಖೆ ಹಲವು ದಶಕಗಳ ಹಿಂದಿನ ಅಪ್ರೆಂಟಿಸ್‌ಶಿಪ್ ಕಾನೂನಿನಲ್ಲಿ ತಿದ್ದುಪಡಿ ತಂದು ಉದ್ದಿಮೆಗಳು/ಕಂಪನಿಗಳು ದುಡಿಸಿಕೊಳ್ಳುವ ಅಪ್ರೆಂಟಿಸ್‌ಗಳಲ್ಲಿ 50% ಮಂದಿಗಾದರೂ ತಮ್ಮಲ್ಲಿ ಖಾಯಂ ಉದ್ಯೋಗ ಕೊಡಬೇಕು ಎಂದು ವಿಧಿಸಬೇಕು ಎಂದು ಶಿಫಾರಸು ಮಾಡಿತ್ತು. ಇದಕ್ಕೆ ಭಾರತದ ಕಾರ್ಪೊರೇಟ್ ವಲಯದಿಂದ ಭಾರೀ ವಿರೋಧ ಬಂದಿದ್ದು, ಇದು ಯುಪಿಎ-2 ಸರಕಾರದ ವಿವಿಧ ಆರ್ಥಿಕ/ ಉದ್ದಿಮೆ ಸಂಬಂಧಿ ಇಲಾಖೆಗಳಲ್ಲೂ ಪ್ರತಿಫಲನಗೊಂಡುದರ ಪರಿಣಾಮವಾಗಿ ಈ ಅಂಶವನ್ನು ಕೈಬಿಟ್ಟು ಮಾಲಕರು ತಮ್ಮಲ್ಲಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲು ಬಾಧ್ಯರು ಎಂದಷ್ಟೇ ಸೇರಿಸಬಹುದು ಎಂದು ಯುಪಿಎ-2 ಸರಕಾರ ನಿರ್ಧರಿಸಿರುವುದಾಗಿ ವರದಿಯಾಗಿದೆ.

12ನೇ ಪಂಚವಾರ್ಷಿಕ ಯೋಜನೆಯಲ್ಲಿ ಕುಶಲ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸಲು ವಿಶೇಷ ಗಮನ ನೀಡಬೇಕು ಎಂದು ಹೇಳಲಾಗಿದೆ. ಪ್ರಧಾನಮಂತ್ರಿಗಳ ಮಂಡಳಿ 2022ರ ವೇಳೆಗೆ ಭಾರತದಲ್ಲಿ ಕುಶಲ ಕಾರ್ಮಿಕರ ಸಂಖ್ಯೆ 50 ಕೋಟಿಯಾಗಬೇಕು ಎಂದು ಗುರಿ ನಿಗದಿ ಮಾಡಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಇಲಾಖೆ ಈ ತಿದ್ದುಪಡಿ ತರಲು ಮುಂದಾಗಿತ್ತು. ಆದರೆ, ದೇಶದ ಕಾರ್ಪೊರೇಟ್ ಕುಳಗಳ ಸಂಘಟನೆ ಫಿಕಿಯ ಮಹಾಕಾರ್ಯದರ್ಶಿ ಇದು ತರವಲ್ಲ, ದೇಶದಲ್ಲಿ ಕುಶಲ ಕಾರ್ಮಿಕರ ಕೊರತೆಯೇನೋ ಇದೆ, ಅದಕ್ಕೆ ಉದ್ದಿಮೆಗಳು ತಮ್ಮದೇ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿವೆ, ಅವಕ್ಕೆ 'ಉತ್ತೇಜನೆ'ಗಳನ್ನು ಒದಗಿಸಬೇಕೇ ಹೊರತು ಈ ರೀತಿ ಕಾರ್ಪೊರೇಟ್ ವಲಯವನ್ನು ಬಾಧ್ಯಗೊಳಿಸಬಾರದು ಎಂದಿದ್ದಾರೆ.

ಮಾಲಕರಿಗೆ 'ಉತ್ತೇಜನೆ'ಗಳು ಬೇಕು, ಕಾರ್ಮಿಕರಿಗೆ ಬೇಕಿಲ್ಲ, ಬಾಧ್ಯತೆಗಳು ಮಾತ್ರ ಸಾಕು- ಇದು ಯುಪಿಎ-2 ಸರಕಾರವೂ ಅಂಗೀಕರಿಸಿರುವ ನವ-ಉದಾರವಾದಿ ತತ್ವ ತಾನೇ? ಹೇಗೆ ತಾನೇ ಅದು ಕಾರ್ಪೊರೇಟ್ ವಲಯದ ಒತ್ತಡವನ್ನು ಬದಿಗೊತ್ತುವುದು!


ಸಿರಿವಂತರು ಹೆಚ್ಚಿನ ತೆರಿಗೆ ತೆರಲು ಸಿದ್ಧರಾಗಬೇಕಂತೆ!

ಹೀಗೆಂದವರು ಮತ್ತಾರೂ ಅಲ್ಲ, ಯುಪಿಎ-2 ಸರಕಾರದ ಗೃಹಮಂತ್ರಿಗಳು! ಇವರು ಯುಪಿಎ ಸರಕಾರದ ಹಣಕಾಸು ಮಂತ್ರಿಗಳಾಗಿ ಇದೇ ಸಿರಿವಂತರಿಗೆ ಹಲವು ಲಕ್ಷ ಕೋಟಿ ರೂ.ಗಳ ರಿಯಾಯ್ತಿಗಳನ್ನು ತಮ್ಮ ಎಲ್ಲ ಬಜೆಟ್‌ಗಳಲ್ಲಿ ನೀಡಿದ ಮಹಾಶಯರಲ್ಲವೇ? ಎಷ್ಟೆಂದರೆ ಕಾರ್ಪೊರೇಟ್ ವಲಯ 2004ರಲ್ಲಿ 'ಕನಸಿನ ಬಜೆಟ್' ಎಂದು ಹಾಡಿ ಹೊಗಳಿದ ಬಜೆಟಿನೊಂದಿಗೆ ಆರಂಭವಾದ ಈ ಭಾರೀ ಮೊತ್ತದ ರಿಯಾಯ್ತಿಗಳು ಈಗ, ಇತ್ತೀಚಿನ ಬಜೆಟ್‌ಗಳಲ್ಲಿ ಸರಕಾರ 'ಬಿಟ್ಟುಕೊಟ್ಟ ಆದಾಯ' ಎಂಬ ಒಂದು ಬಾಬ್ತನ್ನು ಸೇರಿಸುವಂತೆ ಮಾಡಿದೆ. ಇದನ್ನು ಅವರೂ ಈಗ ಒಪ್ಪಿಕೊಳ್ಳುತ್ತಿದ್ದಾರೆ, ಅದರಿಂದಾಗಿ ಈಗ ಹೆಚ್ಚು ತೆರಿಗೆಗೆ ಸಿದ್ಧರಾಗಿ ಎಂದು ಹೇಳುವ ಅರ್ಹತೆ ತಮಗಿದೆ ಎಂದು ಅವರು ನಂಬಿದಂತಿದೆ.

ಏಕಿರಬಹುದು? ಯುರೋಪಿನಲ್ಲಿ ಶ್ರೀಮಂತರು ತಾವಾಗೇ ತಮ್ಮ ಮೇಲೆ ಹೆಚ್ಚು ತೆರಿಗೆ ಹಾಕಿ ಎನ್ನುತ್ತಿದ್ದಾರೆ, ಅಮೆರಿಕನ್ ಅಧ್ಯಕ್ಷರೂ ಅಲ್ಲಿನ ಆರ್ಥಿಕವನ್ನು ಸಂಕಟದಿಂದ ಹೊರ ತರಲು ಶ್ರೀಮಂತರ ಮೇಲೆ ತೆರಿಗೆ ಹಾಕುವ ಸೂಚನೆ ನೀಡಿದ್ದಾರೆ ಎಂದಿರುವ ಅವರಿಗೆ ತಾವು ಪೋಷಿಸಿದ ಭಾರತದ ಶ್ರೀಮಂತರಲ್ಲಿ ಬಹಳ ಮಂದಿಗೆ ಈ ವಿಚಾರ ಈಗಲೂ ಹಿಡಿಸಲಿಕ್ಕಿಲ್ಲ ಎಂಬ ಸಂದೇಹವೂ ಇದೆ.

ಭಾರತದಲ್ಲಿ ಸಂಪನ್ಮೂಲ ಸಂಗ್ರಹದ ಪ್ರಮಾಣ ಇಳಿಮುಖವಾಗುತ್ತಿದೆ ಎಂಬ ಆತಂಕಕಾರಿ ಅಂಶವನ್ನು 12ನೇ ಪಂಚವಾರ್ಷಿಕ ಯೋಜನೆಯ ನಿಲುವು ಪತ್ರ ಹೇಳಿದೆಯಂತೆ. ಬಡವರ 'ಸಬ್ಸಿಡಿ'ಗಳನ್ನು ಕಡಿತ ಮಾಡಿ ಬಲ್ಲಿದರಿಗೆ 'ಉತ್ತೇಜಕ'ಗಳನ್ನು ಕೊಡುವ ನವ-ಉದಾರವಾದಿ ತತ್ವ ಜಾಗತಿಕವಾಗಿ ಹಳಸಲಾಗಿದೆ ಎಂಬ 'ಜ್ಞಾನೋದಯ'. ಆ ತತ್ವ ಸಾರ್ವತ್ರಿಕ ಸಮೃದ್ಧಿಯ ಬದಲು ಹೊಸ-ಹೊಸ ಬಿಕ್ಕಟ್ಟುಗಳನ್ನಷ್ಟೇ ಸೃಷ್ಟಿಸಬಲ್ಲುದು ಎಂದು ಅನುಭವಕ್ಕೆ ಬಂದ ಮೇಲಾದರೂ ಆಗಿರಬಹುದೇ? ಪ್ರಧಾನಮಂತ್ರಿಗಳ ವಿಮಾನ ಪತ್ರಿಕಾಸಮ್ಮೇಳನ ಅಂತಹ ಸೂಚನೆಯನ್ನೇನೂ ಕೊಡುತ್ತಿಲ್ಲ.

ಕೃಪೆ: ದಿ ಹಿಂದೂ



ಯುಪಿಎ ಸರ್ಕಾರದ ಹಗರಣಗಳ ಕುರಿತ ದಾಖಲೆಗಳು

ಬಿಜೆಪಿ ಸರ್ಕಾರದ 3 ವರ್ಷಗಳು

ಪುಟ 5 ರಿಂದ

ಮಾಡಿಕೊಡಲು ಬೆಂಗಳೂರು ನಗರದಲ್ಲಿ 40,000 ಹೆಚ್ಚುವರಿ ಆಟೋಗಳಿಗೆ ನೂತನ ಪರ್ಮಿಟ್ ನೀಡಲು ಮುಂದಾಗಿದೆ. ಅದಕ್ಕೂ ಜನತೆಯ ಹಾಗೂ ಚಾಲಕರ ಪ್ರತಿರೋಧ ಎದುರಿಸುತ್ತಿದೆ.

ಭ್ರಷ್ಟಾತೀ ಭ್ರಷ್ಟ ಸರ್ಕಾರ..

ಈ ಎಲ್ಲಾ ಕಾರ್ಮಿಕ ವಿರೋಧಿ ಮಾಲೀಕ ಪರ ನೀತಿ ಅನುಸರಿಸುತ್ತಿರುವ ಬಿಜೆಪಿ ಸರ್ಕಾರ, ತಾನೇ ನೀಡಿದ್ದ ರೂ.2ಕ್ಕೆ ಕೆ.ಜಿ ಅಕ್ಕಿ ನೀಡುವ ಪಡಿತರದ ಭರವಸೆಯನ್ನು ಮರೆತೆ ಬಿಟ್ಟಿದೆ. ನಿವೇಶನ ರಹಿತರು ನಿವೇಶನಕ್ಕಾಗಿ ಒತ್ತಾಯಿಸುತ್ತಿರುವಾಗ ಸಚಿವರು, ಶಾಸಕರು, ಸಂಸದರಿಗೆ ಪ್ರತಿಷ್ಠಿತ ಬಡಾವಣೆಗಳಲ್ಲಿ ನಿವೇಶನ ನೀಡಲು, ಸಿಎಂ, ತನ್ನ ಮಕ್ಕಳು, ಬಂಧು-ಬಳಗಕ್ಕೆ ಭೂಮಿ ನೀಡಲು, ಮುಂದಾಗಿ ಡಿನೋಟಿಫಿಕೇಶನ್ ದಂಧೆಯಲ್ಲಿ ತೊಡಗಿತ್ತು.

ರಸಗೊಬ್ಬರ ಕೇಳಿದ ರೈತರಿಗೆ ಗುಂಡಿಟ್ಟ ಸರ್ಕಾರ, ರೈತರ ವಿರೋಧದ ನಡುವೆ ಕಾರ್ಖಾನೆ ಮಾಲೀಕರಿಗಾಗಿ ರೈತರ ಕೃಷಿ ಭೂಮಿ ವಶಪಡಿಸಿಕೊಳ್ಳಲು ಮುಂದಾಗಿದೆ. ವಿಮಾನ ನಿಲ್ದಾಣ, ಕೈಗಾರಿಕಾ ವಸಾಹತುಗಳಿಗಾಗಿ ರೈತರ ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಚಿವರು ಕೊಳ್ಳೆ ಹೊಡೆದಿರುವ ಹಗರಣಗಳಲ್ಲಿ ಸಿಲುಕಿ ಬಿಜೆಪಿ ಸಚಿವರು ಮತ್ತು ಅವರ ಮಗ ಕಾರ್ಪೋರೇಟರ್ ಜೈಲಿನಲ್ಲಿದ್ದಾರೆ.

ಬೆಲೆ ಏರಿಕೆ ತಡೆಯಬೇಕಾದ ಸರ್ಕಾರ, ಬಸ್ ದರ, ಬಸ್ ಪಾಸ್ ದರ ಏರಿಕೆ ಮೂಲಕ ಗಾಯದ ಮೇಲೆ ಬರೆ ಎಳೆದಿದೆ. ಪೆಟ್ರೋಲ್-ಡೀಸೆಲ್ ಮೇಲಿನ ರಾಜ್ಯ ತೆರಿಗೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಮೇಲಿನ ರಾಜ್ಯ ತೆರಿಗೆ ಕಡಿಮೆ ಮಾಡದೆ ಜನತೆಯನ್ನು ಪ್ರಮುಖವಾಗಿ ದುಡಿಯುವ ವರ್ಗವನ್ನು ದೋಚುತ್ತಿದೆ.

ಚಳುವಳಿ-ಹೋರಾಟ ಮುರಿಯಲು ಮೆರವಣಿಗೆ ಸಭೆ, ನಡೆಸಲು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ. ದ್ವಾರ ಸಭೆ ನಡೆಸಲು ಸ್ಥಳದ ಮಾಲೀಕರ ನಿರಾಪೇಕ್ಷಣಾ ಪತ್ರವನ್ನು (NOC) ಕಡ್ಡಾಯಗೊಳಿಸಿದೆ. ಮೈಸೂರಿನಲ್ಲಿ ರಸ್ತೆಗಳಲ್ಲಿನ ಅಂಡರ್‌ಪಾಸ್‌ಗಳಲ್ಲಿ ಮೆರವಣಿಗೆ ನಡೆಸಬೇಕೆಂಬ ನಿರ್ಬಂಧ ವಿಧಿಸುವಂತಹ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ನಿಯಮಾವಳಿಗಳ ಮೂಲಕ ರೂಪಿಸಿದೆ.

ಯಡ್ಡಿ ಹೋಗಿ ಗೌಡ್ರು ಬಂದರೂ ಕಾರ್ಮಿಕರಿಗಿಲ್ಲ ಸುಖ!

ಆದರೆ ಕಾರ್ಮಿಕರ ಸಮಾನ ಕನಿಷ್ಠ ಕೂಲಿ ಬೇಡಿಕೆ ಈಡೇರಿಸಲು ತಯಾರಿಲ್ಲ. 2007 ನವೆಂಬರ್‌ನಿಂದ ವಿವಿಧ ಹಂತದ ಸಹಸ್ರಾರು ಕಾರ್ಮಿಕರ ಹೋರಾಟಗಳ ಮೂಲಕ ಒತ್ತಾಯದ ಪರಿಣಾಮವಾಗಿ ಕನಿಷ್ಠ ವೇತನ ಕಾಯ್ದೆಯ 5(1)(ಎ) ಅಡಿ ಪರಿಣತರ ಸಮಿತಿ ರಚಿಸಿದೆ. ಆದರೆ ಸಮಿತಿ ರಚಿಸಿ ವರ್ಷವೇ ಕಳೆದಿದ್ದರೂ, ಸಭೆಯನ್ನು ಕರೆಯದೆ ಕಾಲದೂಡುತ್ತಿದೆ. ರಾಜ್ಯ ಬಿಜೆಪಿ ಸರ್ಕಾರದ ಈ ಎಲ್ಲಾ ಮಾಲೀಕರ ಪರ ಹಿತಸಾಧನೆಯ ಕಾರಣಗಳಿಂದಾಗಿ ಸಂಘಗಳನ್ನು ಮಾನ್ಯ ಮಾಡದೆ, ಸಂಘ ಕಟ್ಟಿದ ಕಾರಣಕ್ಕೆ ಕೆಲಸ ನಿರಾಕರಿಸುವ, ಕಾರ್ಮಿಕರನ್ನು ಅಮಾನತು ಪಡಿಸುವ, ಅಕ್ರಮ ಬೀಗಮುದ್ರೆ, ರಿಟ್ರೆಂಚ್‌ಮೆಂಟ್, ಮುಚ್ಚುವಿಕೆ, ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸದ ಮಾಲೀಕರ ಕ್ರಮಗಳು ಹೆಚ್ಚುತ್ತಿವೆ ಮಾತ್ರವಲ್ಲ ತೀವ್ರಗೊಂಡು ವ್ಯಾಪಕಗೊಳ್ಳುತ್ತಿವೆ.

ಒಟ್ಟಾರೆ ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಪೂರ್ಣಗೊಳಿಸಿರುವ 3 ವರ್ಷಗಳು ದುಡಿಯುವ ವರ್ಗಕ್ಕೆ ಜನತೆಗೆ ದ್ರೋಹ ಎಸಗಿದ ವರ್ಷಗಳಾಗಿವೆ. ಬಿಜೆಪಿ ಪಕ್ಷದ ಬಂಡವಾಳಶಾಹಿ ಪರ ಧೋರಣೆಯ ಫಲವಾಗಿ ಹೊರಹೊಮ್ಮುತ್ತಿರುವ ಕಾರ್ಮಿಕ ವಿರೋಧಿ ಕ್ರಮಗಳನ್ನು ಸ್ವತ: ಕಾರ್ಮಿಕ ಸಂಘಗಳ ಮುಖಂಡರಾಗಿದ್ದ ಹಾಲಿ ಮುಖ್ಯಮಂತ್ರಿ ಸದಾನಂದಗೌಡರು ಬದಲಾಯಿಸುತ್ತಾರೆ ಎಂಬ ನಿರೀಕ್ಷೆಯೂ ಮರೀಚಿಕೆಯೇ ಆಗಲಿದೆ.

●

ಬಿಜೆಪಿ ದರ್ಬಾರ್...

ಪುಟ 11 ರಿಂದ

ಇಲ್ಲಿ ನಾವುಗಳು ಗಮನಿಸಬೇಕಾದ ಮುಖ್ಯ ವಿಷಯ ಇದೆ. ಜನಾರ್ಧನ ರೆಡ್ಡಿ 'ಅಂಡ್ ಕಂಪನಿಯು ಕೊಟ್ಟ ಕಸವನು ತಿಂದು, ಆಪರೇಷನ್ ಕಮಲಕ್ಕೆ ಗುರಿಯಾಗಿ ಕಾಂಗ್ರೆಸ್, ಜೆಡಿ(ಎಸ್) ಶಾಸಕರು ಬಿಜೆಪಿ ಪಕ್ಷವನ್ನು ಸೇರುವ ಸಲುವಾಗಿ ರಾಜಿನಾಮೆ ಕೊಡಲು ಮುಂದಾದರೆ ವಿಧಾನ ಸಭೆಯ ಸ್ಪೀಕರ್ ಬೋಪಯ್ಯನವರು ಶಾಸಕರು ಪತ್ರ ಕೈಗಿಡುವ ಮೊದಲೇ ಅವರ ಕೈಯಿಂದ ಅದನ್ನು ಕಿತ್ತುಕೊಂಡು ತಕ್ಷಣ ಅದನ್ನು ಅಂಗೀಕರಿಸುತ್ತಿದ್ದರು ಅಂತ ವಿರೋಧ ಪಕ್ಷಗಳಿಂದ ಟೀಕೆ ಕೇಳಿ ಬಂದಿದೆ. ಈಗ ರಾಜಿನಾಮೆ ಕೊಟ್ಟು 20 ದಿನಗಳಾದರೂ ಯಾಕೆ ಅದನ್ನು ಅಂಗೀಕರಿಸಲ್ಲ... ಸ್ವತ: ಶ್ರೀರಾಮುಲು ಅವರೇ ಕೊಡಗಿಗೆ ಪ್ರಯಾಣ ಬೆಳೆಸಿ ಖುದ್ದು ರಾಜಿನಾಮೆಯನ್ನು ಬೊಪಯ್ಯನವರ ಕೈಗಿಟ್ಟು ಬಂದ ಮೇಲೂ ಈ ಪರಿ ವಿಳಂಬವೇಕೆ ? ಇತರರಿಂದ ಬೇಡವಾದ ರಾಜಿನಾಮೆ ಕಾರಣಗಳ ವಿವರಣೆ ಶ್ರೀರಾಮುಲು ಅವರಿಂದ ಮಾತ್ರ ಏಕೆ ಬೇ ? ವಿವರಣೆ ಅಗತ್ಯವಾಗಿದ್ದಿದ್ದರೆ ನೇರ ಭೇಟ ಕಾಲದಲ್ಲೇ ಕೇಳ ಬಹುದಿತ್ತಲ್ಲ.... ಎಂಬಿತ್ಯಾ ಪ್ರಶ್ನೆಗಳನ್ನು ಇದೀಗ ಕೇಳ ಲಾಗುತ್ತಿದೆ.

ಸ್ಪೀಕರ್‌ರವರು ಆ ಸ್ಥಾನಕ್ಕೆ ಬಂದ ಮೇ ತಮ್ಮ ಮಾತೃ ಪಕ್ಷದ ಸದಸ್ಯತ್ವವ ಉಳಿಸಿಕೊಳ್ಳಲೇ ಬಾರದು ಎಂದೇನೂ ನಿಯ ಇಲ್ಲದಿದ್ದರೂ ಅವರು ತಮ್ಮ ಸ್ವಂತ ಪಕ್ಷದ ಕು ವ್ಯಾಮೋಹಗಳನ್ನು ಮೀರಿ ಪ್ರಜಾಪ್ರಭುತ್ವ ಆಶಯ ಮತ್ತು ಸಂವಿಧಾನದ ನಿಯಮಗಳ ನಡೆಯ ಬೇಕೆಂದು ನಿರೀಕ್ಷಿಸಲಾಗುತ್ತ ಬಿಜೆಪಿಯ ಭಿನ್ನಮತೀಯ ಶಾಸಕರು ಮ ಪಕ್ಷೇತರ ಶಾಸಕರ ಅನರ್ಹ ಶಾಸಕರ ಪ್ರಶ್ನೆಯ ಇದೇ ಸ್ಪೀಕರ್ ಬೋಪಯ್ಯನವರು ಕೊ ಅನರ್ಹತೆ ಆದೇಶದ ಕುರಿತು ದೇಶದ ಸು ಕೋರ್ಟು ತನ್ನ ತೀರ್ಪಿನಲ್ಲಿ ಮಾಡಿ ಮಂಗಳಾರತಿಯನ್ನಾರೂ ನೆನಪಿ ಕೊಳ್ಳಬಾರದೇ ? ಎಂದು ರಾಜ್ಯದ ಪ್ರಜ್ಞಾವ ಜನತೆ ಪ್ರಶ್ನಿಸುವಂತಾಗಿದೆ.

ಅಮೆರಿಕನ್ ಅಧ್ಯಕ್ಷರೇಕೆ ಎಗರಾಡುತ್ತಿದ್ದಾರೆ

ಪುಟ 8 ರಿಂದ

ಯನ್ನು ರಚಿಸಿದಂತಾಗುತ್ತದೆ. ಇದು 'ಚತುಷ್ಪಯ'ರು ಎಂದು ಹೇಳಲಾಗುತ್ತಿರುವ ಅಮೆರಿಕಾ, ಯುರೋಪಿಯನ್ ಒಕ್ಕೂಟ, ರಶ್ಯಾ ಮತ್ತು ವಿಶ್ವಸಂಸ್ಥೆಯ ನಡುವೆ ಮಾತುಕತೆಗಳನ್ನು ಮುಂದಕ್ಕೊತ್ತಲು ಸಾಕಷ್ಟು ಸಮಯ ಮತ್ತು ಅವಕಾಶ ಕಲ್ಪಿಸುತ್ತದೆ ಎಂಬುದು ಅಮೆರಿಕಾದ ನಿರೀಕ್ಷೆ. ಆದರೆ ಈ 'ಚತುಷ್ಪಯ' ಇದುವರೆಗೂ ಗಡಿಗಳು, ಭದ್ರತೆ, ನಿರಾಶ್ರಿತರು ಮತ್ತು ಜೆರುಸಲೇಂ ಬಗ್ಗೆ ಯಾವುದೇ ಮಾರ್ಗ ನಿರ್ದೇಶನಗಳನ್ನು ಒಪ್ಪಿಕೊಂಡಿಲ್ಲ.

ಪಶ್ಚಿಮ ಏಶ್ಯಾದಲ್ಲಿ ಯಾವುದೇ ಬಹುಕಾ ಬಾಳಬಲ್ಲ ಶಾಂತಿ ಸ್ಥಾಪನೆ ಇಸ್ರೇಲಿ ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರು ನೆಲಗಳನ್ನು ತೆರವು ಮಾಡಿ, 1967ರ ಮೊದ ಗಡಿಗಳೊಂದಿಗೆ, ಪೂರ್ವ ಜೆರುಸಲೆ ರಾಜಧಾನಿಯಾಗಿ ಹೊಂದಿರುವ ಪ್ಯಾಲೆಸ್ತೀ ಪ್ರಭುತ್ವವನ್ನು ನಿರ್ಮಿಸಿದಾಗ ಮಾತ್ರವೇ ಸಾ

ಅಮೆರಿಕನ್ ಸಾಮ್ರಾಜ್ಯಶಾಹಿ ಚಿರತೆ ಎಂ ತನ್ನ ಪಟ್ಟೆಗಳನ್ನು ಬದಲಿಸದು. ಅದಕ್ಕೆ ನೇರವ ಸವಾಲು ಒಡ್ಡಿ ಅದನ್ನು ಸೋಲಿಸಬೇಕಾಗಿ

ಈ ವಾರ.....

ಪುಟ 3 ರಿಂದ

ಬಿಜೆಪಿಯ ಈ ವರ್ತನೆ ಪ್ರಜಾಪ್ರಭುತ್ವದ ಮೇಲಿನ ಅತ್ಯಂತ ಒಂದು ಧಾಳಿಯಾಗಿದೆ.

ಮೇಲೇಳದವರು

ಈ ಚುನಾವಣಾ ಫಲಿತಾಂಶ ಕಾಂಗ್ರೆಸ್ ಮತ್ತು ಜೆಡಿ(ಎಸ್)ಗಳನ್ನು ತೀವ್ರವಾಗಿ ಆತ್ಮ ವಿಮರ್ಶೆಗೆ ಹಚ್ಚಬೇಕು. ಹಿಂದಿನಿಂದಲೂ ಕಾಂಗ್ರೆಸ್ ಪಕ್ಷವು ಬಿಜೆಪಿ ಯನ್ನು ರಾಜಕೀಯವಾಗಿ ಎದುರಿಸಿ ಮೇಲುಗೈ ಸಾಧಿಸಲು ಸಾಧ್ಯವಾಗಿಯೇ ಇಲ್ಲ. ಸತತ ಸೋಲಿನ ಬಗ್ಗೆ ಆ ಪಕ್ಷ ತಲೆಕೆಡಿಸಿಕೊಂಡಿಲ್ಲ. ಆಡಳಿತ ಪಕ್ಷದ ವಿರುದ್ಧ ಇಷ್ಟೊಂದು ಅಗಾಧ ಅತೃಪ್ತಿ, ಆಕ್ರೋಶವನ್ನು ಜನತೆ ಹೊಂದಿದ್ದರೂ ಅದನ್ನು ರಾಜಕೀಯವಾಗಿ ಬಳಸಿಕೊಳ್ಳಲು ಅದಕ್ಕೆ ಸಾಧ್ಯವಾಗದೇ ಇರುವುದು ಅದು ತಲುಪಿರುವ ಪ್ರಪಾತವನ್ನು ತೋರಿಸುತ್ತದೆ. ಒಂದೆಡೆ ಇವರದ್ದೇ ನೇತೃತ್ವದ ಕೇಂದ್ರ ಸರ್ಕಾರ ನಿತ್ಯವೂ ಬೆಲೆ ಏರಿಕೆ, ಸುಲಭ ದರದಲ್ಲಿ ಅಗತ್ಯವಸ್ತುಗಳ ಅಲಭ್ಯತೆ, ನಿರುದ್ಯೋಗ, ಹೆಚ್ಚಳ- ಭಾರೀ ಭ್ರಷ್ಟಾಚಾರದ ಹಗರಣಗಳಲ್ಲಿ ಮುಳುಗಿರುವಾಗ ಜನ ಕಾಂಗ್ರೆಸ್‌ನ್ನು ನೆಚ್ಚುವುದಾದರೂ ಹೇಗೆ? ಅದರಲ್ಲೂ ರಾಜ್ಯದಲ್ಲಿ ಕಾಂಗ್ರೆಸ್ ರಾಜಕೀಯವಾಗಿ, ವಿಧಾನ ಸಭೆಯಲ್ಲಿಯೂ ನಿಷ್ಕ್ರಿಯವಾಗಿದೆ. ಭಿನ್ನಮತ, ಅಧಿಕಾರರೂಢ ರೊಂದಿಗೆ ಶಾಮೀಲು ತನಕ್ಕೂ ಎಳಸಿದೆ. ವಿರೋಧ ಪಕ್ಷಗಳ ಇಂತಹ ದೌರ್ಬಲ್ಯಗಳೇ ಬಿಜೆಪಿಗೆ ವರದಾನವಾಗುತ್ತಿದೆ. ಏನೂ ಮಾಡದೇ ಕೇವಲ ಬಿಜೆಪಿ ವಿರುದ್ಧದ ಅತೃಪ್ತಿಯನ್ನೇ ತಾನು ಬಳಸಿಕೊಂಡು ಬೆಳೆಯ ಬಹುದೆಂಬ ಭ್ರಮೆಯಲ್ಲಿ ಅದು ಮುಳುವಾಗಿದೆ. ಹೀಗಾಗಿಯೇ ಕೊಪ್ಪಳ ದಲ್ಲಿ ಸೋಲಬೇಕಾದದ್ದು ಕೇವಲ ಬಿಜೆಪಿ ಮಾತ್ರವಾಗಿರಲಿಲ್ಲ,ಕಾಂಗ್ರೆಸ್ ಸಹ.

ನಿಶ್ಯಕ್ತಿ

ಹಾಗೆಯೇ ಜೆಡಿ(ಎಸ್), ತನ್ನ ಹಿಂದಿನ ಸ್ಥಾನ ಉಳಿಸಿಕೊಳ್ಳಲಾಗದೇ ಇರುವುದು ಅದರ ಸಂಘಟನಾ ರಾಜಕೀಯ ನಿಶಕ್ತಿಯನ್ನು ತೋರಿಸುತ್ತದೆ. ಈ ಅವಧಿಯಲ್ಲಿ ಹಲವಾರು ಹಗರಣಗಳನ್ನು ಹೊರತಂದು ಬಿಜೆಪಿಗೆ ವಿರೋಧಪಕ್ಷವಾಗಿ ಕೆಲಸ ಮಾಡಿದ ಹಲವು ಪ್ರಯತ್ನಗಳಿದ್ದಾಗ್ಯೂ ಅದನ್ನು ಜನರೆಡೆಗೆ ರಾಜಕೀಯ ಆಂದೋಲನವಾಗಿ ಕೊಂಡೊಯ್ಯದ ನಿಷ್ಕ್ರಿಯತೆ, ವಿಶ್ವಾಸಾರ್ಹತೆ ಬಗೆಗೂ ಅದು ವಿಮರ್ಶಿಸಿ ಕೊಳ್ಳಬೇಕು. ಹಾಗೆ ನೋಡಿದರೆ ಜೆಡಿ(ಎಸ್)ಗೆ ಆ ಭಾಗದಲ್ಲಿ ಸಂಘಟನಾತ್ಮಕವಾಗಿ ಅಷ್ಟು ಬಲವಿಲ್ಲ. ಈ ಎಲ್ಲದರಿಂದಲೂ ಮೂರನೇ ಸ್ಥಾನಕ್ಕೆ ನಿಂತಿದೆ.

ಪಾಠ

ಇಷ್ಟೆಲ್ಲವುಗಳ ನಡುವೆ ಈ ಉಪಚುನಾವಣೆ ಫಲಿತಾಂಶ ಭಾರೀ ಪ್ರಮುಖ, ಪರಿಣಾಮಕಾರಿ ಎಂದೇನೂ ಅಲ್ಲ. ಅದಾಗ್ಯೂ ಕೆಲವು ಸ್ಪಷ್ಟ ಸಂದೇಶಗಳನ್ನು ರಾಜಕೀಯಪಕ್ಷಗಳಿಗೆ ಜ ನೀಡಿದ್ದಾರೆ. ಅದರಿಂದ ಪಾಠ ಕಲಿಯಬೇಕಾ

ಇನ್ನೊಂದೆಡೆ ಈ ಬೆಳವಣಿಗೆಯಿಂದ ತ ಅಕ್ರಮ-ಅವ್ಯವಹಾರ, ದುರಾಡಳಿತವನ್ನು ಬಿ ಮುಚ್ಚಿಕೊಳ್ಳಲು/ ಸಮರ್ಥಿಸಿಕೊಳ್ಳ ಯತ್ನಿಸಬಹುದು. ಆದರೆ ಅದು ಮ ಬೆತ್ತಲಾಗಿದೆಯೆಂದರೆ ಮಾನ ಮುಚ್ಚಿಕೊಳ ಇದಷ್ಟೇ ಸಾಲದು. ಮತ್ತೆ ಜನ ಅದಕ್ಕಾಗಿ ನೀಡಿಲ್ಲ ಕೂಡ. ಆದ್ದರಿಂದ ಎಲ್ಲವನ ಬುಡಮೇಲು ಮಾಡುವ ಬಿಜೆಪಿ ದುರಾಡಳಿತದ ವಿರುದ್ಧದ ಹೋರಾಟ ಇನ್ ತೀವ್ರ ನಡೆಯಬೇಕು. ಅಲ್ಲಿಯ ಮತ ಪ್ರಮ ಗಮನಿಸಿದರೆ ಜನರಿಗೆ ಸೆಕ್ಯುಲರ್ ಶಕ್ತಿಗಳತ್ತ ಹೆಚ್ಚು ಒಲವಿದೆ. ಎಂಬುದನ್ನು ಗಮನಿಸ ಈ ನೆಲೆಯಲ್ಲ ನಡೆವ ರಾಜಕೀ ಆಂದೋಲನವೊಂದೇ ಪರ್ಯಾಯ ತರ ಸಾಧ್ಯ.

ರಾಜ್ಯ ಬಿಜೆಪಿ ಸರ್ಕಾರದ ಸಚಿವರು, ಸರ್ಕಾರ ನಡೆಸುವವರು ಬಹುರಾಷ್ಟ್ರೀಯ ಕಂಪನಿಯ ಜೊತೆ ಶಾಮೀಲಾಗಿದ್ದಾರೆ. ತಮ್ಮ ಸಮಸ್ಯೆಗಳ ಕುರಿತು ಕಾನೂನು ಚೌಕಟ್ಟಿನಲ್ಲಿ ಬೇಡಿಕೆ ಮುಂದಿಟ್ಟಿದ್ದೆ ತಪ್ಪು ಎಂಬ ಧೋರಣೆ ತೋರುತ್ತಿರುವ ಮಾಲೀಕ ವರ್ಗದ ಧೋರಣೆ ವಿರುದ್ಧ ಕಾರ್ಮಿಕರ ಹೋರಾಟ ಸಾಗಿದೆ.

ಬೇಡಿಕೆ ಪಟ್ಟಿ ಸಲ್ಲಿಸಿದ್ದೆ ಅಪರಾಧ : ಬಹುರಾಷ್ಟ್ರೀಯ ಕಂಪನಿ 'ವೋಲ್ವೋ' ಧೋರಣೆ

ದಯಾನಂದ



ಆಡಳಿತ ವರ್ಗವು ಕಾರ್ಮಿಕರ ನ್ಯಾಯಯುತ ಬೇಡಿಕೆಗಳ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದು ಸಲ್ಲಿಸಿದ 'ಬೇಡಿಕೆ ಪಟ್ಟಿ (Charter of Demand)'ಯ ಬಗ್ಗೆ ಸೂಕ್ತ ಮಾತುಕತೆ ನಡೆಸಿ ನಿರ್ಧಾರಕ್ಕೆ ಬರುವಲ್ಲಿ ಆಡಳಿತ ಮಂಡಳಿ ವಹಿಸಿದ ಕಾರ್ಮಿಕ ವಿರೋಧಿ ನೀತಿಯ ಪರಿಣಾಮದಿಂದಾಗಿ ಪ್ರತಿಷ್ಠಿತ ವೋಲ್ವೋ ಕಾರ್ಖಾನೆಯ ನೂರಾರು ಕಾರ್ಮಿಕರು ಇದೀಗ ಅನಿರ್ದಿಷ್ಟ ಮುಷ್ಕರದ ಹಾದಿ ತುಳಿದಿದ್ದಾರೆ.

ಬೆಂಗಳೂರಿನ ಸಮೀಪದ ಹೊಸಕೋಟೆಯ ಬಳಿ ಸ್ವೀಡನ್ ಮೂಲದ ಪ್ರತಿಷ್ಠಿತ ವೋಲ್ವೋ (Volvo) ಕಂಪನಿಯು 'ಬಸ್ ತಯಾರಿಕಾ ಘಟಕವನ್ನು' ಹಲವು ವರ್ಷಗಳ ಹಿಂದೆ ಸ್ಥಾಪಿಸಿದೆ. ಇದರಲ್ಲಿ ಸುಮಾರು 400ಕ್ಕಿಂತಲೂ ಹೆಚ್ಚಿನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಬೇಡಿಕೆ ಪಟ್ಟಿ ಸಲ್ಲಿಸಿದ್ದೆ ತಪ್ಪಾಯ್ತು!

ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಇಲ್ಲಿನ ಕಾರ್ಮಿಕರು ತಮ್ಮ ಹಲವು ದಿನದ ಸಮಸ್ಯೆಗಳ ಪರಿಹಾರಕ್ಕೆ ತಮ್ಮದೇ ಆದ ಕಾರ್ಮಿಕ ಸಂಘವನ್ನು ಕಾನೂನುಬದ್ಧವಾಗಿಯೇ ಸ್ಥಾಪಿಸಿಕೊಂಡು ಅಗತ್ಯವಿದ್ದಾಗಲೆಲ್ಲಾ ಸಿಐಟಿಯು ಮುಖಂಡರ ಸಹಾಯ ಪಡೆಯುತ್ತಿದ್ದರು.

ಅದರಂತೆ 2010ರ ಜನವರಿ 25ರಂದು ವೋಲ್ವೋ ಕಾರ್ಮಿಕ ಸಂಘವು ಆಡಳಿತ ವರ್ಗದ ಮುಂದೆ ಬೇಡಿಕೆ ಪಟ್ಟಿಯನ್ನು ಸಲ್ಲಿಸಿತ್ತು. ಆದರೆ ಮಂಡಳಿಯು ಈ ಬಗ್ಗೆ ಕ್ರಮ ವಹಿಸಲಿಲ್ಲ. ಬದಲಾಗಿ ಕಾಟಾಚಾರಕ್ಕೆಂಬಂತೆ ಮುಖಂಡರೊಂದಿಗೆ ಮಾತುಕತೆ ನಡೆಸಿತು. ಇದರಿಂದಾಗಿ ಬೇಡಿಕೆ ಸಲ್ಲಿಸಿ 3 ತಿಂಗಳಾದರೂ ಕಾರ್ಮಿಕರಿಗೆ ಯಾವುದೇ ಪ್ರಯೋಜನವಾಗಲಿಲ್ಲ.

ಸಂಘದ ಮುಖಂಡರ ಅಮಾನತು

ಕಾರ್ಮಿಕರು ನೀಡಿದ ಬೇಡಿಕೆಗಳ ಬಗ್ಗೆ ಯಾವುದೇ ಕ್ರಮವಹಿಸದ ಆಡಳಿತ ವರ್ಗ, ಬದಲಾಗಿ ಕಾರ್ಮಿಕರ ಮೇಲೆ ಅನಗತ್ಯ ಕಿರುಕುಳ ಆರಂಭಿಸಿತು. ಕೆಲಸಕ್ಕೆ ಕಾರ್ಮಿಕರನ್ನು ಕರೆ ತರುವ ಬಸ್‌ಗಳನ್ನು ನಿಗದಿತ ವೇಳೆಗಿಂತ ಮುಂಚೆಯೇ ಓಡಿಸುವುದು. ಕಾರ್ಮಿಕರಿಗೆ ಸಾರಿಗೆ ಕೊರತೆ ಉಂಟಾಗುವಂತೆ ಮಾಡುವುದು. ವರ್ಕ್‌ಶಾಪ್‌ಗಳಲ್ಲಿ ಅಗತ್ಯ ಸೌಲಭ್ಯಗಳನ್ನು ನೀಡದೇ ಸತಾಯಿಸುವುದು. ಇತ್ಯಾದಿ ಅನಾವಶ್ಯಕ ಸಮಸ್ಯೆಗಳನ್ನು ಸೃಷ್ಟಿಸಿದರು.

ಆದರೆ ಇದನ್ನು ಪ್ರಶ್ನೆ ಮಾಡಿದ ಮುಖಂಡರನ್ನು ಟಾರ್ಗೆಟ್ ಮಾಡಲಾಯಿತು ಮತ್ತು ಆಡಳಿತ ವರ್ಗದವರ ಮೇಲೆ ಹಲ್ಲೆ ನಡೆಸಿದರು ಎಂಬ ಸುಳ್ಳು ಪ್ರಚಾರ ನಡೆಸಿ ಕಾರ್ಮಿಕ ಸಂಘದ ಇಬ್ಬರು ಮುಖಂಡರನ್ನು ಕೆಲಸದಿಂದ ಅಮಾನತು ಮಾಡಲಾಯಿತು. ಆದರೆ ಕಾರ್ಮಿಕರು ಹಲ್ಲೆ ನಡೆಸಿದ್ದಾರೆ ಎನ್ನುವುದಕ್ಕೆ ಅವರ ಹತ್ತಿರ ಯಾವೊಂದು ಸಾಕ್ಷ್ಯಾಧಾರಗಳು ಇಲ್ಲ. ಕೇವಲ ಯೂನಿಯನ್ ರಚಿಸಿದ್ದಕ್ಕೆ ಮಾತ್ರವೇ ಆಡಳಿತವರ್ಗ ಈ ರೀತಿಯ ಪ್ರತಿಕಾರ ತೀರಿಸಿಕೊಂಡಿತ್ತು.

ಮುಷ್ಕರದ ನೋಟೀಸ್:

ಆಡಳಿತ ವರ್ಗದ ಈ ಕಾರ್ಮಿಕ ವಿರೋಧಿ ನೀತಿಯಿಂದಾಗಿ ಸಿಟ್ಟಿಗೆದ್ದ ಕಾರ್ಮಿಕರು, ಅಮಾನತಾಗಿರುವ ಕಾರ್ಮಿಕರು ಪುನಃ ಕೆಲಸಕ್ಕೆ ಬರಬೇಕು ಮತ್ತು ವೇತನ ಹೆಚ್ಚಳ, ಇತ್ಯಾದಿ ಬೇಡಿಕೆಗಳ ಬಗ್ಗೆ ಕೂಡಲೇ ತೀರ್ಮಾನ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸರ್ವ ಸದಸ್ಯರ ಸಭೆಯನ್ನು ನಡೆಸಿದರು. ಮತ್ತು ಮುಷ್ಕರದ ನೋಟೀಸ್ ನೀಡಿ ಜುಲೈ 2010ರಂದು ಹೋರಾಟ ಆರಂಭಿಸಿದರು. ಹೋರಾಟ ಸುಮಾರು 14 ದಿನಗಳವರೆಗೆ ಮುಂದುವರೆಯಿತು. ಈ ಹೋರಾಟದ ಫಲವಾಗಿ ಸ್ವಲ್ಪಮಟ್ಟಿನ ವೇತನ ಹೆಚ್ಚಳ ಮತ್ತಿತರೆ ಬೇಡಿಕೆಗಳ ಈಡೇರಿಕೆ ಬಗ್ಗೆ ಆಡಳಿತ ವರ್ಗ ಒಪ್ಪಂದಕ್ಕೆ ಬಂದಿತು. ಆದರೆ ಅಮಾನತಾದ ಮುಖಂಡರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಬಗ್ಗೆ ತೀರ್ಮಾನವನ್ನು ಹಾಗೆ ಮುಂದೂಡಿತು. ಆದಾಗ್ಯೂ ಕಾರ್ಮಿಕರು ಸಂಘದಲ್ಲಿ ಚರ್ಚಿಸಿ ಕೆಲಸಕ್ಕೆ ಹಿಂತಿರುಗಿದರು.

ವಿಚಾರಣೆ ನಾಟಕ:

ಅತ್ತ ಕಾರ್ಮಿಕರು ಕೆಲಸಕ್ಕೆ ಹೋಗುತ್ತಿದ್ದಂತೆ ಇತ್ತ ಆಡಳಿತ ವರ್ಗ ಅಮಾನತುಗೊಂಡಿರುವ ಮುಖಂಡರುಗಳ ಬಗ್ಗೆ ವಿಚಾರಣೆ ಎಂಬ ನಾಟಕ ಆರಂಭಿಸಿತು. ಸಾಲದೆಂಬಂತೆ ಕಾರ್ಮಿಕರು ನಿಗದಿತ ರೀತಿಯಲ್ಲಿ ಉತ್ಪಾದನೆಯಲ್ಲಿ ತೊಡಗಿದ್ದರೂ ಕೂಡಾ, ಕಚ್ಚಾ ಮಾಲಿನ ಕೊರತೆ, ಮತ್ತು ಕೆಲಸಗಾರರ ಕೊರತೆಯಿಂದಾಗಿ ನಿಗದಿತ ಉತ್ಪಾದನಾ ಗುರಿ ತಲುಪಲಿಲ್ಲ. ಆದರೆ ಇದನ್ನು ಕಾರ್ಮಿಕರ ಮೇಲೆ ಗೂಬೆ ಕೂರಿಸುವ ವ್ಯವಸ್ಥಿತ ಪಿತೂರಿಯನ್ನು ಆರಂಭಿಸಿತು. ಅನವಶ್ಯಕ ಕಿರುಕುಳ, ಎಚ್ಚರಿಕೆ ನೋಟೀಸ್ ನೀಡುವುದು, ಶೋಕಾಸ್ ನೋಟೀಸ್ ನೀಡುವುದು, ಪ್ರೊಬೆಷನರಿ ಮುಗಿದವರಿಗೆ ಖಾಯಂ ಕೆಲಸ ನೀಡದೆ ಸತಾಯಿಸುವುದು ಇತ್ಯಾದಿ ನಡದೇ ಇತ್ತು.



ಆಡಳಿತ ವರ್ಗದ ಈ ಎಲ್ಲಾ ಕಿರುಕುಳ-ದೌರ್ಜನ್ಯಗಳನ್ನು ಹಿಮ್ಮೆಟ್ಟಿಸಲು ಕಾರ್ಮಿಕರು 2011, ಆಗಸ್ಟ್ 2 ರಿಂದ ಪುನಃ ಮುಷ್ಕರದ ನೋಟೀಸ್ ನೀಡಿ ಹೋರಾಟದ ಹಾದಿ ತುಳಿದಿದ್ದಾರೆ.

ಇದೇ ಅವಧಿಯಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಎದುರು ಹಲವು ಸುತ್ತಿನ ಸಂಧಾನ ಸಭೆಗಳು ನಡೆದಿವೆ. ಹೊಸಕೋಟೆ ತಾಲೂಕು ತಹಶಿಲ್ದಾರ್‌ರವರಿಗೆ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಇದಲ್ಲದೆ ಕಾರ್ಮಿಕ ಸಚಿವರಾದ ಬಚ್ಚೇಗೌಡರನ್ನು ಭೇಟಿ ಆಗಿ ಮಧ್ಯಪ್ರವೇಶಿಸಲು ವಿನಂತಿಸಲಾಗಿದೆ. ಆದರೆ ಕಾರ್ಮಿಕ ಸಚಿವರು ಕಾರ್ಮಿಕರ ಪರವಾಗಿ ಕೆಲಸ ಮಾಡದೆ ಮಾಲೀಕರ ಏಜೆಂಟರಂತೆ ವರ್ತಿಸುತ್ತಿದ್ದಾರೆ.

ಅಮಾನತುಗೊಂಡವರ ವಜಾ!

ಕಾರ್ಮಿಕರು ಈ ರೀತಿ ಮುಷ್ಕರ ಆರಂಭಿಸುತ್ತಿದ್ದಂತೆ ಒಂದು ಕಡೆ ಸಂಧಾನ ಮಾತುಕತೆ ನಡೆಸುವ ನಾಟಕ ಮಾಡುತ್ತಾ ಮತ್ತೊಂದು ಕಡೆ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿ ಮಾಡುತ್ತಲೇ ಇದೆ. ಕಳೆದ ಒಂದು ವರ್ಷದಿಂದ ಅಮಾನತ್ತಿನಲ್ಲಿದ್ದ ಕಾರ್ಮಿಕ ಮುಖಂಡರನ್ನು ಈ ಮುಷ್ಕರ ಆರಂಭವಾದ ಮೇಲೆ 'ವಜಾ' ಮಾಡಿದೆ.

ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿರುವ ವೋಲ್ವೋ ಆಡಳಿತ ವರ್ಗದ ವಿರುದ್ಧ ಕಾರ್ಮಿಕರು ಸೆಪ್ಟೆಂಬರ್ 12ರಿಂದ ಸರದಿ ಉಪವಾಸ ಸತ್ಯಾಗ್ರಹ ನಡೆಸಿದರು. ನಂತರ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಈ ಬಗ್ಗೆ ಪ್ರಚಾರ ಸಭೆಗಳನ್ನು ನಡೆಸಿದರು. ನಂತರ ಸೆಪ್ಟೆಂಬರ್ 16ರಂದು ಮುಖ್ಯಮಂತ್ರಿ ಮನೆ ಎದುರು ಪ್ರತಿಭಟನೆ ನಡೆಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಆದರೆ ಆಳುವ ಸರ್ಕಾರ – ಶಾಸಕರು- ಸಚಿವರು ಬಹು ರಾಷ್ಟ್ರೀಯ ಕಂಪನಿಯಾದ ವೋಲ್ವೋ ಆಡಳಿತ ವರ್ಗದೊಂದಿಗೆ ಶಾಮೀಲಾಗಿ ಕಾರ್ಮಿಕರಿಗೆ ದ್ರೋಹ ಬಗೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 22ರಿಂದ ಕಾರ್ಮಿಕರು ಅನಿರ್ದಿಷ್ಟ ಆಮರಣಾಂತ ಸತ್ಯಾಗ್ರಹ ಆರಂಭಿಸಿದ್ದಾರೆ. ಹೀಗಾಗಿ ವೋಲ್ವೋ ಕಾರ್ಮಿಕರ ಈ ಚಳುವಳಿಗೆ ರಾಜ್ಯದ ಇತರೆ ಕಾರ್ಮಿಕರ ಸೌಹಾರ್ದ ಬೆಂಬಲ ಅಗತ್ಯವಿದೆ.



ಭಗತ್‌ಸಿಂಗ್ ಜನ್ಮದಿನಾಚರಣೆ

ಹುತಾತ್ಮರ ಸ್ಮರಣೆ – ನೂರಾರು ಯುವಜನರಿಂದ ರಕ್ತದಾನ

ಅಪ್ರತಿಮ ದೇಶಭಕ್ತ ಶಹೀದ್ ಭಗತ್‌ಸಿಂಗ್ ರವರ 105ನೇ ಜನ್ಮದಿನಾರಣೆ ಅಂಗವಾಗಿ ಸೆಪ್ಟಂಬರ್ 25ರಂದು ಬೆಂಗಳೂರಿನ ಆರ್.ಪಿ.ಸಿ. ಬಡಾವಣೆಯ ಸೇಂಟ್ ಜಾನ್ಸ್ ಪ್ರೌಢಶಾಲೆಯಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 100 ಕ್ಕೂ ಹೆಚ್ಚು ರಕ್ತದಾನ ಮಾಡುವ ಮೂಲಕ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮವನ್ನು ಭಗತ್‌ಸಿಂಗ್ ರಕ್ತದಾನಿಗಳ ಕ್ಲಬ್ ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ.) ಸಂಘಟನೆಗಳು ಆಯೋಜಿಸಿದ್ದವು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಜಾವಾಣಿ ಪತ್ರಿಕೆ ಸಹಾಯಕ ಸಂಪಾದಕರಾದ ಡಾ॥ಆರ್.ಪೂರ್ಣಿಮಾ ಭಗತ್‌ಸಿಂಗ್ ರವರ ಮೌಲ್ಯಗಳನ್ನು ಇಂದಿನ ಯುವಜನತೆ ತಮ್ಮಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ದನಿ ಎತ್ತಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಪ್ರಗತಿಪರ ಚಿಂತಕ ಡಾ॥ ಜಿ.ರಾಮಕೃಷ್ಣ ಮಾತನಾಡಿ ಅಪ್ರತಿಮ ದೇಶ ಪ್ರೇಮಿ ಭಗತ್‌ಸಿಂಗ್‌ನನ್ನು ಮತೀಯಗೊಳಿಸುವ ಹುನ್ನಾರ ನಡೆಯುತ್ತಿದೆ. ಭಗತ್‌ಸಿಂಗ್ ಧರ್ಮ ಸಹಿಷ್ಣು ಭಾವನೆಯೊಂದಿಗೆ ಅಪ್ರತಿಮ ದೇಶಭಕ್ತನಾಗಿದ್ದ ಎಂದು ಹೇಳಿದರು. ಬದುಕಿದ್ದು ಕೇವಲ 23 ವರ್ಷವಾದರೂ ಬೌದ್ಧಿಕವಾಗಿ ಬೆಳೆದು ನಿಂತ ಭಗತ್‌ಸಿಂಗ್ ಸಮಾಜವಾದಿ ಧೋರಣೆಯಿಂದಿಗೆ, ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ಸಂಕೋಲೆಗಳಿಂದ ಬಿಡುಗಡೆಯಾಗುವಾಗಲೇ ದೇಶೀಯ ಭೂಮಾಲೀಕ ಪಾಳೇಗಾರಿ ಸಂಕೋಲೆಗಳಿಂದಲೂ ಜನತೆ ಬಿಡುಗಡೆ ಹೊಂದಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಪಾಲು ಎಂಬ ತತ್ವದಡಿಯಲ್ಲಿ ಮತ್ತು ಭ್ರಾತೃತ್ವದಲ್ಲಿ ಬದುಕಬೇಕೆಂಬ ಆಶಯದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಹೊಸ ದಿಕ್ಕನ್ನು ತೋರಿಸಿದ ಮಾಹಾನ್ ಚೇತನ. ಇಂತಹ ಅಪ್ರತಿಮ ದೇಶಭಕ್ತನ ಸ್ಮರಣೆ ಮಾಡುವುದು ನಮ್ಮ ಕರ್ತವ್ಯನಾಗಬೇಕು. ಭಗತ್‌ಸಿಂಗ್‌ರವರ ಆದರ್ಶಗಳನ್ನು ಮೈಗೂಡಿಸಿಕೊಂಡು ಅವರ ಹಾದಿಯಲ್ಲಿ ಯುವಜನರು ಮುನ್ನಡೆಯಬೇಕೆಂದು ಕರೆ ನೀಡಿದರು.



ವೇದಿಕೆಯಲ್ಲಿ ಭರತ್ ರಾಜ್, ಉದ್ಘಾಟಿಸಿದ ಡಾ. ಆರ್.ಪೂರ್ಣಿಮಾ, ಡಾ.ಜಿ.ಆರ್., ಶ್ರೀ ತಿಮ್ಮೇಗೌಡ, ಡಾ. ಬಿ.ಜಿ.ತಿಲಕ್, ರಾಜಶೇಖರಮೂರ್ತಿ



ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿಯಾದ ಬಿ.ರಾಜಶೇಖರಮೂರ್ತಿ ಮಾತಾನಾಡಿ ಭಗತ್‌ಸಿಂಗ್ ರವರ ಅಶಯುವನ್ನು ಈಡೇರಿಸುವುದೆಂದರೆ, ಕಾನೂನು ಬದ್ಧವಾಗಿಯೇ ಭ್ರಷ್ಟಾಚಾರ ವೆಸಗುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳ, ಖಾಸಗೀ ಆಸ್ಪತ್ರೆಗಳ, ಡೊನೇಷನ್ ಹಾವಳಿಗಳ ವಿರುದ್ಧ, ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯ ನೀತಿಗಳ ವಿರುದ್ಧ ಯುವಜನ ಚಳುವಳಿಗೆ ಇಳಿಯುವುದು. ಜನಸಾಮಾನ್ಯರ ಸಂಕಷ್ಟಗಳಿಗೆ ಕಾರಣವಾಗಿರುವ ದೇಶಿ–ವಿದೇಶಿ ಲಾಭಕೋರ ಕಾರ್ಪೋರೇಟ್ ಕಂಪನಿಗಳ ಲಾಭಕ್ಕಾಗಿಯೇ ಇರುವ ರಾಜಕೀಯ–ಆರ್ಥಿಕ ನೀತಿಗಳ ಅಮೂಲಾಗ್ರ ಬದಲಾವಣೆಗೆ ತ್ಯಾಗ ಮನೋಭಾವದಿಂದ ನಮ್ಮನ್ನು ನಾವು ತೊಡಗಿಸಿಕೊಂಡರೇ ಮಾತ್ರ ಭಗತ್‌ಸಿಂಗ್‌ರವರ ಆಶಯಕ್ಕೆ ಪೂರಕವಾಗಿ ಹೆಜ್ಜೆ ಇಟ್ಟಾಂತಾಗುತ್ತದೆ. ಈ ದಿಸೆಯಲ್ಲಿ ಮುಂದಾಗು ವುದು ನಮ್ಮ ಕರ್ತವ್ಯ ವಾಗಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಐ.ಎ.ಎಸ್. ಅಧಿಕಾರಿ ಮತ್ತು ಮೂರನೇ ಹಣಕಾಸು ಆಯೋಗದ ಸದಸ್ಯರಾದ ಶ್ರೀ ತಿಮ್ಮೆಗೌಡರವರು ವಹಿಸಿದ್ದು, ಅತಿಥಿಗಳಾಗಿ ವಿಕ್ಟೋರಿಯಾ ಆಸ್ಪತ್ರೆ ಅಧೀಕ್ಷಕ ಬಿ.ಜಿ.ತಿಲಕ್, ಡಿವೈಎಫ್‌ಐ. ರಾಜ್ಯಾಧ್ಯಕ್ಷರಾದ ಎನ್.ಎಲ್.ಭರತರಾಜ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ, ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಪಿ.ನಾಗರಾಜ್ ಸಭೆಯಲ್ಲಿ ಉಪಸ್ಥಿತರಿದ್ದರು.

ರಾಜೇಅರಸ್ ಕಾರ್ಯಕ್ರಮ ನಿರೂಪಿಸಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಲಿಂಗರಾಜು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ॥ಸೋಮಶೇಖರ್ ಸ್ವಾಗತಿಸಿ ಜೈಪ್ರಸನ್ನ ವಂದಿಸಿದರು.



ಚುಟುಕು

ಎಡಪಂಥ ಅಲ್ಲ!

ಎಲ್ಲರೂ ಉಣ್ಣಲಿಕೆ ಇದೇನು ಗೊತ್ತೆ,
ಎಡಪಂಥ ಆಡಳಿತ ಅಲ್ಲವೋ ಮತ್ತೆ
ಉಣ್ಣಲೇ ಬೇಕೆಂದು ಬಡ ಜನರು ಎಲ್ಲ
ಈ ನಮ್ಮ ದೇಶದೊಳು ಕಾನೂನು ಇಲ್ಲ

★

ಎಡಪಂಥ

ಎಡಪಂಥೀಯರ ಬಿಟ್ಟು ಉಳಿದವರ ಒಲವು
ಸುಳ್ಳಾಡಿ ವಂಚಿಸುವ ಉಳ್ಳವರ ಪರವು
ಇಷ್ಟೊಂದು ವರುಷಗಳು ಕಂಡರೂ ಕೂಡ
ನಿಜವನ್ನು ತಿಳಿಯದೇ ಜಾರುತಿಹ ಮೂಢ

★

ನಿಜವಾದ ಶಿಕ್ಷಣ

ಮನದ ಕತ್ತಲೆ ಕಳೆದು ಮಡವಿಳಿಸಿ ಮತ್ತೆ
ಪದಗೊಳಿಸಿ ಮುದಗೊಳಿಸಬೇಕಿಹುದು
ಗೊತ್ತೆ?
ಇವು ನೋಡಿ ನಿಜವಾದ ಶಿಕ್ಷಣದ ರೀತಿ
ಈ ಜನಕೆ ಇದು ಬೇಡ ಬೇಕಿಹುದು ಕೋತಿ

★

ನಮ್ಮ ಇತಿಹಾಸ

ಭಾರತದ ಇತಿಹಾಸ ಬಲ್ಲವನೆ ಕೇಳಿ
ಬಾಳಿದ್ದದು ಉಂಟೇನು ಐಕ್ಯತೆಯ ತಾಳಿ?
ಪ್ರತಿಯೊಂದು ವಿದೇಶಿ ಆಕ್ರಮಣ ಕೂಡ
ನಡೆದಾಗ ಇತ್ತಯ್ಯ ನಮ್ಮ ಕೈವಾಡ

- ವಿಡಂಬಾರಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH